
ಸಂಪುಟ 23 ಸಂಚಿಕೆ 42-43
ಅಕ್ಟೋಬರ್ 28, 2001 ಬೆಲೆ ರೂ. 3.00

ಪೆಕ್ಷರರಗ

ದುಡಿವ ಜನರ ಪ್ರಾಣಮಿತ್ರ

ಉತ್ತರ ಕರ್ನಾಟಕದ ಅಭಿವೃದ್ಧಿ ಎತ್ತ - ಹೇಗೆ?



ಕೃಷ್ಣ ಸರ್ಕಾರದ ಎರಡು ವರುಷಗಳು



ನೀರಾ ಚಳುವಳಿಗಾರರ ನೆತ್ತರು ನೆಕ್ಕಿದವರು

ಯುದ್ಧ ಸ್ಫೋಟ - ನಾಗರೀಕರ ಮಾರಣಹೋಮ





ಸಿನಿಮಾ 'ಚಾಂದಿನಿ ಬಾರ್'

ಡಾರ್ಜಿಲಿಂಗ್ ಗುಡ್ಡಗಾಡು ಮಂಡಳಿ ರಚನೆ

ಬಯಲಾದ ಭೋಪಾರ್ಸ್ ಹಗರಣ, ಸಚಿವ ಅರುಣಸಿಂಗ್ ರಾಜಿನಾನೆ, ಕೇಂದ್ರ ಸರ್ಕಾರದ ರಾಜಿನಾಮೆಗೆ ಒತ್ತಾಯ, ಉಗ್ರಗೊಂಡ ಗೂರ್ಖಾಲ್ಯಾಂಡ್ ಚಳುಳಿ, ಗುಡ್ಡಗಾಡು ಮಂಡಳಿ ರಚನೆ, ಈ ಸಂಚಿಕೆಯಲ್ಲಿ ಭಯೋತ್ಪಾದನೆಗೆ ಸಿಪಿಐ(ಎಂ) ಕಾರ್ಯಕರ್ತರ ಬಲಿ, 108ನೇ ಪಾಳಿ ಸಂಗಾತಿಗಳ ಬಲಿ, 1987 ರಲ್ಲಿ ತ್ರಿಪಕ್ಷೀಯ ಒಪ್ಪಂದ, ಡಾರ್ಜಿಲಿಂಗ್ ಗುಡ್ಡಗಾಡು ಮಂಡಳಿ ರಚನೆ, ತ್ರಿಪುರ ಇಡೀ ರಾಜ್ಯ 'ಗಲಭೆ ಪ್ರದೇಶ' ಎಂದು ಘೋಷಣೆ. ಚುನಾಣೆ ಆಕ್ರಮಣ, ಜಯಶಾಲಿ ಅಭ್ಯರ್ಥಿ ಸೋಲು ಪ.ಬಂಗಾಳ 3ನೇ ಪಂಚಾಯತ್ ಚುನಾವಣೆ, ಹೆಚ್ಚಿದ ವಿಶ್ವಬ್ಯಾಂಕ್ ಮೇಲಿನ ಅವಲಂಬನೆ, ವ್ಯಾಪಕ ಚಳುವಳಿ 5 ಲಕ್ಷಕ್ಕೂ ಹೆಚ್ಚು ಬಂಧನ, ಈ ಬಗ್ಗೆ ಓದಿ

1977 ಮತ್ತು 1981ರಲ್ಲಿ ಕಾಂಗ್ರೆಸ್ ಕೂಡ ವಿಧಾನಸಭೆಯಲ್ಲಿ ಈ ಬೇಡಿಕೆಯನ್ನು ಬೆಂಬಲಿಸಿತ್ತು. ಆದರೆ ಇದ್ದಕ್ಕಿದ್ದಂತೆ ಗೂರ್ಖಾಲ್ಯಾಂಡ್ ಬೇಡಿಕೆಯ ಹಿಂದೆ ನಮ್ಮ ಕೈವಾಡವಿದೆ ಎಂದು ಕಾಂಗ್ರೆಸ್ ಹೇಳತೊಡಗಿತು. ದೇಶದ ಏಕತೆಯನ್ನು ವಿರೋಧಿಸುವವರು ಯಾವಾಗಲೂ ನಮ್ಮ ಮೇಲೆ ಗುರಾಯಿಸುತ್ತಲೇ ಇರುತ್ತಾರೆ ಇದು ಹೊಸದೇನೂ ಅಲ್ಲ.

ಸರಕಾರಿ ಆಸ್ತಿ ಪಾಸ್ತಿ ಮೇಲೆ ಆಕ್ರಮಣ ನಡೆಸಲಾಯಿತು. ಬೆಟ್ಟ ಪ್ರದೇಶಗಳಲ್ಲಿ ಭಯೋತ್ಪಾದನೆಗೆ ಸಿಪಿಐ(ಎಂ) ಕಾರ್ಯಕರ್ತರು ಬಲಿಪಶುಗಳಾದರು. 'ಚಳುವಳಿಕಾರರು' ಕಾಂಗ್ರೆಸನ ವೈಮುಟ್ಟಲಿಲ್ಲ. ಆ ಹೊತ್ತಿಗೆ ಅದು ಎಲ್ಲ ತತ್ವಸಿದ್ಧಾಂತಗಳಿಗೆ ತಿಲಾಂಜಲಿ ನೀಡಿತ್ತು. ರಾಜೀವಗಾಂಧಿ ತುಂಬಾ ವಿಚಿತ್ರವಾಗಿ ವರ್ತಿಸಿದರು. ಅವರು ದೆಹಲಿಯಲ್ಲಿದ್ದಾಗ ಪ್ರಧಾನ ಮಂತ್ರಿಯಂತೆ ವರ್ತನೆ. ಬಂಗಾಳದಲ್ಲಿ ಕಾಲಿಡುತ್ತಲೇ ಕೇವಲ ಎಐಸಿಸಿ ಅಧ್ಯಕ್ಷರಂತೆ ವರ್ತನೆ.

ಆದರೆ ಸಿಪಿಐ(ಎಂ) ರಾಜಕೀಯ ಮಟ್ಟದಲ್ಲಿ ತನ್ನ ಪ್ರಚಾರಾಂದೋಲನವನ್ನು ಮುಂದುವರಿಸಿತು. 108 ನೇಪಾಳಿ ಸಂಗಾತಿಗಳು ಪ್ರಾಣಾರ್ಪಣೆ ಮಾಡಿದರು. ಪ್ರತ್ಯೇಕತಾವಾದಿ ನಾಯಕತ್ವ ಹಾಗೂ ಭಾವನಾತ್ಮಕ ಜನಸಮೂಹದ ಮಧ್ಯೆ ಸ್ಪಷ್ಟ ವ್ಯತ್ಯಾಸ ತೋರಿಸಬೇಕಿತ್ತು. ಸಿಪಿಐ(ಎಂ) ಯಶಸ್ವಿಯಾಗಿ ಆ ಗೆರೆಯನ್ನು ಎಳೆಯಿತು.

ನಾವು ನಿರಂತರವಾಗಿ ಪ್ರತಿಪಾದಿಸುತ್ತಿದ್ದ ಮಾತುಕತೆಗಳು ಆರಂಭವಾಗಬೇಕಿತ್ತು. ಸ್ವಭಾವತಃ ಸರಳ ಜೀವಿಗಳಾಗಿದ್ದ ಬೆಟ್ಟಪ್ರದೇಶದ ಜನರು ಹಿಂಸೆಯನ್ನು ಬಹುಕಾಲ ಸಹಿಸಿಕೊಳ್ಳುವುದಿಲ್ಲ ಎಂದು ಅರಿತ ಜಿಎನ್‌ಎಲ್‌ಎಫ್ ಮತ್ತು ಕಾಂಗ್ರೆಸ್ ಬೀದಿಗಿಳಿದು ಹಿಂಸೆ ನಡೆಸುವುದರಿಂದಷ್ಟೆ ಯಾವುದೇ ಉದ್ದೇಶ ಸಾಧನೆಯಾಗದು ಎಂದು ಮನವರಿಕೆ ಮಾಡಿಕೊಂಡವು.

1987 ಜನವರಿಯಲ್ಲಿ ಮಾತುಕತೆಗಳು ಆರಂಭವಾದವು. ಕೇಂದ್ರ ಸಚಿವ ಬೂಟಾಸಿಂಗ್‌ರನ್ನು ನಾನು ಕನಿಷ್ಠ 15 ಸಲ ಭೇಟಿಯಾದೆ. ಅವರು ಘೀಷಿಂಗ್ ಬಗ್ಗೆ ಮೆದು ನಿಲುವು ತಾಳಿದ್ದರು. ಆದರೆ ಪ್ರತ್ಯೇಕತಾವಾದಿ ಘೋಷಣೆಗಳ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವೇ ಇಲ್ಲ ಎಂಬುದು ನಮ್ಮ ದೃಢ ನಿಲುವಾಗಿತ್ತು. 1987 ಆಗಸ್ಟ್ 22 ರಂದು ತ್ರಿಪಕ್ಷೀಯ ಒಪ್ಪಂದವೊಂದಕ್ಕೆ ಸಹಿ ಹಾಕಲಾಯಿತು. ಡಾರ್ಜಿಲಿಂಗ್, ಕರ್ಸಿಯಾಂಗ್, ಕಾಲಿಂಪಾಂಗ್, ಹಾಗೂ ಸಿಲಿಗುರಿ ಜಿಲ್ಲೆಯ 13 ಮೌಝಾಗಳನ್ನು ಒಳಗೊಂಡ ಡಾರ್ಜಿಲಿಂಗ್ ಗುಡ್ಡಗಾಡು ಮಂಡಳಿಯನ್ನು ರೂಪಿಸಲಾಯಿತು. ಇದು ನಮಗೆ ದೊಡ್ಡ ವಿಜಯವಾಗಿತ್ತು.

ಸಂವಿಧಾನದ 59ನೇ ತಿದ್ದುಪಡಿ ಮಸೂದೆಯನ್ನು 1988 ಮಾರ್ಚ್ 24 ರಂದು ಮಂಡಿಸಲಾಯಿತು. ಆ ದಿನ ರಾಜ್ಯಸಭೆಯಲ್ಲಿ ಅನೇಕ ಪ್ರತಿಪಕ್ಷ ನಾಯಕರು ಗೈರು ಹಾಜರಾಗಿದ್ದರೂ ಅದನ್ನು ಮಂಡಿಸಿದ ಅಪ್ರಜಾಸತ್ತಾತ್ಮಕ ವೈಖರಿಯನ್ನು ನಾವು ಪ್ರತಿಭಟಿಸಿದೆವು. ರಾಷ್ಟ್ರಪತಿಕೂಡ ಪ್ರತಿಪಕ್ಷಗಳ ಪ್ರತಿಭಟನೆಗೆ ಕಿವಿಗೊಡದೆ ತಮ್ಮ ಸಮ್ಮತಿ ನೀಡಿದರು. ಪಂಜಾಬನ್ನು ತಕ್ಷಣದ ವಿಷಯವನ್ನಾಗಿ ಮುಂದೊಡ್ಡಿದ ಕೇಂದ್ರ ಸರಕಾರ ಮತ್ತೆ ತುರ್ತು ಪರಿಸ್ಥಿತಿಯನ್ನು ಹೇರಲು ಸಹಾಯಕವಾಗಬಹುದಾದ ಅಧಿಕಾರಗಳನ್ನು ಮರಳಿತರಲು ಪುನಃ ಪ್ರಯತ್ನಿಸಿತು. ಇದು ದೇಶದಲ್ಲಿನ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಬೇಕೆಂದೇ ಬುಡಮೇಲು ಮಾಡುವ ಪ್ರಯತ್ನ ಎಂದು ನನಗನ್ನಿಸಿತು.

ಆದರೆ ರಾಜೀವಗಾಂಧಿ ಹೆಚ್ಚು ಹೆಚ್ಚಾಗಿ ಪ್ರತ್ಯೇಕಗೊಳ್ಳುತ್ತಿದ್ದರು.

ತ್ರಿಪುರಾ ರಿಗ್ಗಿಂಗ್

1988ರ ಫೆಬ್ರವರಿ 2 ರಂದು ತ್ರಿಪುರಾ ವಿಧಾನಸಭೆಗೆ ಚುನಾವಣೆ ನಡೆಯಬೇಕಿತ್ತು. ಅದಕ್ಕೆ ಕೇವಲ ಮೂರು ದಿನಗಳ ಮುಂಚೆ ಇಡೀ ರಾಜ್ಯವನ್ನು ಗಲಭೆಪೀಡಿತ ಪ್ರದೇಶ' ಎಂದು ಕೇಂದ್ರ ಸರಕಾರ ಘೋಷಿಸಿತು. ಜನವರಿ 29 ರಂದು ಅಗತ್ಯವಾದಲ್ಲಿ ರಾಜಭವನದಲ್ಲಿ ಪತ್ರಕರ್ತರ ಜತೆ ಮಾತನಾಡಿದ ಪ್ರಧಾನಿ ರಾಜೀವಗಾಂಧಿ ರಾಜ್ಯದ ಹೆಚ್ಚು ಪ್ರದೇಶಗಳನ್ನು ಗಲಭೆಪೀಡಿತ ಎಂದು ಘೋಷಿಸದಿದ್ದರೆ ತ್ರಿಪುರಾ ರಾಷ್ಟ್ರೀಯ ಸ್ವಯಂಸೇವಕ (ಟಿ.ಎನ್.ವಿ)ರನ್ನು ಎದುರಿಸುವುದು ಅಸಾಧ್ಯ ಎಂದು ಹೇಳಿದರು. ಹಿಂದಿನ ದಿನದಷ್ಟೆ ಟಿಎನ್‌ವಿ ಉಗ್ರಗಾಮಿಗಳಿಂದ ಅನೇಕ ಜನರು ಸತ್ತಿದ್ದಾರೆ ಎಂದರು. ಅದು ಕಾಕತಾಳೀಯವಾದರೂ ನಿಜ ಆಗಿರಲಿಲ್ಲ. ವಾಸ್ತವವಾಗಿ ರಾಜೀವ್ ನಗರವನ್ನು ಬಿಟ್ಟ ಮರುದಿನವೇ ಕೆಲವು ಹತ್ಯೆಗಳು ನಡೆದವು. ಇಂಥ ಪ್ರಕರಣಗಳು ಅಪಾಯಕಾರಿಯಾದುದು. ಹಾಗೂ ಸದ್ಯವೇ ಏನೋ ಅನಾಹುತ ನಡೆಯಲಿರುವುದರ ಕೆಟ್ಟ ಸೂಚನೆಯಾಗಿದ್ದವು.

1972ರಲ್ಲಿ ನಾವು ಬಂಗಾಳದಲ್ಲಿ ರಿಗ್ಗಿಂಗ್ ನೋಡಿದ್ದೆವು! ಆದರೆ ತ್ರಿಪುರಾದಲ್ಲಿ ಅದನ್ನು ಮೀರಿಸುವ ಅಕ್ರಮಗಳು ನಡೆದವು! ರಾಜ್ಯದಲ್ಲಿ ಚುನಾಯಿತ ಸರಕಾರವಿದ್ದರೂ ವಾಸ್ತವವಾಗಿ ಸೇನೆಯೇ ಚುನಾವಣೆ ನಡೆಸಿತು. ಸಿಪಿಐ(ಎಂ) ಎಲ್ಲಾ ದಿಕ್ಕುಗಳಿಂದ ವಿರೋಧವನ್ನು ಎದುರಿಸಿತು. ಸೈನಿಕರು ಕಾಂಗ್ರೆಸ್ ಏಜೆಂಟರಂತೆ ವರ್ತಿಸಿದರು. ಮತ ಎಣಿಕೆ ವೇಳೆಗೆ ಸರಿಯಾಗಿ ಅಕ್ರಮಗಳು ಹಲ್ಲೆಗಳು ಆರಂಭವಾದವು.

ಆಗಲೇ ಜಯಶಾಲಿ ಎಂದು ಘೋಷಿತರಾದ ಒಬ್ಬ ಅಭ್ಯರ್ಥಿಯ ಸೋಲು ನಾನು ಎಂದೂ ಕಂಡು ಕೇಳರಿಯದ ವಿದ್ಯಾಮಾನ. ಆದರೆ ಅಂಥದ್ದು ಕೂಡ ನಡೆದೇ ತೀರಿತು. ಮಧು ಕ್ಷೇತ್ರದಲ್ಲಿ ಎಡರಂಗ ಅಭ್ಯರ್ಥಿ 203 ಮತಗಳಿಂದ ಗೆದ್ದಿದ್ದರು. ಆದರೆ ಅವರು 193 ಮತಗಳಿಂದ ಸೋತಿದ್ದಾರೆ ಎಂದು ಆಮೇಲೆ ಪ್ರಕಟಿಸಲಾಯಿತು. ಅಗತ್ಯವಾದ ಮಜ್ಲೆಸಪುರ ಕ್ಷೇತ್ರದಲ್ಲಿ ಕೂಡ ಇಂಥ ಪ್ರಕರಣ ಪುನರಾವರ್ತನೆಗೊಂಡಿತು.

ಮಜ್ಲೆಸಪುರ ಕ್ಷೇತ್ರದ ಫಲಿತಾಂಶ ಕಾನೂನಿಗೆ ಅನುಗುಣವಾಗಿಲ್ಲ ಎಂದು ಮುಖ್ಯ ಚುನಾವಣೆ ಆಯುಕ್ತ ಪೆರಿ ಶಾಸ್ತ್ರಿ ಕೂಡ ಹೇಳಿದರು. ಆದರೆ ಇಷ್ಟೆಲ್ಲ ಆದರೂ. ನಾವು ಶೇಕಡ 50ಕ್ಕಿಂತ ಹೆಚ್ಚು ಮತಗಳನ್ನು ಪಡೆದೆವು. ಕಾಂಗ್ರೆಸ್ -ತ್ರಿಪುರಾ ಉಪಜಾತಿ ಯುವ ಸಮಿತಿ (ಟಿಯುಜೆಎಸ್) ಒಕ್ಕೂಟಕ್ಕಿಂತ 32000 ಹೆಚ್ಚು ಮತಗಳು ನಮಗೆ ಸಿಕ್ಕವು. ಎಲ್ಲಕ್ಕಿಂತ ಮುಖ್ಯವಾಗಿ, ಏಕತೆಯ ಚಿತ್ರಣವನ್ನು ಯಶಸ್ವಿಯಾಗಿ ಪ್ರದರ್ಶಿಸಿದೆವು ಹಾಗೂ ರಾಷ್ಟ್ರೀಯ ಏಕತೆಯ ಪರವಾಗಿರುವ ಎಲ್ಲರನ್ನು ಸಂಕೇತಿಸಿದೆವು. ಕಾಂಗ್ರೆಸ್‌ನ ಮುಖವಾಡವನ್ನು ಇನ್ನಷ್ಟು ಕಳಚಿ ಹಾಕಲು ತ್ರಿಪುರಾ ಚುನಾವಣೆ ನೆರವಾಯಿತು.

ಮೂರನೇ ಪಂಚಾಯತ್ ಚುನಾವಣೆಗಳು

ಪಶ್ಚಿಮ ಬಂಗಾಳದಲ್ಲಿ 1988 ಫೆಬ್ರವರಿ 28 ರಂದು ನಡೆದವು. ತ್ರಿಪುರಾ ಚುನಾವಣೆ ನಮ್ಮನ್ನು ಘಾಸಿಗೊಳಿಸಿತ್ತು. ಆದರೆ ಅದು ನಮಗೆ ಎಚ್ಚರಿಕೆಯ ಗಂಟೆಯೂ ಆಗಿತ್ತು. ನಾವು ಈ ಬಾರಿ ಜಾಗ್ರತರಾದೆವು. ನಾವು ಯಶಸ್ವಿಯಾಗಿ ಜನರನ್ನು ತಲುಪಿದೆವು ಹಾಗೂ ಪಂಚಾಯತಿ ಸದಸ್ಯರು ಜನರಿಗೆ ಉತ್ತರದಾಯಿತ್ವವಾಗಿರುವಂತೆ ಖಾತರಿಪಡಿಸಲು ಕಾನೂನುಗಳನ್ನು ತಿದ್ದಿದೆವು.

ಆರ್ಥಿಕ ಬಿಕ್ಕಟ್ಟು ದೇಶವನ್ನು ಕಾಡುತ್ತಿತ್ತು. ಅವಶ್ಯಕ ಸಾಮಗ್ರಿಗಳು ಜನಸಾಮಾನ್ಯರ ಕೈಗೆ ಬರುತ್ತಿರಲಿಲ್ಲ. ವಿಶ್ವಬ್ಯಾಂಕ್ ಮೇಲಿನ ಅವಲಂಬನೆ ಹೆಚ್ಚಾಗುತ್ತಿತ್ತು. ಇಂತ ದುರಂತ ಪರಿಸ್ಥಿತಿಗೆ ರಾಜೀವಗಾಂಧಿಯೇ ಹೊಣೆಗಾರರು. ಸಹಾನುಭೂತಿಯ ಅಲೆಯನ್ನೇರಿ ಅವರು ಅಧಿಕಾರಕ್ಕೆ ಬಂದಿದ್ದೇನೋ ಹೌದು. ಆದರೆ ಈಗ ಆ ಅಲೆ ನಿಧಾನವಾಗಿ ಕರಗುತ್ತಿತ್ತು.

1987 ಸೆಪ್ಟೆಂಬರ್‌ನಲ್ಲಿ ಒಂದು ವ್ಯಾಪಕ ಚಳುವಳಿ ಆರಂಭವಾಯಿತು. ಐದು ಲಕ್ಷಕ್ಕೂ ಹೆಚ್ಚು ಜನರು ಬಂಧನಕ್ಕೆ ಒಳಗಾದರು. ಹಾಗೂ ಬಂಗಾಳದಲ್ಲಿ ನಾವು ಮೂರು ತಿಂಗಳ ಕಾಲ ಪ್ರಚಾರಾಂದೋಲನ ನಡೆಸಿದೆವು. ಕಲ್ಕತ್ತದಲ್ಲಿ ಮೂರು ಲಕ್ಷ ಜನರ ರ್‍ಯಾಲಿ ನಡೆಯಿತು. ನಾನೂ ಅದರಲ್ಲಿ ಭಾಗವಹಿಸಿದ್ದೆ. ಮುಂದೇನು ಆಗಬಹುದೆಂದು ನಿಮ್ಮ ನಿರೀಕ್ಷೆ ಎಂಬುದಾಗಿ ಸುದ್ದಿಗಾರರು ನನ್ನನ್ನು ಪ್ರಶ್ನಿಸಿದರು. ಅದನ್ನು ಜನರು ನಿರ್ಧರಿಸುತ್ತಾರೆ ಎಂದು ನಾನು ಹೇಳಿದೆ. ಮಾರ್ಚ್ 15 ರಂದು ಭಾರತ ಬಂದ್‌ಗೆ ಕರೆ ನೀಡಲಾಯಿತು. ಈ ಹಿನ್ನೆಲೆಯಲ್ಲಿ ಪಂಚಾಯತಿ ಚುನಾವಣೆಗಳು ನಡೆದವು.

ನಮ್ಮ ಕಾರ್ಯಕ್ರಮವನ್ನು ವಿವರಿಸುವ ಪುಸ್ತಿಕೆಯೊಂದನ್ನು ಫೆಬ್ರವರಿ 11 ರಂದು ಪ್ರಕಟಿಸಿದೆವು. ರಾಜ್ಯದ ಒಟ್ಟು ಯೋಜನೆ ಹಣದ ಅರ್ಧದಷ್ಟನ್ನು ಪಂಚಾಯತಿಗಳ ಮೂಲಕ ಖರ್ಚುಮಾಡುತ್ತೇವೆ ಎಂದು ನಾವು ಹೇಳಿದೆವು. ಬೆಳೆಗಳ ಇಳುವರಿ ದಾಖಲೆಯ 95 ಲಕ್ಷಟನ್ ತಲುಪಿತ್ತು. ಕೃಷಿ ಕ್ಷೇತ್ರದಲ್ಲಿನ ಯಶಸ್ಸಿನ ರೀತಿಯಲ್ಲೇ ಉಪಕೈಗಾರಿಕೆಗಳ ಬೆಳವಣಿಗೆಗೆ ಒತ್ತು ನೀಡಲು ನಾವು ಯೋಜಿಸಿದೆವು. ಭೂಸುಧಾರಣೆ, ಶಿಕ್ಷಣ, ಕುಡಿಯುವ ನೀರು, ಆರೋಗ್ಯ ರಕ್ಷಣೆ, ಕೈಗಾರಿಕೆ, ಸಹಕಾರಿ ಸಂಘಗಳು, ಬುಡಕಟ್ಟು ಕಲ್ಯಾಣ, ಸಂಪರ್ಕ ಮತ್ತು ಸಮುದಾಯ ಅಭಿವೃದ್ಧಿಗೆ ಆದ್ಯತೆ ನೀಡಿದೆವು.

ಆದರೆ ಸ್ಥಾನಗಳ ವಿತರಣೆ ಹಾಗೂ ನಿಗಧಿ ಬಗ್ಗೆ ಎಡರಂಗ ಅಂಗಪಕ್ಷಗಳಲ್ಲಿ ಸ್ವಲ್ಪ ಅನೈಕ್ಯವಿತ್ತು. 1987ರ ಅಸೆಂಬ್ಲಿ ಚುನಾವಣೆಯಲ್ಲಿ ಇದು ಕಂಡುಬಂದಿತ್ತು. ಈ ಸಮಸ್ಯೆಯ ನಿವಾರಣೆಗೆ ಐದು ಅಂಶಗಳ ಕ್ರಿಯಾ ಯೋಜನೆಯನ್ನು ರೂಪಿಸಿದೆವು. ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಈ ಸೂತ್ರದಿಂದ ದೂರ ಸರಿಯಿತು. ಕೂಚ್ ಬಿಹಾರ, ಮುರ್ಶಿದಾಬಾದ್, ಹೂಗ್ಲಿ, ಹೌರ ಜಲಪ್ಯಾಗುರಿ ಮತ್ತು 24 ಪರಗಣ ಜಿಲ್ಲೆಗಳಲ್ಲಿ ಫಾರ್ವರ್ಡ್‌ಬ್ಲಾಕ್ ತನ್ನದೇ ಅಭ್ಯರ್ಥಿಗಳನ್ನು ನಿಲ್ಲಿಸಿತು. ಅದೇ ರೀತಿ ಆರ್.ಎಸ್.ಪಿ. ಮುರ್ಶಿದಾಬಾದ್, 24 ಪರಗಣ, ಜಲಪೈಗುರಿ, ಬೀರ್ ಭೂಮ್, ಮಾಲ್ಡಾ ಮತ್ತು ಪಶ್ಚಿಮ ದಿನಾಜಪುರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತು. ಸಿಪಿಐ ಕೂಡ ಅನೇಕ ಕಡೆ ಒಪ್ಪಂದವನ್ನು ಉಲ್ಲಂಘಿಸಿತು. ಏಕತೆಯನ್ನು ಉಳಿಸಿಕೊಳ್ಳಲು ಸಿಪಿಐ(ಎಂ) ಪ್ರಯತ್ನಿಸಿತು. ಮತ್ತು ನಿಜ ಹೇಳಬೇಕೆಂದರೆ, ಕಳೆದ ಸಲ ಗೆದ್ದಿದ್ದ ಕೆಲವು ಸ್ಥಾನಗಳನ್ನು ಬಿಟ್ಟುಕೊಡಲೂ ಒಪ್ಪಿತು. ಆದರೆ ರಂಗದಲ್ಲಿ ಪೂರ್ಣ ಏಕತೆ ಸಾಧ್ಯವಾಗಲಿಲ್ಲ.

15 ಜಿಲ್ಲೆಗಳ 62,000ಕ್ಕೂ ಹೆಚ್ಚು ಸ್ಥಾನಗಳಲ್ಲಿ ಮತದಾನ ನಡೆಯಿತು. ಡಾರ್ಜಿಲಿಂಗ್‌ನಲ್ಲಿ ಚುನಾವಣೆ ಸಾಧ್ಯವಾಗಲಿಲ್ಲ. ಕಳೆದ ಸಲಕ್ಕಿಂತ ಶೇ. ನಾಲ್ಕರಷ್ಟು ಹೆಚ್ಚು ಅಂದರೆ ಶೇ. 79.23 ಮತದಾನವಾಯಿತು. ಪ್ರಕಟಿತ 62,269 ಸ್ಥಾನಗಳ ಫಲಿತಾಂಶದ ಪೈಕಿ 45,718ರಲ್ಲಿ ಗೆದ್ದ ಎಡರಂಗ ತನ್ನ ಬಲವನ್ನು ಶೇ. 11 ರಷ್ಟು ಏರಿಸಿಕೊಂಡಿತು. ಕಾಂಗ್ರೆಸ್ 14 ಸ್ಥಾನಗಳಲ್ಲಿ ಗೆದ್ದಿತು. ಗೆಲುವಿನ ಸ್ಥಾನಗಳಲ್ಲಿ ಅದು ಶೇ. 9.71ರ ಕುಸಿತವನ್ನು ಕಂಡಿತು. ಬಿಜೆಪಿ ಪಂಚಾಯತಿ ಸಮಿತಿಗಳ ಮೂರು ಹಾಗೂ ಗ್ರಾಮ ಪಂಚಾಯತಿಗಳ 36 ಸ್ಥಾನಗಳಲ್ಲಿ ಗೆಲುವು ಸಾಧಿಸಿತು.

(ಮುಂದುವರಿಯುವುದು)

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 79

ನೀರಾ ಚಳುವಳಿಗಾರರ ನೆತ್ತರು ನೆಕ್ಕಿದವರು

ಕೃಷ್ಣರ ಸರ್ಕಾರ ಎರಡು ವರ್ಷಗಳನ್ನು ಪೂರೈಸಿದ ಖುಷಿಯಲ್ಲಿ ಬೀಗುತ್ತಿರುವಾಗಲೇ ಚನ್ನಪಟ್ಟಣದಲ್ಲಿ ಚಳುವಳಿ ನಡೆಸಿದ ರೈತರ ಮೇಲೆ ತೀವ್ರತರವಾದ ದಬ್ಬಾಳಿಕೆ ನಡೆಸಿದ್ದಾರೆ. ವಿಠಲೇನಹಳ್ಳಿಗೆ ನುಗ್ಗಿದ ಪೋಲೀಸರು ಗೋಲಿಬಾರ್ ಮಾಡಿ ಅಮಾಯಕರಾದ ನಂಜಯ್ಯ(60) ಮತ್ತು ತಮ್ಮಯ್ಯಣ್ಣ(55) ಎಂಬ ಇಬ್ಬರು ರೈತರನ್ನು ಕೊಂದಿದ್ದಾರೆ. ಕೃಷ್ಣ ಸರ್ಕಾರ ತಲುಪಿರುವ ಅಮಾನವೀಯ ಹಾಗೂ ಅವನತಿಯ ಹಂತದ ಬರ್ಬರ ಕೃತ್ಯವಿದು. ನಾಡಿನ ರೈತರು, ತಮ್ಮ ತೆಂಗು, ರಬ್ಬರು, ಕಾಫಿ, ತೊಗರಿ, ತರಕಾರಿ, ಭತ್ತ ಮುಂತಾದ ತಮ್ಮ ಬೆಳೆಗೆ ಸರಿಯಾದ ಬೆಲೆ ಸಿಗದೇ ಕಂಗಾಲಾಗಿ ತತ್ತರಿಸುತ್ತಿದ್ದರೂ ಅದರ ಪರಿಹಾರಕ್ಕಾಗಿ



ಕಿಂಚಿತ್ತೂ ಕ್ರಮವಹಿಸದೇ, ಸಂಕಟಗಳನ್ನೇ ಹೆಚ್ಚುವಂತೆ ಮಾಡುತ್ತಾ ಬಂದಿದೆ. ಕನಿಷ್ಠ ಸೌಜನ್ಯದಿಂದ ನೊಂದ ರೈತರನ್ನು ವಿಚಾರಿಸುವುದೂ ಈ ಸರ್ಕಾರಕ್ಕೆ ಆಗಲಿಲ್ಲ. ಸಾಂತ್ವನವನ್ನು ಹೇಳಲಿಲ್ಲ. ಹಾಗೆ ನೀರಾ ಇಳಿಸುತ್ತಿರುವ ರೈತರ ಬವಣೆಗಳಿಗೆ ಕಿವಿಗೊಡಲಿಲ್ಲ. ಆದರೆ ಈಗ ಏಕಾಏಕಿಯಾಗಿ ರೈತರು ನೀರಾ ಇಳಿಸುವುದನ್ನೇ ದೂಷಿಸಿ (ವಿಷಯುಕ್ತ ರಾಸಾಯನಿಕ ಬಳಸಲಾಗುವುದೆಂದು ಹೇಳುತ್ತಿದೆ ಬೇರೆ) ಅಬ್ಕಾರಿಯ ಹೆಂಡದ ದೊರೆಗಳ ಅಣತಿಯಂತೆ ಅವರ ಹಿತಕಾಯಲು ಜನರನ್ನು ಬಲಿತೆಗೆಯಲು ಹಿಂಜರಿಯುವುದಿಲ್ಲವೆಂದು ಕೃಷ್ಣರ ಸರ್ಕಾರ ತೋರಿಸಿದೆ.

ಇಂತಹ ಘಟನೆಯ ಬಗ್ಗೆ ಕೃಷ್ಣರಿಗೆ ಕೊಂಚವೂ ನೋವು ತಂದಿಲ್ಲ ಎಂಬುದೇ ಆಘಾತಕಾರಿ. ಈ ಪ್ರಕರಣದಲ್ಲಿ ಪರೋಕ್ಷವಾಗಿ ಭಾಗಿಯಾದರೆನ್ನರಾದ ಅವರ ಸಂಪುಟದ ಸಚಿವ ಡಿ.ಕೆ.ಶಿವಕುಮಾರ್ ಬಗ್ಗೆ ಹಲವಾರು ದೂರುಗಳು ಇದ್ದರೂ ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ನಿಯಂತ್ರಿಸಲು ಮುಂದಾಗಿಲ್ಲ. ಬದಲಾಗಿ ರೈತರ ಹೋರಾಟ ಬೆಂಬಲಿಸಿದವರಿಗೆ ರಾಜಕೀಯ ಬಣ್ಣ ಬಯಲಾಗುತ್ತಿದೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರತಿಭಟಿಸಿದವರನ್ನು ಹೀಗೆ ಲಾಠಿ, ಬಂದೂಕುಗಳಿಂದ ಚಚ್ಚುತ್ತಾ ಹೋದರೆ ಅದಕ್ಕೆ ತಕ್ಕ ಬೆಲೆಯನ್ನು ಈ ಸರ್ವಾಧಿಕಾರಿ ಕಾಂಗ್ರೆಸ್ ಸರ್ಕಾರ ತೆರಬೇಕಾಗುತ್ತದೆ. ಇಂತಹ ಅಪಾಯಕಾರಿ ಧೋರಣೆ ಖಂಡನೀಯ ಹಾಗೂ ಎಲ್ಲಾ ಪ್ರಜಾಪ್ರಭುತ್ವೀಯ ಶಕ್ತಿಗಳು ಪ್ರತಿಭಟಿಸಬೇಕಾದುದು.

ಕೃಷಿಗೆ ವಿದ್ಯುತ್ ಕಡಿತ ಸಲ್ಲದು

ಇನ್ನು ಮುಂದೆ ಗ್ರಾಮಾಂತರದ ರೈತರಿಗೆ ಕೇವಲ ಆರು ಗಂಟೆಗಳು ಮಾತ್ರ ಪೂರ್ಣ ಓಲ್ಟೇಜ್ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಸರ್ಕಾರ ಪ್ರಕಟಿಸಿದೆ. ಜಲಾಶಯಗಳಲ್ಲಿ ನೀರಿನ ಕೊರತೆಯಿದ್ದು ವಿದ್ಯುತ್ ಉತ್ಪಾದನೆ ಅಗತ್ಯವಿರುವಷ್ಟು ಸಾಧ್ಯವಾಗದು ಎಂಬುದು ಸಮಜಾಯಿಷಿ. ಅಂದರೆ ಉತ್ಪಾದನೆಯಲ್ಲಿ ಶೇ 40 ರಷ್ಟು ಕಡಿತ.

ಮುಖ್ಯವಾಗಿ ಪಂಪ್‌ಸೆಟ್ ಆಧರಿಸಿ ಕೃಷಿ ಮಾಡುತ್ತಿರುವ ರೈತರು ಇದರಿಂದ ಅಪಾರ ತೊಂದರೆಗೆ ಈಡಾಗಲಿದ್ದಾರೆ. ಈಗ ಈ ಹಿಂದೆ ವಿದ್ಯುತ್ ಸರಬರಾಜು ಗ್ರಾಮಾಂತರದಲ್ಲಿ ಕಣ್ಣಾಮುಚ್ಚಾಲೆ ಆಡುತ್ತಲೇ ಇರುತ್ತದೆ. ಒಮ್ಮೆ ಏನಾದರೂ ಸಣ್ಣ ತೊಂದರೆಯಿಂದ ವಿದ್ಯುತ್ ಪೂರೈಕೆ ನಿಂತರೆ ವಾರಗಟ್ಟಲೆ ಅತ್ತ ಕಡೆ ನೋಡುವವರೂ ಇಲ್ಲದೆ ರೀಪೇರಿ ಕಾಣದೆ ನೆಲ ನೀರು ಕಾಣದೆ ಬೆಳೆ ಬಾಡುವ ಸ್ಥಿತಿ. ಇಲ್ಲವೇ ಅತ್ಯಂತ ಕಡಿಮೆ ಓಲ್ಟೇಜ್ ಪೂರೈಕೆ. ಅದರೀಗ ದರಗಳಲ್ಲಿಯೂ ಹೆಚ್ಚಳ ಇಂತಹವುಗಳ ನಡುವೆ ಅತ್ಯಧಿಕ ಕೃಷಿ ವೆಚ್ಚ-ಫಸಲಿಗೆ ಸೂಕ್ತ ಬೆಲೆ ಇಲ್ಲದ ಬಾಧೆ. ಸಾಲಗಾರರ ಕಾಟ. ಈ ವರುಷವಂತೂ ಬರದ ಅಟ್ಟಹಾಸ. ಮಳೆಯೂ ಇಲ್ಲದೆ ಬೆಳೆಗೆ ನೀರಿನ ಅಭಾವ ಸಹ. ಇಂತಹ ಸ್ಥಿತಿಯಲ್ಲಿ ಕೇವಲ ಆರು ತಾಸು ಮಾತ್ರ (ಮೂರು ಫೇಸ್‌ನಲ್ಲಿ) ವಿದ್ಯುತ್ ಸರಬರಾಜು ನೀಡಿದರೆ ಅದು ತೀವ್ರ ನೀರಿನ ಕೊರತೆ ತರಲಿದೆ. ಇನ್ನು ಹೆಚ್ಚಿನ ಬಾಧೆಗೆ ರೈತರು ಒಳಗಾಗಬೇಕಾಗುತ್ತದೆ. ಆದ್ದರಿಂದ ಸರ್ಕಾರ ವಿದ್ಯುತ್ತನ್ನು ಕನಿಷ್ಠ 12 ಅಥವಾ 10 ತಾಸಿನ ಮಟ್ಟಿಗಾದರೂ ಪೂರೈಕೆ ಮಾಡುವುದು ಅಗತ್ಯವಿದೆ.

ಮೇಲಾಗಿ ವಿದ್ಯುತ್‌ನ ಸೋರಿಕೆ, ಕಳ್ಳತನ ಹಾಗೂ ವಿದ್ಯುತ್ ದುಂದು ವೆಚ್ಚಗಳಿಗೆ ಕಡಿವಾಣ ಹಾಕಬೇಕು. ಮುಖ್ಯವಾಗಿ ಇನ್ನೂ ವಿದ್ಯುತ್ ಉತ್ಪಾದಿಸಲು ಈಗಲೂ ಅವಕಾಶವಿರುವ ಎಲ್ಲವನ್ನು ಬಳಸಿ, ಹೆಚ್ಚು ಉತ್ಪಾದಿಸಬೇಕು. ಕೃಷಿಯನ್ನು ಆದ್ಯತೆ ಘಟಕವಾಗಿ ಪರಿಗಣಿಸಿ, ಇತರೆಡೆ ಸಮತೋಲನ ಮಾಡಿ ಹೆಚ್ಚು ವಿದ್ಯುತ್ ಪೂರೈಸಬೇಕು.

ಕೃಷ್ಣ ಸರ್ಕಾರಕ್ಕೀಗ ವರ್ಷಗಳು

ಮಾಹಿತಿ ತಂತ್ರಜ್ಞಾನ-ಜೈವಿಕ ತಂತ್ರ, ಐಟಿ-ಬಿಟಿಗಳೆಂಬ ಐಲು ಹಿಡಿಸಿ(ದ)ಕೊಂಡ ಕೃಷ್ಣರವರು, ಮೊದಲಿನಂತೆ ಜನರನ್ನು ಮರಳುಗೊಳಿಸಲು ಆಗುತ್ತಿಲ್ಲ. ಕರ್ನಾಟಕ ಅಭಿವೃದ್ಧಿ ಸಾಧಿಸಲು ಆಡಳಿತದ ಆರಂಭದಿಂದಲೇ ವಿಶ್ವಬ್ಯಾಂಕಿನ ಸಾಲವನ್ನೇ ನೆಚ್ಚಿಕೊಂಡಿದ್ದಾರೆ. ಮತ್ತು ಅವರ ಆಜ್ಞೆಗಳನ್ನು ಶಿರಸಾವಹಿಸಿ ಪಾಲಿಸಿ ರಾಜ್ಯವನ್ನು ನರಕದತ್ತ ಒಯ್ಯಲಿದ್ದಾರೆ. ಕಂಪನಿಗಳ ಮಾಲೀಕರು ಹೆಂಡದ ಲಾಬಿಗಳಿಗೆ ಹೂಂಗುಟ್ಟತೊಡಗಿದ್ದಾರೆ. ಸಂಕಷ್ಟದಲ್ಲಿರುವ ಜನಸಾಮಾನ್ಯರ-ಕಾರ್ಮಿಕರ-ರೈತರನ್ನು ಪೋಲೀಸ್ ಪಡೆ ಬಳಸಿ ಚಚ್ಚುತ್ತಿದ್ದಾರೆ. ಹೀಗೆ ಸೈಬರ್ ಕೃಷ್ಣರ ಸೋಬರ್ ಮುಖ ಸೈತಾನ ಸ್ವರೂಪ ತಾಳುತ್ತಿದೆ. ಈ ಸ್ಥಿತಿಯಲ್ಲಿ ವಿರೋಧ ಪಕ್ಷಗಳ ನಿಶಕ್ತಿಯೇ ಕೃಷ್ಣ ಸರ್ಕಾರಕ್ಕೆ ವರದಾನ! ಈ ಕಾಂಗ್ರೆಸ್ ಸರ್ಕಾರದ ಅಟ್ಟಹಾಸವನ್ನು ಜನ ಎಷ್ಟು ದಿನ ಸಹಿಸಿಯಾರು?



ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ. ಗುರುಶಾಂತ್

ಎರಡು ವರ್ಷಗಳ ಅಧಿಕಾರ ಅನುಭವಿಸಿದ ಸಂಭ್ರಮದಲ್ಲಿ ಮುಖ್ಯಮಂತ್ರಿ ಕೃಷ್ಣ ಹಾಗೂ ಸಂಪುಟ. ಸಿಹಿ ಹಂಚಿಕೆ ಆಲಿಂಗನ. ಈ ಕಾರುಬಾರಿನ ರಾಜಧಾನಿ ನೆರೆಯಲ್ಲಿರುವ ಚನ್ನಪಟ್ಟಣದಲ್ಲಿ ಅಮಾಯಕ ರೈತರ ಮೇಲೆ ಪೊಲೀಸ್ ದಬ್ಬಾಳಿಕೆಗೆ ಗೋಲಿಬಾರ್‌ಗೆ ಇಬ್ಬರು ರೈತರ ಬಲಿ. ಉದಾರೀಕರಣದ ಬೇಗೆಯಲ್ಲಿ ಸಾಲದ ಭಾದೆ ತಾಳದೆ ಆತ್ಮಹತ್ಯೆಗೆ ಮೊರೆಹೋದ ರೈತ-ಕುಟುಂಬ ಸಾವಿನ ಸರಮಾಲೆ ಅದರತ್ತ ತಿರಸ್ಕಾರದ ನೋಟ, ಬದುಕುವ ಹಕ್ಕು ಕೇಳಿದರೆ,ಲಾಠಿ ಗುಂಡೇಟುಗಳ ಊಟ! ಕೈಗಾರಿಕೆ ಕೃಷಿನಾಶ ಉತ್ಪನ್ನಗಳು ಕುಸಿತ, ಬರದ ಬೆಂಗಾಡಿನಲ್ಲಿ ಪರಿಹಾರ ಕಾಣದೇ ಕಂಗಾಲಾದ ದುಡಿವ ಜನಕೋಟಿ, ವಿಶ್ವಬ್ಯಾಂಕ್‌ನ ಸಾಲದ ಭಿಕ್ಷಾ ಪಾತ್ರೆಯನ್ನೇ ನಂಬಿ ರಾಜ್ಯದ ಅಭಿವೃದ್ಧಿ ಸಾಧಿಸಲು ಇರಾದೆ, ಜನ ಸಾಮಾನ್ಯರ ಮೇಲೆ ಅಸಹನೀಯ ಹೊರೆ ಕಾರ್ಮಿಕ-ನೌಕರರ ಬೆನ್ನಮೇಲೆ ಬರೆ.

ಹೀಗಿದ್ದರೂ ಕೃಷ್ಣರನ್ನೇ ಕೆಲವು ಪತ್ರಿಕೆಗಳು ಹಾಡಿಹೊಗಳುವುದು. ದೇಶ ಕಂಡ ನಂಬರ್ ಒನ್ ಮುಖ್ಯಮಂತ್ರಿ ಕೃಷ್ಣರವರೇ, ಎಂತಹ ತಮಾಷೆ, ಏನೀ ನಿಶೆ, ಇದೆಲ್ಲಾ ಹಣ-ಅಧಿಕಾರದ ಆಮಿಷೆ.

ಜನ ತೀರ್ಪಿಗೆ ದ್ರೋಹ

1999ರಲ್ಲಿ ಜನ ಕೊಟ್ಟ ತೀರ್ಪು ಅತೀಸ್ಪಷ್ಟ ವಾಜಪೇಯಿ ಸರ್ಕಾರ ನೇತೃತ್ವದ ಎನ್.ಡಿ.ಎ ಸರ್ಕಾರದ ನೀತಿಗಳು ಹಾಗೂ ಬಿಜೆಪಿಯ ಕೋಮುವಾದಿ ಆಟಗಳನ್ನು ಜನ ತಿರಸ್ಕರಿಸಿದರು. ಕರ್ನಾಟಕ ಕೋಮುವಾದಿಗಳ ನೆಲೆಯಾಗದಂತೆ ತಡೆದರು. ಈ ಆರ್ಥಿಕ ರಾಜಕೀಯ ಧಾಳಿಗಳನ್ನು, ಆ ನೀತಿಗಳನ್ನು ಸಮರ್ಥವಾಗಿ ಎದುರಿಸದೇ ಸೋತ (ಆರ್ಥಿಕ ನೀತಿಗಳನ್ನು ಅನುಸರಿಸಿದ) ಒಳ ಜಗಳಗಳಲ್ಲಿ ಮುಳುಗಿದ್ದ ಜನತಾದಳದ ಬಣಗಳನ್ನು ತಿರಸ್ಕರಿಸಿದರು. ನಿರೀಕ್ಷಿಸದಷ್ಟು ಬಹುಮತದಿಂದ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದು ನೆಮ್ಮದಿ ಆಡಳಿತಕ್ಕಾಗಿ ಕಾದರು. ಆದರೆ. ಈ 'ಪಾಂಚಜನ್ಯ'ದ ರಥವೇರಿ ರಾಜ್ಯವೆಲ್ಲಾ ಪ್ರಣಾಳಿಕೆಯ ಡಂಗೂರ ಹೊಡೆದ ಕೃಷ್ಣ ಈ ವರ್ಷಗಳಲ್ಲಿ ಜನರ ನಿರೀಕ್ಷೆಗಳಿಗೆ ದ್ರೋಹ ಬಗೆದರು. ಭರವಸೆಗಳನ್ನು ಮರೆತರು. ಈ ಸರ್ಕಾರದ ಪ್ರಾಶಸ್ತ್ಯಗಳನ್ನು ಪರಿಗಣಿಸುವಾಗಲೂ ಮಾಹಿತಿ ತಂತ್ರಜ್ಞಾನದ (ಐ.ಟಿ) ಯನ್ನೇ ನೆಚ್ಚಿದರು. ಅದೂ ಈ ಐಟಿ ಯೇ, ಅಮೇರಿಕಾದಲ್ಲಿ ನೆಗಡಿಯಾದರೆ ಇಲ್ಲಿ ಸೀನು ಬರಿಸಿ ರೋಗ ಹರಡುವಂತಹದ್ದು. ಈ ಪರಾವಲಂಬಿಯು ಅಲ್ಲಿ ಕುಸಿದಾಗ ಇಲ್ಲಿಯೂ ಕುಸಿತ ಅನುಭವಿಸಿ ಬೆಳಗಾಗುವುದರೊಳಗಾಗಿ ಬಿಕ್ಕಟ್ಟಿನಲ್ಲಿ ಸಿಕ್ಕು ಸಾವಿರಾರು ಜನ ಉದ್ಯೋಗ ಸಂಬಳ ಕಳೆದು ನಿರಾಶ್ರಿತರಾದರು. ಅಲ್ಲಿಗೂ ಬಿಡದೆ ಈಗ ಜೈವಿಕ ತಂತ್ರಜ್ಞಾನದ ಐಲು ಹಿಡಿಸಕೊಂಡಿದ್ದಾರೆ ಕೃಷ್ಣ. ಇದು ಬೆಳಯಬೇಕು ನಿಜ. ಆದರೆ ಇದೇ ರಾಜ್ಯದ ಅಭಿವೃದ್ಧಿಯೇನಾದೀತು? ಎಲ್ಲಾ ಬಿಕ್ಕಟ್ಟನ್ನು ಪರಿಹರಿಸಿತೇ?

ವಿಶ್ವಬ್ಯಾಂಕ್ - ನಾಯ್ಡು ಮಾದರಿ

ಆರಂಭದಿಂದಲೂ ಕೃಷ್ಣರಿಗೆ ಕಾಡಿದ್ದು, ಕಂಡಿದ್ದು ಆಂಧ್ರದ ಮಾದರಿ. ಅದನ್ನೇ CEO ಮಾದರಿ ಎಂದು ಕರೆಯಲಾಗುತ್ತಿದೆ. ಅಂದರೆ ಜನ ಆರಿಸಿದ ವಿಧಾನಸಭೆ, ಸರ್ಕಾರ / ಸಂಪುಟದ ಅಥವಾ ಮುಖ್ಯಮಂತ್ರಿ ಬದಲು ಕಂಪನಿಯ ಆಡಳಿತ ನಿರ್ದೇಶಕರಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇರುವುದು. ಹೀಗೆ ಖಾತೆ ಹೊಂದಿದ ಸಚಿವರನ್ನು ನಿರ್ಲಕ್ಷಿಸಿ ಕಂಪನಿಗಳ ಮುಖ್ಯಸ್ಥರಿರುವ 'ಟಾಸ್ಕ್ ಫೋರ್ಸ್' ನದೇ ತೀರ್ಮಾನ. ಈ ಮಾದರಿಯೇ ಸುಲಿಗೆಖೋರ ವಿಶ್ವಬ್ಯಾಂಕ್‌ನ ಸೃಷ್ಟಿ. ಚಂದ್ರಬಾಬು ನಾಯ್ಡುವನ್ನೇ ಹಿಂದಕ್ಕಟ್ಟಿ ವಿಶ್ವಬ್ಯಾಂಕ್‌ನ ಧಣಿಗಳಿಂದ ಬೆನ್ನು ಚಪ್ಪರಿಸಿಕೊಳ್ಳುವ ಬಯಕೆ. ಹೀಗೆ ಆಂಧ್ರದ ಜಾಡು ಹಿಡಿಯುವುದು ಎಂದರೆ ವಿಶ್ವಬ್ಯಾಂಕ್ ಗುಲಾಮ, ಜನರ ಪಾಲಿಗೆ ಯಮ ಎಂದರ್ಥ. ಚಂದ್ರಬಾಬು ನಾಯ್ಡು ಸ್ವರ್ಣಾಂಧ್ರದ ಬದಲು ಮರಣಾಂಧ್ರ ಸೃಷ್ಟಿಸಿದಂತೆ. ಹಾಗೇ ಇಲ್ಲಿಯೂ ಸಹ ಕೃಷ್ಣರವರು.

ದುಡಿವ ಜನರ ದಮನ

ಕರ್ನಾಟಕದಲ್ಲಿ ಕೈಗಾರಿಕೆಗಳು ಬೆಳೆಯಲಿಲ್ಲ. ಶೇ 30 ರಷ್ಟು ಕೈಗಾರಿಕೆಗಳು ಮುಚ್ಚಿವೆ. ಇದರಲ್ಲಿ ಪ್ರತಿಷ್ಠಿತ ಕೈಗಾರಿಕೆ ಒಳಗೊಂಡು ಯಾವ ಕೈಗಾರಿಕೆಯೂ ಪುನರಾರಂಭಗೊಳ್ಳಲಿಲ್ಲ. ಕಾರ್ಮಿಕರು ಬೀದಿಪಾಲಾಗುವುದು ತಪ್ಪಲಿಲ್ಲ. ಉದಾರೀಕರಣದ ಧಾಳಿ ನಿಲ್ಲಲಿಲ್ಲ. ಹೀಗೆ ಪರಿತಾಪದಲ್ಲಿರುವ ಕಾರ್ಮಿಕ ವರ್ಗವನ್ನು ಇನ್ನೂ ಸುಲಿಯಲು, ಮೇಲೇಳದಂತೆ ದಮನಿಸಲು ಕೃಷ್ಣರ ಸರ್ಕಾರ ಮುಂದಾಯಿತು. ಕೇಂದ್ರದ ವಾಜಪೇಯಿ ಸರ್ಕಾರದಂತೆ ಕಾರ್ಮಿಕ ಕಾನೂನುಗಳಿಗೆ ಕರಾಳ ತಿದ್ದುಪಡಿ ತರಲು ಮುಂದಾಯಿತು. ಸರ್ಕಾರಿ ಆಡಳಿತ ಯಂತ್ರ ನೌಕರರನ್ನು ಕಡಿತಗೊಳಿಸಿದ್ದು, ಖಾಲಿ ಹುದ್ದೆಗೆ ನೇಮಕಾತಿ ಮಾಡದೇ ವಿಭಾಗಗಳನ್ನೇ ಮುಚ್ಚಿದ್ದು, ಹಲವು ಸರ್ಕಾರಿ ಇಲಾಖೆ ಕೆಲಸಗಳನ್ನು ಖಾಸಗೀಕರಿಸಲು ಮುಂದಾಯಿತು. ಅದಕ್ಕಾಗಿ ಹಾರ್ನಳ್ಳಿ ರಾಮಸ್ವಾಮಿ ವರದಿ ತಯಾರಾಯಿತು. ಮಾತ್ರವಲ್ಲ ಸರ್ಕಾರಿ ನೌಕರರ ಕನಿಷ್ಟ ಹಕ್ಕು-ಅವಕಾಶಗಳನ್ನು ಕಬಳಿಸಲು, ಸರ್ವಾಧಿಕಾರದ ಹಿಡಿತ ತರಲು ಶಿಸ್ತಿನ ಹೆಸರಲ್ಲಿ ದಬ್ಬಾಳಿಕೆಯ 'ನೀತಿ ಸಂಹಿತೆ' ಸಿದ್ಧವಾಯಿತು.

ಜೀವ ಬಿಡುತ್ತಿರುವ ಕೃಷಿ - ಕೈಗಾರಿಕಾ

ರೈತ ಕುಟುಂಬಗಳು ಆತ್ಮಹತ್ಯೆಗೀಡಾಗದ ದಿನವೊಂದು ಇಲ್ಲವೆಂಬ ಸ್ಥಿತಿ ನಿರ್ಮಾಣವಾಗಿದೆ. ಫಸಲಿಗೆ ಬೆಲೆ ಇಲ್ಲದೇ, ಸಾಲಗಾರರ ಕಾಟ ತಾಳದೇ ಸಾವಿನ ಕುಣಿಕೆಗೆ ಕೊರಳ ಕೊಟ್ಟವರು ಮಣ್ಣಿನ ಮಕ್ಕಳು. ಕೃಷಿ ರಂಗದ ಈ ಬಿಕ್ಕಟ್ಟಿನ ಬಗ್ಗೆ ಉದ್ಭವವಾದ ಸಮಸ್ಯೆಗಳನ್ನು ಪರಿಹರಿಸಲು ಕನಿಷ್ಟ ಚರ್ಚೆಯೂ ನಡೆಯಲಿಲ್ಲ. ಬ್ಯಾಂಕ್ - ಮುಂತಾದ ಸಂಸ್ಥೆಗಳಿಂದ ಸಾಲವೂ ಸಿಗಲಿಲ್ಲ. ಗ್ರಾಮೀಣ ಶ್ರೀಮಂತ ಸಾಲಗಾರರ ಕಪಿಮುಷ್ಟಿಯಿಂದ ರೈತರನ್ನು ಪಾರು ಮಾಡಲಿಲ್ಲ. ಬದಲಾಗಿ 'ಹಳೆಯ ಸಾಲ ವಸೂಲಾತಿ ಬೇಟೆ ತೀವ್ರವಾಯಿತು. ಪ್ರತಿಭಟನೆ ನಂತರ ಸ್ವಲ್ಪ ಹಿಂದೆ ಸರಿಯಲಾಯ್ತು. ಕೃಷಿಯ ಅತ್ಯವಶ್ಯಕವಾದ ವಿದ್ಯುತ್‌ನ ದರಗಳನ್ನು ಹೆಚ್ಚಿಸಲು ಅಡಿ ಇಡಲಾಯಿತು. ಹಳೆ ಬಾಕಿ ಹೆಸರಲ್ಲಿ ಡಿಸ್‌ಕನೆಕ್ಷನ್ ಮಾಡಬಯಸಿತು. ರಾಜ್ಯದ ವಿವಿಧೆಡೆ ಚಳುವಳಿ ನಡೆದಿದ್ದರಿಂದ ಅಲ್ಲಲ್ಲಿ ಕೊಂಚ ಹೆಚ್ಚು ಹಿಂದೆ ಸರಿಸಿದೆ ನಿಜ. ಆದರೆ ಪ್ರಸ್ತಾವಗಳು ಹಾಗೆ ಇದ್ದು ಮುಂದೊಂದು ದಿನ ಕತ್ತಿನ ಮೇಲೆ ಕತ್ತಿ ಜಾರಲಾರದು ಎಂದು ಹೇಳಲಾಗದು.

ಕೇಂದ್ರಕ್ಕೆ ತಲೆಬಾಗಿದ ಸರ್ಕಾರ

ರಾಜ್ಯವೇ ನಲುಗಿದ ಭೀಕರ ಬರಕ್ಕೆ ಈ ಸರ್ಕಾರದ ಕ್ರಮಗಳು ತೀರಾ ನಿರ್ಲಕ್ಷ್ಯತನದ್ದು. ಬರೀ ಬಾಯಿ ಮಾತಿನಲ್ಲೇ ಬರ ಕಾಮಗಾರಿ ನಡೆದವು. ಮೇವು, ನೀರು, ಕೆಲಸವಿಲ್ಲದೇ ನರಳಿದ ಪರಿತಾಪ ಅವರ್ಣನೀಯ. ಕೇಂದ್ರದೊಂದಿಗೆ ಹೆಚ್ಚಿನ ನೆರವಿಗೂ ಹೋರಾಡದೆ ಕೇಂದ್ರ-ರಾಜ್ಯ ಸರ್ಕಾರಗಳೆರಡೂ ವರದಿಗಳ ವಂಚನೆಯಲ್ಲಿ ಕಾಲ ಕಳೆದವು. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದ ಅಪಪ್ರಚಾರದ ನಿಜ ಏನೆಂದು ಹೊರಗೆಡಹಿ ಎಂದು ಮುಖ್ಯಮಂತ್ರಿಗಳನ್ನು ಸರ್ವಪಕ್ಷಗಳ ಸಭೆಯಲ್ಲಿ ಆಗ್ರಹಿಸಿದರೆ ಎನ್‌ಡಿಎ ಸರ್ಕಾರದ ಜೊತೆ ಸಂಘಟಿಸುವುದು ನಮಗೆ ಆಗದು' ಎಂಬ ಮಾತನ್ನು ಆಡಿಬಿಟ್ಟರು ಕೃಷ್ಣ. ಇದು ಕೇವಲ ಇದಕ್ಕೆ ಮಾತ್ರವಲ್ಲ ಇಡೀ ಸರ್ಕಾರವೇ ಕೇಂದ್ರದ ಆರ್ಥಿಕ ನೀತಿಗಳನ್ನೇ ಅನುಸರಿಸುತ್ತದೆ ಮತ್ತು ಆದರೊಂದಿಗೆ ಹೊಂದಾಣಿಕೆಯಿಂದ ಇರಬಯಸುತ್ತದೆ.ಇಲ್ಲವಾದರೆ ಕೇಳಬೇಕಲ್ಲ ಧಣಿಗಳು!

ಖಾಸಗಿ ಧಣಿಗಳ ಕೈಗೆ ಶಿಕ್ಷಣ

ಶಿಕ್ಷಣ ಕ್ಷೇತ್ರದಲ್ಲಿಯೂ ದಿವಾಳಿ ಸ್ಥಿತಿ ಕ್ಷಣದ ಖಾಸಗೀಕರಣ, ವ್ಯಾಪಾರೀಕರಣಕ್ಕೆ ಮುಕ್ತವಾದ ಅವಕಾಶ ಕಲ್ಪಿಸುತ್ತಿದೆ. ಶುಲ್ಕಗಳ ಹೆಚ್ಚಳ, ಸರ್ಕಾರಿ ಶಾಲೆಗಳು ಖಾಸಗೀಕರಣ, ಹೈಟೆಕ್ ಅರಸರಾದ ವಿಪ್ರೊದ ಅಜಿಂ ಪ್ರೇಮ್‌ಜಿಯಂತಹ ಗುತ್ತೇದಾರಿ ಕಂಪನಿ ಮಾಲೀಕರಿಗೆ ಉತ್ತರ ಕರ್ನಾಟಕದ ಶಿಕ್ಷಣ ಉದ್ಧಾರದ ಕೆಲಸ ವಹಿಸಿರುವುದು, ಸ್ಥಳೀಯ ಶಾಲೆಗಳು ನಿರ್ವಹಣೆ ಸ್ಥಳೀಯರಿಗೆ ನೀಡುವುದು, ಸಂಪನ್ಮೂಲ ಕ್ರೋಢೀಕರಿಸಲು ಹೇಳುವುದು, ಶಿಕ್ಷಕರ ನೇಮಕಾತಿಯಲ್ಲಿ ತೀರಾ ಗೊಂದಲ ಸೃಷ್ಟಿಸಿ, ನಿರುದ್ಯೋಗಿಗಳನ್ನು ಸುಲಿಯುವುದಷ್ಟೇ ಅಲ್ಲ ವ್ಯಾಪಕ ಭ್ರಷ್ಟಾಚಾರಕ್ಕೆ ಅನುವು ಮಾಡಿರುವುದು, ಇವುಗಳನ್ನೇ ಸಾಧನೆಯನ್ನಬೇಕೆ? ಶಿಕ್ಷಕ ಸಮುದಾಯದ ಹೋರಾಟ ದಮನಿಸಿದ್ದು ದಾಖಲೆ ಎನ್ನಬೇಕೋ? ಪ್ರಜಾಪ್ರಭುತ್ವ ವಿರೋಧಿ ಶಿಕ್ಷಣ ಮಸೂದೆ ಅಂಗೀಕಾರ ಕೃಷ್ಣ ಸರ್ಕಾರಕ್ಕೆ ಒಂದು ಕಪ್ಪು ಚುಕ್ಕೆ.

ಜಾತಿವಾದಿ, ಕೋಮುವಾದಿಗಳ ಅಟ್ಟಹಾಸ

ಕಂಬಾಲಪಲ್ಲಿ ದಲಿತರ ಸಜೀವ ದಹನದ್ದು ಸಹ ದಲಿತರ ಮೇಲಿನ ದೌರ್ಜನ್ಯಗಳು, ಬಳ್ಳಾರಿ ಜಿಲ್ಲೆಯ ವಣೇನೂರು ದಲಿತ ಮಹಿಳೆ ಎರೆಮ್ಮಳ ಬೆತ್ತಲೆ ಮೆರವಣಿಗೆ ಪ್ರಕರಣ ತಲೆ ತಗ್ಗಿಸಬೇಕಾದವುಗಳು. ಹಾಗೆ ಕೃಷಿ ವಿ.ವಿ. ಜಮೀನು ಪರಭಾರೆ, ಅದನ್ನು ವಿರೋಧಿಸಿದವರಿಗೆ ಪೋಲೀಸರಿಂದ ಬಡಿಸಿದ್ದು, ಕುಮಸಗಿ

ಪುಟ 10 ಕ್ಕೆ

ಜಿಂದಾಲ್ ಉಕ್ಕಿನ ಕಾರ್ಖಾನೆ ಆಡಳಿತದ ಮೋಸ, ದಬ್ಬಾಳಿಕೆ: ಸಿಡಿದೆದ್ದ ಜನತೆ

ಉದಾರೀಕರಣದ ಆರಾಧಕ ಕೇಂದ್ರ ಸರ್ಕಾರ ಎಳ್ಳುನೀರು ಸರ್ಕಾರಿ ಸ್ವಾಮ್ಯದ ವಿಜಯನಗರ ಉಕ್ಕಿನ ಕಾರ್ಖಾನೆಯ ಬೃಹತ್ ಯೋಜನೆಗೆ ಬಿಟ್ಟಮೇಲೆ, ಆರಂಭಗೊಂಡ ಖಾಸಗಿ ಸಂಸ್ಥೆ ಜಿಂದಾಲ್ ಉಕ್ಕಿನ ಕಾರ್ಖಾನೆ. ತಮ್ಮ ಬದುಕಿಗೊಂದು ಆಸರೆಯಾಗುತ್ತದೆಯೆಂದು ಭಾವಿಸಿದ್ದ ಈ ಪ್ರದೇಶದ ಜನರ ಪಾಲಿಗೆ ಈಗ ಕಿರಾತಕವಾಗಿದೆ. ಕಾರ್ಖಾನೆಗೆ ಭೂಮಿ ಬಿಟ್ಟುಕೊಟ್ಟ ರೈತರು ಹಾಗೂ ನಿರುದ್ಯೋಗಿಗಳನ್ನು ಬೆನ್ನಟ್ಟಿ ಓಡಿಸುವ, ಕಾರ್ಮಿಕರನ್ನು ಮನಬಂದಂತೆ ಬಡಿಯುವ ರಕ್ಕಸತನ ತೋರುತ್ತಿದೆ. ಎಲ್ಲವನ್ನೂ ಕೈಗಾರಿಗೋದ್ಯಮಿಗಳೇ ನಿರ್ಧರಿಸಲಿ ಎಂಬ ಸರ್ಕಾರ, ಅದರ ವಿರುದ್ಧ ಸಿಡಿದೆದ್ದ ಹೋರಾಟದ ವರದಿಯಿದು.

ವರದಿ: **ಬಿ.ಗಣೇಶ್**

ಬಳ್ಳಾರಿ ಜಿಲ್ಲೆ ಖನಿಜ ಸಂಪತ್ತುಗಳ ಬೆಟ್ಟಗಳ ಸಾಲು ಸಾಲು. ಇವುಗಳನ್ನು ಸರಿಯಾಗಿ ಬಳಸಿಕೊಂಡರೆ ಬಳ್ಳಾರಿ ಜಿಲ್ಲೆ ಹಾಗೂ ಕರ್ನಾಟಕ ರಾಜ್ಯ ಅಭಿವೃದ್ಧಿ ಹೊಂದುತ್ತದೆ. ಕರ್ನಾಟಕದ ಲಕ್ಷಾಂತರ ಯುವಜನರಿಗೆ ಉದ್ಯೋಗ ಸೃಷ್ಟಿ ಆಗುತ್ತದೆ. ವ್ಯಾಪಾರ ವಹಿವಾಟುಗಳು ಜಾಸ್ತಿ ಆಗಿ ಇದೊಂದು ಮಿನಿ ಬಾಂಬೆ ಆಗುತ್ತದೆ ಎಂಬ ಉದ್ದೇಶದಿಂದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಸಂಘಟನೆಗಳು ದಶಕಗಳ ಕಾಲ ಹೋರಾಟ ಮಾಡಿದವು.

ಹಿಂದೆ ಕಾಂಗ್ರೆಸ್‌ನ ಕೇಂದ್ರ ಸರ್ಕಾರ 1971 ರಲ್ಲಿ ಜಿಲ್ಲೆಯ ತೋರಣಗಲ್ಲು ಪ್ರದೇಶದಲ್ಲಿ ಅಂದಿನ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರು ವಿಜಯನಗರ ಉಕ್ಕಿನ ಕಾರ್ಖಾನೆಗೆ ಅಡಿಗಲ್ಲು ಹಾಕಿದರು. ಆ ಸಂದರ್ಭದಲ್ಲಿ ಈ ಕಾರ್ಖಾನೆ ಸ್ಥಾಪನೆಗಾಗಿ ಸುಮಾರು ನಾಲ್ಕು ಸಾವಿರ ಎಕರೆ ಭೂಮಿಯನ್ನು ಕೆಲವು ಷರತ್ತುಗಳೊಂದಿಗೆ ರೈತರು ಕೇವಲ ಎರಡು ಸಾವಿರ ರೂಪಾಯಿಗಳಿಗೆ ಎಕರೆಯಂತೆ ಮಾರಾಟ ಮಾಡಿದರು. ಭೂಮಿ ಕೊಟ್ಟ ರೈತರ ಕುಟುಂಬದ ಸದಸ್ಯರಿಗೆ ಉದ್ಯೋಗ ಕೊಡುವ ಭರವಸೆಯನ್ನು ನೀಡಲಾಯಿತು.

ಭೂಮಿ ಕಳೆದುಕೊಂಡ ರೈತ, ನಿರುದ್ಯೋಗಿಯಾದ ಮಗ, ದಿವಾಳಿ ಎದ್ದ ಕೂಲಿಕಾರ

ಹಲವು ಆಕಾಂಕ್ಷೆಗಳಿಂದ ರೈತರು ಕಾರ್ಖಾನೆಗೆ ತಮ್ಮ ಭೂಮಿಯನ್ನು ಮಾರಾಟ ಮಾಡಿದ್ದರಿಂದ ಭೂಮಿ ಇಲ್ಲದೇ ಪರಿತಪಿಸಬೇಕಾಯಿತು. ರೈತರ ಮಕ್ಕಳು ಉದ್ಯೋಗ ಇಲ್ಲದೇ ಅಲೆಯುವಂತಾಯಿತು. ಭೂಮಿಯಲ್ಲಿ ಕೂಲಿನಾಲಿ ಮಾಡುತ್ತಿದ್ದ ಸುಮಾರು 10 ಗ್ರಾಮಗಳ ಸಾವಿರಾರು ಜನ ಕೂಲಿಕಾರರು ನಿರುದ್ಯೋಗದ ಕಷ್ಟವನ್ನು ಅನುಭವಿಸುವಂತಾಯಿತು. ಕೆಲವು ಕೂಲಿಕಾರರು ಊರು ಬಿಡುವ ಪರಿಸ್ಥಿತಿ ನಿರ್ಮಾಣವಾಯಿತು. ಸಮುದ್ರದ ಮೀನನ್ನು ದಂಡೆಗೆ ಎಸೆದಂತಾಯಿತು ಈ ರೈತ - ಕೂಲಿಕಾರ ಯುವಜನರ ಬದುಕು.

ಕೇಂದ್ರ ಸರ್ಕಾರದ ಉದ್ಯಮದಬದಲು ಜಿಂದಾಲ್ ಎಂಬ ಖಾಸಗಿ ಉದ್ಯಮ

ಹಲವಾರು ವರ್ಷಗಳಾದರೂ ಕೇಂದ್ರ ಸರ್ಕಾರ ಅಲ್ಲಿ ಕಾರ್ಖಾನೆ ಮಾಡಲು ಸಾಧ್ಯವಾಗದೆ ಕೈಲಾಗದ ಕೇಂದ್ರ ಸರ್ಕಾರ ಜಿಂದಾಲ್ ಎಂಬ ಶ್ರೀಮಂತರಿಗೆ ಕಾರ್ಖಾನೆ ಮಾಡಲು ಅನುಮತಿ ನೀಡಿ ಸರ್ಕಾರದ ಭೂಮಿಯನ್ನು ಮಾರಿ ಕೈತೊಳೆದುಕೊಂಡಿತು. ಆಗ ಸರ್ಕಾರ ಈ ಜಿಂದಾಲ್ ಎಂಬ ಶ್ರೀಮಂತರಿಗೆ ಭೂಮಿ ಕೊಟ್ಟು ರೈತರಿಗೆ ಉದ್ಯೋಗ ಕೊಡಬೇಕು ಎಂಬ ಇನ್ನು ಹಲವಾರು ಷರತ್ತುಗಳೊಂದಿಗೆ ಒಪ್ಪಿಗೆ ನೀಡಿತು.


ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿದ ಜಿಂದಾಲ್

ಸರ್ಕಾರ ಹಲವಾರು ಷರತ್ತುಗಳನ್ನು ಹಾಕಿದ್ದರೂ ಎಲ್ಲವನ್ನು ನಗ್ನವಾಗಿ ಉಲ್ಲಂಘಿಸಿ ದರ್ಪದಿಂದ ಮೆರೆಯುತ್ತಿದ್ದಾರೆ ಈ ಜಿಂದಾಲ್ ಮಾಲಿಕರು. ಸುಮಾರು ಐವತ್ತು ಸಾವಿರ ಜನ ಕೆಲಸ ಮಾಡುವಂತಹ ಈ ಕಾರ್ಖಾನೆಯಲ್ಲಿ ಈಗ ಕೇವಲ 1500 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಸ್ಥಳೀಯರು (ತೋರಣಗಲ್ಲು ಸುತ್ತಮುತ್ತ ಇರುವವರು) ಕೇವಲ 300 ಕ್ಕೂ ಕಡಿಮೆ ಜನ ಇದ್ದಾರೆ. ಇನ್ನುಳಿದ 1200 ಜನ ಕಾರ್ಮಿಕರು ಬೇರೆ ಬೇರೆ ರಾಜ್ಯಗಳಿಂದ ಬಂದಂತಹ ಕಾರ್ಮಿಕರು.

ಇನ್ನು ಸುಮಾರು 500 ಜನ ಇದ್ದಾರೆ. ಇವರೆಲ್ಲರೂ ಗುತ್ತಿಗೆ ಕಾರ್ಮಿಕರು. ಇವರಿಗೆ ಯಾವುದೇ ಸೌಲಭ್ಯಗಳು ಇಲ್ಲ. ಸಮಯದ ನಿಗದಿ ಇಲ್ಲ ದನಗಳಂತೆ ದುಡಿಸಿಕೊಳ್ಳುತ್ತಿದ್ದಾರೆ. ಒಟ್ಟಾರೆ ಈ ಜಿಂದಾಲ್ ಎಂಬ ಮಾಲಿಕ ತನ್ನ ಉಳಿವಿಗಾಗಿ ಹಲವಾರು ಭಾಷೆ ಹಾಗೂ ಹಲವಾರು ರಾಜ್ಯಗಳಿಂದ ಕಾರ್ಮಿಕರನ್ನು ತಂದು ದುಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಕಾರ್ಮಿಕರೆಲ್ಲ ಒಂದಾಗುವ ಸಾಧ್ಯತೆ ಕಡಿಮೆ. ಸಂಘಟನೆಗಳನ್ನು ಮಾಡಿಕೊಳ್ಳುವುದು ಕೂಡ ಸಾಧ್ಯವಿಲ್ಲ. ಇವುಗಳನ್ನೆಲ್ಲ ಬಹಳ ವ್ಯವಸ್ಥಿತವಾಗಿ ಈ ಮಾಲೀಕ ಮಾಡುತ್ತಿದ್ದಾರೆ.

ಡಿವೈಎಫ್‌ಐ ಪ್ರಚಾರಾಂದೋಲನ

ಈ ಎಲ್ಲಾ ಸಮಸ್ಯೆಗಳನ್ನು ಅರಿತು ಡಿವೈಎಫ್‌ಐ ತೋರಣಗಲ್ಲು ವಲಯ ಸಮಿತಿ , ಕಾರ್ಮಿಕರ, ರೈತ, ಕೂಲಿಕಾರರ ಸಮಸ್ಯೆ, ನಿರುದ್ಯೋಗಿ ಯುವ ಜನರ ಸಮಸ್ಯೆಗಳನ್ನು ಹಾಗೂ ಮಾಲಕರ ಗೂಂಡಾಗಿರಿ ದಬ್ಬಾಳಿಕೆಯ ಬಗ್ಗೆ ಚರ್ಚಿಸಿ ತಾರೀಖು 13.8.01 ರಿಂದ 16.8.01 ರವರೆಗೆ ನಾಲ್ಕು ದಿನಗಳ ಕಾಲ ಧರಣಿ ಸತ್ಯಾಗ್ರಹ ಮಾಡಿ ಈ ಭಂಡ ಸರ್ಕಾರಗಳಿಗೆ ಎಚ್ಚರಿಕೆ ನೀಡಿತು. ತಾರಿಖು 5.8.01 ರಿಂದ ಪ್ರತಿಹಳ್ಳಿ ಹಳ್ಳಿಗೂ ಪ್ರಚಾರಾಂದೋಲನ ಪ್ರಾರಂಭಿಸಿದೆವು. ಸಾವಿರಾರು ಕರಪತ್ರಗಳನ್ನು ಮುದ್ರಿಸಿ ಎಲ್ಲಾ ಹಳ್ಳಿಗಳಿಗೂ ಹಂಚಿದರು. ಪ್ರತಿಗ್ರಾಮಗಳಲ್ಲಿ ಡಿವೈಎಫ್‌ಐ ಸಂಘಟನೆಯ ಸದಸ್ಯತ್ವ ನೋಂದಾವಣೆ ಮಾಡಿ ಪಟಕಗಳ ರಚನೆ ಮಾಡಿದರು.ಸಭೆಗಳು ನಡೆದವು. ಪ್ರತಿಗ್ರಾಮಗಳಲ್ಲಿ ನೂರಾರು ಜನ ಭಾಗವಹಿಸಿ ನಮ್ಮ ಹೋರಾಟಕ್ಕೆ ಸ್ಪಂದನೆ ನೀಡಿದರು. ಮನೆ ಮನೆಗೆ ತೆರಳಿ ಹಣ ಸಂಗ್ರಹ ಮಾಡಿ ಕೊಟ್ಟರು. ಆಗಸ್ಟ್ 13 ರಂದು ಎಲ್ಲಾ ಹಳ್ಳಿಗಳಿಂದ ನೂರಾರು ಯುವಜನರು ಬ್ಯಾನರ್, ಬಾವುಟಗಳೊಂದಿಗೆ ಲಾರಿಯಲ್ಲಿ ಘೋಷಣೆ ಕೂಗುತ್ತಾ ನಗರದ ಶ್ರೀದುರ್ಗಮ್ಮ ದೇವಸ್ಥಾನದ ಹತ್ತಿರ ಸೇರಿ ಜಿಲ್ಲಾಧಿಕಾರಿಯವರ ಕಛೇರಿ ಮುಂಭಾಗ ಧರಣಿ ಸತ್ಯಾಗ್ರಹ ಪ್ರಾರಂಭಿಸಿದರು.



ತೋರಣಗಲ್ ಜಿಂದಾಲ್ ಕಾರ್ಖಾನೆ

ಧರಣಿ ಸತ್ಯಾಗ್ರಹ

ರಾಜ್ಯ ಮುಖಂಡರಾದ ಎಸ್.ವೈ.ಗುರುಶಾಂತ್‌ರವರು ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ಸಂಘಟನೆಗಳು ಬಳ್ಳಾರಿ ಜಿಲ್ಲೆಯಲ್ಲಿ ಪ್ರಾರಂಭವಾದ್ದು ಹಾಗೂ ಕೇಂದ್ರ ಸರ್ಕಾರದ ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ ಜಿಲ್ಲೆಯಾದ್ಯಂತ ಮಾಡಿದ ಸೈಕಲ್ ಹಾಗೂ ಜೀಪ್ ಜಾಥಾಗಳ ಬಗ್ಗೆ ಪ್ರತಿ ತಾಲೂಕುಗಳಲ್ಲಿ ಮಾಡಿದ ಪ್ರಚಾರಾಂದೋಲನದ ಬಗ್ಗೆ ವಿವರಿಸಿ ಧರಣಿ ಉದ್ಘಾಟಿಸಿದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಬಿ.ಗಣೇಶ್ ಸಹ ಮಾತನಾಡಿದರು.

ಆಳುವ ಸರ್ಕಾರದ ವಿರುದ್ಧ ಸಿಡಿದೆದ್ದ ಯುವಜನರು

ಆಗಸ್ಟ್ 13 ಮತ್ತು 14 ರಂದು ಎರಡು ದಿನ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಕುಳಿತರು ಅಲ್ಲಿಗೆ ಯಾವುದೇ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲೀ ಬರಲೇ ಇಲ್ಲ. ಇಂತಹ ಶ್ರೀಮಂತರ ಪರವಾದ ಭಂಡ ಸರ್ಕಾರಕ್ಕೆ ಸರಿಯಾದ ಎಚ್ಚರಿಕೆ ಕೊಡಲು ಹಾಗೂ ಹೋರಾಟವನ್ನು ತೀವ್ರಗೊಳಿಸಲು ಯುವಕರು ಸಿದ್ದರಾದರು. ಆಗಸ್ಟ್ 15 ರಂದು ತಮ್ಮ ಕ್ಷೇತ್ರದ ಶಾಸಕರೂ ಸಚಿವರೂ ಆದ ಎಂ.ವೈ.ಘೋರ್ಪಡೆಯವರನ್ನು ಘೇರಾವ್ ಮಾಡಲು ಸಿದ್ದರಾದರು.

ಆಗಸ್ಟ್ 15 ರ ಸ್ವಾತಂತ್ರ್ಯ ಸಂಭ್ರಮ

ಸಚಿವರಿಗೆ ಘೇರಾವ್

ಆಗಸ್ಟ್ 15 ರ ಬೆಳಿಗ್ಗೆ ಬಳ್ಳಾರಿ ನಗರದಲ್ಲಿ ಹಬ್ಬದ ವಾತಾವರಣ ಹರಡಿತ್ತು. ಎಲ್ಲಿ ನೋಡಿದರೂ ಬಣ್ಣದ ಹಾಳೆಗಳ ಅಲಂಕಾರ. ಎಲ್ಲ ಕಛೇರಿ ಹಾಗೂ ಮನೆಗಳ ಮುಂಭಾಗದಲ್ಲಿ ರಂಗೋಲಿಗಳ ಅಲಂಕಾರ. ಸುತ್ತಮುತ್ತಲೂ ಸ್ವಚ್ಛತೆಯಿಂದ ಕೂಡಿತ್ತು.

ಶಾಲಾಮಕ್ಕಳ ಸಾಲು ಸಾಲು ಸಮವಸ್ತ್ರಗಳ, ಪೋಲೀಸ್, ಗೃಹರಕ್ಷಕ ದಳ, ಎನ್‌ಸಿಸಿ ಹಾಗೂ ನಗರದ ನಾಗರಿಕರೆಲ್ಲ ಪ್ರಮುಖ ರಸ್ತೆಗಳಲ್ಲಿ ತುಂಬಿ ಹರ್ಷದ ವಾತಾವರಣ ತುಂಬಿ ತುಳುಕುತ್ತಿತ್ತು. ಅದೇ ಸಮಯ ಬೆಳಿಗ್ಗೆ 8 ಕ್ಕೆ ಡಿವೈಎಫ್‌ಐ ಸಂಘಟನೆಯ ಯುವಕರು ಮತ್ತೊಂದು ತುಂಬಿದ ಲಾರಿಯಲ್ಲಿ ನಿರುದ್ಯೋಗದ ವಿರುದ್ಧ ಘೋಷಣೆ ಕೂಗುತ್ತ ಧರಣಿ ನಡೆಯುವ ಸ್ಥಳಕ್ಕೆ ಬಂದು ಸೇರಿದರು.

ಜಿಲ್ಲಾಧಿಕಾರಿ ಕಛೇರಿಯಿಂದ ಎಲ್ಲರೂ ಸಾಲಾಗಿ ಬ್ಯಾನರ್ ಹಾಗೂ ಬಾವುಟ ಹಿಡಿದುಕೊಂಡು ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಮೂಲಕ ಆಕರ್ಷಕ ಘೋಷಣೆಗಳ ಸುರಿಮಳೆಗಳೊಂದಿಗೆ ನಗರದ ಜನತೆಯ ಗಮನ ಸೆಳೆದರು.

ಧ್ವಜಾರೋಹಣ ನಡೆಯುವ ಸ್ಥಳಕ್ಕೆ ಆಗಮಿಸಿ ಸಚಿವರು ಹೋಗುವ ದಾರಿಗೆ ಅಡ್ಡಗಟ್ಟಿ ನಿಲ್ಲಿಸಿ ರಸ್ತೆ ತಡೆ ಮಾಡಿ ಕುಳಿತು ಪ್ರತಿಭಟಿಸಿದರು.

ಗ್ರಾಮೀಣಾಭಿವೃದ್ಧಿ ಸಚಿವ ಎಂ.ವೈ.ಘೋರ್ಪಡೆಯ ಭರವಸೆ

ಸಚಿವ ಎಂ.ವೈ.ಘೋರ್ಪಡೆ ಯವರನ್ನು ಘೇರಾವ್ ಮಾಡಿದಾಗ ಜೊತೆಯಲ್ಲಿ ಪಂಚಾಯತ್ ರಾಜ್ ಸಚಿವ ದಿವಾಕರ ಬಾಬು ಹಾಗೂ ಸಂಸದ ಕೋಳೂರು ಬಸವನಗೌಡರು ಸಹ ಜೊತೆಯಲ್ಲಿ ಇದ್ದರು. ಡಿವೈಎಫ್‌ಐ ಮುಖಂಡರು ಧರಣಿಯ ಉದ್ದೇಶವನ್ನು ವಿವರಿಸಿ ಹೇಳಿದಾಗ ನನಗೆ ಯಾವುದೇ ವಿಷಯಗೊತ್ತಿಲ್ಲ, ನನ್ನ ಕ್ಷೇತ್ರದಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದರೂ ನನಗೇಕೆ ನೀವು ತಿಳಿಸಲಿಲ್ಲ ಎಂದು ಜಿಲ್ಲಾಧಿಕಾರಿಯವರನ್ನು ಪ್ರಶ್ನಿಸಿದರು! ಕೂಡಲೇ ಸಂಘಟನೆಯ ಮುಖಂಡರನ್ನು ಹಾಗೂ ಜಿಂದಾಲ್ ಮಾಲೀಕರನ್ನು ಹಾಗೂ ಜನಪ್ರತಿನಿಧಿಗಳನ್ನು ಕರೆದು ಸಭೆ ನಡೆಸಿ ಸಮಸ್ಯೆಗಳನ್ನು ಬಗೆಹರಿಸಲು ತಿಳಿಸಿದರು. ಹಾಗೂ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗಳಿಗೆ ನ್ಯಾಯಕೊಡಿಸಲು ಹೇಳಿದರು. ಡಾ. ಸರೋಜಿನಿ ಮಹಿಷಿ ವರದಿಯ ಶಿಫಾರಸುಗಳ ಉಲ್ಲಂಘನೆ ಬಗ್ಗೆ ವಿಧಾನಸಭೆಯಲ್ಲಿ ಕೂಡ ಮಾತನಾಡುತ್ತೇನೆ ಎಂದು ಹೇಳಿದ ನಂತರ ಕಾರ್ಯಕರ್ತರು ಸಚಿವರುಗಳಿಗೆ ಹೋಗಲು ಅವಕಾಶ ಮಾಡಿಕೊಡಲಾಯಿತು. ಆದರೆ ಇಷ್ಟು ದಿನಗಳಾದರೂ ಭರವಸೆ ಇತ್ತಿದ್ದ ಸರ್ಕಾರ ಏನು ಕ್ರಮ ವಹಿಸಿತು ಎಂಬುದು ತಿಳಿದಿಲ್ಲ!

ಮಾಲಕರ ದೌರ್ಜನ್ಯ ಹಾಗೂ ಪೋಲೀಸ್ ಇಲಾಖೆ

ಕಾರ್ಖಾನೆಯನ್ನು ಕಟ್ಟುವಾಗ ಸಾವಿರಾರು ಜನ ಸ್ಥಳೀಯರನ್ನು ದಿನಗೂಲಿಯಂತೆ ದುಡಿಸಿಕೊಂಡು ನಂತರ ಎಲ್ಲರನ್ನು ಮನೆಗೆ ಕಳಿಸಿದರು. ಆ ಸಂದರ್ಭದಲ್ಲಿ ಕೆಲವು ಜನ ಕಾರ್ಮಿಕರು ಕಟ್ಟಡದ ಮೇಲಿಂದ ಕೆಳಗೆ ಬಿದ್ದು ಸತ್ತಂತಹ ನಿದರ್ಶನಗಳಿವೆ. ಅವರ ಕುಟುಂಬಗಳಿಗೆ ಸರಿಯಾದ ಪರಿಹಾರ ಕೂಡ ಕೊಟ್ಟಿಲ್ಲ.

ಅನ್ಯಾಯಕ್ಕೆ ಒಳಗಾದಂತವರು ಪೋಲೀಸ್ ಠಾಣೆಯಲ್ಲಿ ಕೇಸನ್ನು ದಾಖಲಿಸಲು ಬಿಡಲಿಲ್ಲ. ಗೂಂಡಾಗಳು ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ. ಇತ್ತೀಚಿಗೆ ಜಾಫರ್ ಎಂಬ ವಡ್ಡು ಗ್ರಾಮದ ಕಾರ್ಮಿಕನನ್ನು ಅಮಾನುಷವಾಗಿ ಥಳಿಸಿದ್ದಾರೆ. ಮುಖಕ್ಕೆ ಆಸಿಡ್ ಎರಚಿ ಹೊಡೆದಿದ್ದಾರೆ. ಮುಖದ ಮೇಲೆ ವಿಚಿತ್ರ ಗಾಯಗಳಾಗಿವೆ. ಅದೇ ಗ್ರಾಮದ ಇನ್ನೊಬ್ಬ ಕೇವಲ 20 ವರ್ಷದ ಯುವಕ ಕೆಲಸ ಮಾಡುವಾಗ ಕಾಲಿನಪಾದದ ಮೇಲೆ ಕಬ್ಬಿಣ ಬಿದ್ದು ಗಾಯವಾಗಿ ಪಾದ ಅರ್ಧ ತುಂಡಾಗಿದೆ. ಆ ಯುವಕನಿಗೆ ಯಾವುದೇ ಪರಿಹಾರ ಕೊಡದೆ ಕಾರ್ಖಾನೆಯಿಂದ ಹೊರದಬ್ಬಿದ್ದಾರೆ. ಈ ಇಬ್ಬರು ವ್ಯಕ್ತಿಗಳನ್ನು ಸಚಿವ ಘೋರ್ಪಡೆಯವರಿಗೆ ತೋರಿಸಿದಾಗ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದರು. ಇಂತಹ ಅನೇಕ ದೌರ್ಜನ್ಯಗಳನ್ನು ಈಗಲೂ ರಾಜರೋಷವಾಗಿ ನಡೆಸುತ್ತಿದ್ದಾರೆ. ತೋರಣಗಲ್ಲು ಪೋಲಿಸ್ ಠಾಣೆಯಲ್ಲಿ ಕೇಸ್ ದಾಖಲಿಸಲು ಹೋದರೆ ಅಲ್ಲಿಯೂ ಕೂಡ ಪೋಲಿಸರಿಂದ ನಿರ್ಲಕ್ಷ್ಯದ ಮಾತು. ಇಲ್ಲವೇ ಅವರಿಂದ ಕೂಡ ಬೆದರಿಕೆಗಳು ನಡೆದಿವೆ.

ಅಸಹಾಯಕ ಜಿಲ್ಲಾಧಿಕಾರಿ ಜಾವೇದ್ ಅಕ್ತರ್

ಈ ಹಿಂದೆ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಡಿವೈಎಫ್‌ಐ ಸಂಘಟನೆಗಳು ಜಂಟಿಯಾಗಿ ಸ್ಥಳೀಯರಿಗೆ ಉದ್ಯೋಗದ ಪ್ರಾಶಸ್ತ್ಯಗಳಿಗೆ ಒತ್ತಾಯಿಸಿ ಹೋರಾಟ ಮಾಡಿದಾಗ ಮಾನ್ಯ ಜಿಲ್ಲಾಧಿಕಾರಿಗಳು ಜಿಂದಾಲ್‌ನ ಆಡಳಿತ ಮಂಡಳಿಯವರನ್ನು ಹಾಗೂ ನಮ್ಮ ಸಂಘಟನೆಯ ಮುಖಂಡರನ್ನು ಬಳ್ಳಾರಿಯಲ್ಲಿ ಸಭೆ ಕರೆದಾಗ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಹೇಳಿ ತಪ್ಪಿಸಿಕೊಂಡಿದ್ದಾರೆ. ಮಾಲೀಕರೂ ಮಾತು ಕೇಳುತ್ತಿಲ್ಲವಂತೆ. ಇಂತಹ ಅನೇಕ ಘಟನೆಗಳು ನಡೆಯುತ್ತಿದ್ದರೂ ಆಳುವ ಸರ್ಕಾರಗಳು ನೋಡಿದರೂ ನೋಡದಂತೆ ಕುಳಿತುಕೊಂಡಿವೆ. ಇವರು ಜಿಂದಾಲ್ ಮಾಲಿಕರನ್ನು ಎದುರು ಹಾಕಿಕೊಳ್ಳಲು ಸಾಧ್ಯವೆ. ಹೀಗಾದರೆ ನಮ್ಮಂತಹ ಬಡ ಜನಸಾಮಾನ್ಯರ ಗತಿ ಹೇಗೆ?

ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಜನತೆಯ ಪರ್ಯಾಯ-ಬೆಂಗಳೂರು ರ್‍ಯಾಲಿ ಕರೆ

ಅಕ್ಟೋಬರ್ 14 ರಂದು ಬೆಂಗಳೂರು ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸಂಭ್ರಮದ ರ್‍ಯಾಲಿ. ಮಾಜಿ ಪ್ರಧಾನಿ ದೇವೇಗೌಡ ನೇತೃತ್ವದಲ್ಲಿನ ಜನತಾದಳ(ಎಸ್)ನ ರ್‍ಯಾಲಿಯಲ್ಲಿ ಪೀಪಲ್ಸ್ ಫ್ರಂಟ್‌ನ ಎಲ್ಲಾ ಮುಖಂಡರು ಭಾಗವಹಿಸಿದ್ದರು. ಮಾಜಿ ಪ್ರಧಾನಿ ವಿ.ಪಿ.ಸಿಂಗ್, ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ, ಸಿಪಿಐ ಮುಖಂಡ ರಾಘವನ್, ರಾಜ್ಯದ ಮಾಜಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲಾದವರು ಭಾಗವಹಿಸಿದ್ದ ರ್‍ಯಾಲಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ರೈತರು, ನಾಗರಿಕರು ಹಾಜರಿದ್ದರು.



ಕೇಂದ್ರದ ಬಿಜೆಪಿ ಸರಕಾರ ಮತ್ತು ರಾಜ್ಯದ ಕಾಂಗ್ರೆಸ್ ಸರಕಾರದ ನೀತಿಗಳಿಂದ ಬೇಸತ್ತ ರಾಜ್ಯದ ಜನತೆಗೆ ಇದೊಂದು ಆಶಾದಾಯಕ ಬೆಳವಣಿಗೆ. ಕೃಷ್ಣ ಸರ್ಕಾರವು ಎರಡು ವರುಷಗಳ ಅಧಿಕಾರದ ಅವಧಿಯನ್ನು ಮುಗಿಸಿದ ಹಿನ್ನೆಲೆಯಲ್ಲಿ 5 ಕೋಟಿ ಜನತೆ ಹೆಚ್ಚಿನದೇನನ್ನು ನಿರೀಕ್ಷಿಸಲು ಸಾಧ್ಯವಾಗಿಲ್ಲ. ಎಲ್ಲಾ ಕೃಷಿ ಉತ್ಪಾದನೆಗಳ ಬೆಲೆ ದಿಢೀರನೆ ಕುಸಿದರೂ ಮಾರುಕಟ್ಟೆ ಪ್ರವೇಶಿಸಿ, ಖರೀದಿ ನಡೆಸಿ ರೈತರ ಜೀವ ಉಳಿಸಲು ಕಾಂಗ್ರೆಸ್ ಸರಕಾರಕ್ಕೆ ಸಾಧ್ಯವಾಗಿಲ್ಲ. ನುಸಿಪೀಡೆಯಿಂದ ಬಳಲುತ್ತಿದ್ದ ತೆಂಗಿನ ಬೆಳೆಗಾರರು ಅದನ್ನು ಹೋಗಲಾಡಿಸಲು 'ನೀರಾ' ಇಳಿಸುತ್ತೇವೆಂದು ಅಂಗಲಾಚಿ ಬೇಡಿಕೊಂಡರೂ ಚಳುವಳಿಗೆ ಇಳಿದರೂ ಕೃಷ್ಣನ ಕಲ್ಲು ಹೃದಯ ಕರಗಲಿಲ್ಲ. ಅದು ಅಬಕಾರಿ ಲಾಬಿಗೆ ಮಾರಾಟವಾಗಿ ಹೋಗಿತ್ತು. ಆದ್ದರಿಂದಲೇ ಚನ್ನಪಟ್ಟಣದ ವಿಠೇಲನ ಹಳ್ಳಿಯ ರೈತರು ನೀರಾ ಚಳುವಳಿ ನಡೆಸುತ್ತಿದಾರೆ. ಇಬ್ಬರು ಅಮಾಯಕರು ಪೋಲೀಸರ ಗುಂಡಿಗೆ ಬಲಿಯಾಗಬೇಕಾಯಿತು.

ಅತ್ತ ಕೇಂದ್ರ ಸರ್ಕಾರದ ವರ್ಚಸ್ಸು ದಿನೇ ದಿನೇ ಕುಗ್ಗುತ್ತಿದೆ. ಆದ್ದರಿಂದಲೇ ಕೋಮುವಾದದ ವಿಷ ಜ್ವಾಲೆಯನ್ನು ಹಬ್ಬಿಸಲಾಗುತ್ತಿದೆ. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ವಿಶ್ವ ಹಿಂದೂ ಪರಿಷತ್ತಿನ ಅಧ್ಯಕ್ಷ ಅಶೋಕ್ ಸಿಂಘಾಲ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಹಬ್ಬಿದ ಗಲಭೆ ಹಿಂದೂ ಮುಸ್ಲಿಂ ಐಕ್ಯತೆಯನ್ನು ಮುರಿದುಹಾಕುವ ಸಂಘ ಪರಿವಾರದ ಕುತಂತ್ರಕ್ಕೆ ಸಾಕ್ಷಿ. ಉತ್ತರ ಪ್ರದೇಶದ ಚುನಾವಣೆಯಲ್ಲಿ ಗೆಲ್ಲಬೇಕೆಂಬ ಹಂಬಲದಿಂದ ಚುನಾವಣೆಯ ಗಡುವು ಮುಗಿದರೂ ಕೂಡಾ ಮುಂದಕ್ಕೆ ಹಾಕುತ್ತಾ, ಅಯೋಧ್ಯೆಯ ರಾಮಮಂದಿರದ ವಿಷಯವನ್ನು ಮುಂದೆ ಮಾಡಲಾಗುತ್ತಿದೆ. ಇದೂ ಸಾಲದೆಂಬಂತೆ ಭಯೋತ್ಪಾದಕತೆಯನ್ನು ಮಟ್ಟ ಹಾಕುವ ಹೆಸರಿನಲ್ಲಿ ಮುಸ್ಲಿಂ ಸಮುದಾಯವನ್ನು ದೂಷಿಸಿ ಹಿಂದೂ ಮೂಲಭೂತವಾದಿಗಳನ್ನು ಬಲಗೊಳಿಸುವ ದಿಕ್ಕಿನತ್ತ ಸಾಗುತ್ತಿದೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಡೆದ ಬೆಂಗಳೂರು ರ್‍ಯಾಲಿ ಮಹತ್ವ ಪೂರ್ಣವಾದುದು. ದೇಶದ ಜನತೆಗೆ ಹೊಸ ದಿಕ್ಕನ್ನು ಕಾಣಿಸುವ ಮೂರನೇ ಶಕ್ತಿಯನ್ನು ಬಲಪಡಿಸುವತ್ತ ಇದೊಂದು ಮೈಲಿಗಲ್ಲು. ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಪ್ರಧಾನಿ ದೇವೇಗೌಡರು 'ರೈತರನ್ನು ಕಡೆಗಣಿಸಿದ ಯಾವ ಸರಕಾರವೂ ಹೆಚ್ಚು ದಿನ ಬಾಳಲಿಲ್ಲ. ರೈತರ ರಕ್ಷಣೆಗಾಗಿ ಕೊನೆಯ ಗಳಿಗೆಯವರೆಗೂ ಹೋರಾಟವನ್ನು ಮುಂದುವರೆಸುವುದಾಗಿ ಹೇಳಿದರು. ಇನ್ನೊಬ್ಬ ಮಾಜಿ ಪ್ರಧಾನಿ ವಿ.ವಿ.ಸಿಂಗ್ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರದ ವಿದೇಶಿ ನೀತಿಯನ್ನು ಖಂಡಿಸಿದರು. ಇತ್ತೀಚೆಗೆ ಭಯೋತ್ಪಾದಕರ ಧಾಳಿಗೆ ತತ್ತರಿಸಿದ ಅಮೆರಿಕಾಕ್ಕೆ ನೈತಿಕ ಬೆಂಬಲ ನೀಡುವುದು ಸರಿಯಾದರೂ ಕಾಶ್ಮೀರದ ಭಯೋತ್ಪಾದಕತೆಯನ್ನು ಬೆಂಬಲಿಸುತ್ತಿರುವ ಪಾಕಿಸ್ತಾನದ ಜತೆಗಿನ ಅಮೆರಿಕಾದ ಬಂಧುತ್ವ ಸರಿಯೇ ಎಂದು ಪ್ರಶ್ನಿಸಿದರು. ಮುಂದಿನ ತಿಂಗಳು ದೋಹಾದಲ್ಲಿ ನಡೆಯಲಿರುವ 'ದೋಹಾ' ಸಭೆಯ ನಂತರ ಕೃಷಿ ಕ್ಷೇತ್ರವು ಇನ್ನಷ್ಟು ಅವಸಾನ ಹೊಂದಲಿದೆ ಎಂದು ಭವಿಷ್ಯ ನುಡಿದರು.

'ಸಿಮಿ' ಸಂಘಟನೆಯ ನಿಷೇಧ ಮತ್ತು ಮುಸ್ಲಿಂ ಯುವಕರ ಬಂಧನವನ್ನು ಹೀಗಳೆದ ಮಾಜಿ ರಕ್ಷಣಾ ಸಚಿವ ಮುಲಾಯಂ ಸಿಂಗ್ ಯಾದವ್ ಆ ಸಂಘಟನೆಗೆ ಪಾಕಿಸ್ತಾನದ 'ಐಎಸ್‌ಐ' ಜತೆ ಸಂಬಂಧವಿದ್ದರೆ ಅದನ್ನು ಸಾಕ್ಷಿ ಸಹಿತ ಬಹಿರಂಗಗೊಳಿಸಬೇಕೆಂದು ಆಗ್ರಹಿಸಿದರು.

ಸಿಪಿಐ(ಎಂ) ನ ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಮಾತನಾಡುತ್ತಾ ಜನರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬಿಜೆಪಿ ನೇತೃತ್ವದ ಕೇಂದ್ರದ ಸರಕಾರ ಮತ್ತು ರಾಜ್ಯದ ಕಾಂಗ್ರೆಸ್ ಸರಕಾರಕ್ಕೂ ಯಾವುದೇ ವ್ಯತ್ಯಾಸ ಇಲ್ಲ. ಈ ಸರಕಾರಗಳನ್ನು ಅಧಿಕಾರದಿಂದ ಕೆಳಗಿಳಿಸಿದರೆ ಮಾತ್ರ ಜನರಿಗೆ ಅನುಕೂಲವಾಗುತ್ತದೆ. ಆ ನಿಟ್ಟಿನಲ್ಲಿ ಮೂರನೇ ಶಕ್ತಿಯಾಗಿ ಹೊರಹೊಮ್ಮುತ್ತಿರುವ ಜನತಾರಂಗ (ಪೀಪಲ್ಸ್ ಫ್ರಂಟ್) ವನ್ನು ಬಲಪಡಿಸಬೇಕೆಂದು ಕರೆ ನೀಡಿದರು.


ಹೊಸ ಹುಮ್ಮಸ್ಸಿನೊಂದಿಗೆ ಹರ್ಷೋದ್ಗಾರಗಳಿಂದ ಮೈ ತುಂಬಿದ ಸಭೆ ಕೇಂದ್ರದಲ್ಲಿ ಬಿಜೆಪಿ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವನ್ನು ಅಧಿಕಾರದಿಂದ ಇಳಿಸುವ ಪಣ ತೊಟ್ಟಿತು.

ಈ ಸಂದರ್ಭದಲ್ಲಿ ಬಿಜೆಪಿಯನ್ನು ತೊರೆದು ಜೆಡಿ(ಎಸ್)ಗೆ ಸೇರಿದ ಮಾಜಿ ಸಂಸತ್‌ಸದಸ್ಯ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ಬಿಜೆಪಿ ನೀತಿ ಹಾಗೂ ಸಚಿವ ಅನಂತಕುಮಾರ್, ವೆಂಕಯ್ಯ ನಾಯ್ಡು ಮತ್ತಿತರರ ಹರಣಗಳನ್ನು ಬಿಡಿಸಿಟ್ಟರು. ವೇದಿಕೆಯಲ್ಲಿ ಸಿಪಿಐ(ಎಂ)ನ ಕಾರ್ಯದರ್ಶಿ ಸೂರ್ಯನಾರಾಯಣ ರಾವ್ ಸಹ ಇದ್ದರು.

ತಾಜ್‌ಮಹಲ್‌ನಲ್ಲಿ ಯುವ ಮೋರ್ಚಾದ ದಾಂಧಲೆ

ಅಕ್ಟೋಬರ್ 14 ರಂದು ಆಗ್ರಾದ ತಾಜ್‌ಮಹಲ್ ಪರಿಧಿಯಲ್ಲಿ ಬಿಜೆಪಿ ಯುವಮೋರ್ಚಾದ ಅಖಿಲ ಭಾರತ ಸಮ್ಮೇಳನ ಸಮ್ಮೇಳನದ ಸಭಾಂಗಣದಲ್ಲಿ ಹಾಜರಿದ್ದಾಗಲೇ. ಸ್ವತಃ ಪ್ರಧಾನ ಮಂತ್ರಿಗಳೇ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು. ಉಮಾಭಾರತಿಯಂತಹ

ವಿಶ್ವವಿಖ್ಯಾತ ಸ್ಮಾರಕ ವಿಕೃತಗೊಳ್ಳಬೇಕೆ?



ಜರುಗಿತು. ನೂರಾರು ಕಾರ್ಯಕರ್ತರು ಸೇರಿ ಅಲ್ಲಿ ನಡೆಸಿದ್ದು ಸಮ್ಮೇಳನವನ್ನಲ್ಲ ಗೂಂಡಾಗಿರಿಯನ್ನು.


ಈ 'ತಾಲೀಬಾನ್'ಗಳು ಅಲ್ಲಿನ ಪ್ರವಾಸಿಗರ ಜೊತೆ ಅನುಚಿತವಾಗಿ ವರ್ತಿಸಿ ಭದ್ರತಾ ಸಿಬ್ಬಂದಿಯೊಂದಿಗೆ ಘರ್ಷಣೆಗಿಳಿದಿದ್ದರು. ಅಮರ ಪ್ರೇಮದ ಸಂದೇಶ ಹೊತ್ತಿರುವ ಅಮೃತಶಿಲೆಗಳ ಮೇಲೆ ತಮ್ಮ ಹೆಸರುಗಳನ್ನು ಕೆತ್ತಿಕೊಂಡು ಪರಾಕ್ರಮ ಮೆರೆದರು.

ಇಷ್ಟೆಲ್ಲಾ ಸಮಾಜ-ಘಾತುಕ ಚಟುವಟಿಕೆಗಳು ನಡೆದದ್ದು ಬಿಜೆಪಿಯ ಉನ್ನತ ಮುಖಂಡರು ಮುಖಂಡರಂತೂ ಉದ್ರೇಕಕಾರಿಯಾಗಿಯೇ ಭಾಷಣ ಬಿಗಿದರು. 'ಕೋಮು ಸೌಹಾರ್ದತೆಯನ್ನು ಕದಡುವಲ್ಲಿ ಯಾರು ಯಶಸ್ವಿಯಾಗುವರೆಂದು ಒಬ್ಬರಿಗಿಂತ ಒಬ್ಬರು ಸ್ಪರ್ಧೆಗಿಳಿದಂತಿತ್ತು ಸಮ್ಮೇಳನದ ವಾತಾವರಣ.

ಈ ಘಟನೆಯ ಬಗ್ಗೆ ದೃಢವಾದ ಕ್ರಮ ತೆಗೆದುಕೊಳ್ಳಬೇಕಾಗಿದ್ದ ಜಿಲ್ಲಾಡಳಿತ ತದ್ವಿರುದ್ಧವಾಗಿ ಘಟನೆಯನ್ನೇ ಮುಚ್ಚಿಹಾಕುವ ಪ್ರಯತ್ನ ನಡೆಸಿದೆ. ಬಿಜೆಪಿಯ ಕಾರ್ಯಕರ್ತರಿಗೆ ಉಚಿತವಾದ ಪ್ರವೇಶವನ್ನು ನೀಡುವ ಮೂಲಕ ಅವರ ದಾಂಧಲೆಗೆ ನೇರ ಕೊಡುಗೆ ನೀಡಿದೆ.

ಜಾರ್ಜ್ ಫರ್ನಾಂಡೀಸ್ ಮರುನೇಮಕ ಹೇಯ ಕೃತ್ಯ

ತೆಹಲ್ಕಾ ಟೇಪು ಹಗರಣದಲ್ಲಿ ರಕ್ಷಣಾ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಬೇಕಾಗಿ ಬಂದ ಜಾರ್ಜ್ ಫರ್ನಾಂಡೀಸ್ ಅವರನ್ನು ರಕ್ಷಣಾ ಸಚಿವರನ್ನಾಗಿ ಪುನರ್‌ನೇಮಕಗೊಳಿಸಿರುವುದು ಭ್ರಷ್ಟಾಚಾರದ ವಿರುದ್ಧ ದನಿ ಎತ್ತಿದ ಕೋಟ್ಯಾಂತರ ಜನರಿಗೆ ಆಘಾತವಾಗಿದೆ. ಇಡೀ ಪ್ರಕರಣ ಇನ್ನೂ ವಿಚಾರಣೆಯ ಹಂತದಲ್ಲಿದೆ. ಹಾಗಿದ್ದಲ್ಲಿ ಅವರನ್ನು ಪುನರ್ ನೇಮಕಗೊಳಿಸುವ ಆತುರವೇಕೆ?



ಇನ್ನೊಂದು ಆಶ್ಚರ್ಯಕರ ಸಂಗತಿ ಎಂದರೆ, ಟೇಪು ನಿಜವಾದದ್ದೆ ಅಥವಾ ಮೋಸದ್ದೆ ಎಂಬ ಪ್ರಶ್ನೆಗೆ, ವೆಂಕಟಸ್ವಾಮಿ ಆಯೋಗವು ಟೇಪು ಮೋಸದಿಂದ ಕೂಡಿಲ್ಲ, ನಿಜವಾದದ್ದೇ ಎಂದು ಎಂದು ತೀರ್ಪು ನೀಡಿದೆ. ಈ ತೀರ್ಪು ನೀಡಿದ ಒಂದು ವಾರದೊಳಗೆ ಜಾರ್ಜ್ ಫರ್ನಾಂಡೀಸ್ ಎಂದು ನೇಮಕವಾಗಿದೆ. ತಾವೇ ನೇಮಿಸಿ ಆಯೋಗಕ್ಕೆ ಬಿಜೆಪಿ ಸರಕಾರ ನೀಡಿದ ಅಗೌರವ ಇದು.

ಇನ್ನೊಂದೆಡೆಯಲ್ಲಿ ಎನ್‌ಡಿಎ ಸರ್ಕಾರದ ಕೀಳು ರಾಜಕೀಯವನ್ನು ಇದು ಎತ್ತಿ ತೋರಿಸುತ್ತದೆ. ಸಮತಾ ಪಕ್ಷದವರು ಒತ್ತಡ ತಂದರೆಂಬ ಅಪವಾದ ಕೆಲವು ವಲಯಗಳಿಂದ ಕೇಳಬರುತ್ತಿದೆ. ಹಾಗಾದರೆ ಇದೆಂತಹ ಐಕ್ಯತೆ? ಯಾವುದೇ ತತ್ವ, ಸಿದ್ಧಾಂತಗಳಿಲ್ಲದ 24 ಪಕ್ಷಗಳ ಗುಂಪು ರಾಜಕೀಯ ಅಧಿಕಾರ ಮತ್ತು ಪ್ರಭಾವಗಳನ್ನು ಮಾತ್ರ ಸಿದ್ಧಾಂತವಾಗಿ ಸ್ವೀಕರಿಸಿದೆ. ಇಂತಹ ಸರಕಾರ ಅಧಿಕಾರದಲ್ಲಿ ಉಳಿಯುವುದು 103 ಕೋಟಿ ಭಾರತೀಯರಿಗೆ ಖಂಡಿತಾ ಕ್ಷೇಮವಲ್ಲ.

ವಿದೇಶಿ ಮಾಧ್ಯಮಗಳಿಗೆ ಮುಕ್ತ ಅವಕಾಶ

ಸುದ್ದಿ ಮಾಧ್ಯಮದಲ್ಲಿ ವಿದೇಶಿ ಕಂಪನಿಗಳಿಗೆ ಮುಕ್ತವಾದ ಅವಕಾಶ ಕಲ್ಪಿಸಿಕೊಡಲು ವಾಜಪೇಯಿ ಸರ್ಕಾರ ಮುಂದಾಗಿದೆ. ವಿದೇಶಿ ಸುದ್ದಿ ಮಾಧ್ಯಮ ಕಂಪನಿಗಳು ಮುದ್ರಣ ಮಾಧ್ಯಮದಲ್ಲಿ ಕೆಲಸ ಮಾಡಲು ಕೇಂದ್ರದ ಬಿಜೆಪಿ ಸರ್ಕಾರ ಅವಕಾಶ ಮಾಡಿಕೊಡುತ್ತಿದೆ. ಇದರಿಂದ ಮುಂದೆ ಎಲ್ಲಾ ಪತ್ರಿಕಾ ಮಾಧ್ಯಮಗಳಿಗೂ ಹಬ್ಬುವ ಸಾಧ್ಯತೆಗಳಿವೆ. ಇಂತಹ ಅಪಾಯಕಾರಿ ಬೆಳವಣಿಗೆಗಳ ವಿರುದ್ಧ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ, ದೇಶಪ್ರೇಮಿ ಸಂಘಟನೆಗಳು ತೀವ್ರಹೋರಾಟ ನಡೆಸಬೇಕು. 1955 ರಲ್ಲಿ ಅಂದಿನ ಮಂತ್ರಿಮಂಡಲ ಯಾವುದೇ ವಿದೇಶಿ ಸುದ್ದಿ ಕಂಪನಿಗಳಿಗೆ ದೇಶದಲ್ಲಿ ಅವಕಾಶ ಕಲ್ಪಿಸಿ ಕೊಡಬಾರದೆಂಬ ನಿರ್ಣಯ ಕೈಗೊಂಡಿತ್ತು. ಆದರೂ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸ್ವದೇಶಿ ಅಭಿಮಾನವನ್ನು ಅಡವಿಟ್ಟು, ವಿದೇಶಿ ಸುದ್ದಿ ಮಾಧ್ಯಮಗಳಿಗೆ ದೇಶವನ್ನು ಬಲಿಕೊಡುತ್ತಿದೆ. ದೇಶದ ಜನತೆ ಈ ಬಗ್ಗೆ ಎಚ್ಚರವಹಿಸಬೇಕು.

ಉತ್ತರ ಕರ್ನಾಟಕದ ಅಭಿವೃ

ಕರ್ನಾಟಕದ ಇತರೆ ಪ್ರದೇಶಗಳಿಗೆ ಹೋಲಿಸಿದರೆ ಉತ್ತರ ಕರ್ನಾಟಕ-ಹೈದ್ರಾಬಾದ್ ಕರ್ನಾಟಕ ಅತ್ಯಂತ ಹಿಂದುಳಿದಿದೆ. ಆದರೆ ಇದರ ಅಭಿವೃದ್ಧಿ ಹೇಗೆ ಎಂಬುವಲ್ಲಿ ಹಲವಾರು ವಿಭಿನ್ನ ಸೂಚನೆಗಳಿವೆ. ಉತ್ತರ ಕರ್ನಾಟಕವೇ ಒಂದು ಪ್ರತ್ಯೇಕ ರಾಜ್ಯವಾಗಲಿ ಎಂಬುದು ಕೆಲವರದಾದರೆ, ಅಭಿವೃದ್ಧಿ ಎಂದರೆ ರಸ್ತೆ, ಸೇತುವೆಗಳ ನಿರ್ಮಾಣವೆಂಬುದು ಇನ್ನೂ ಕೆಲವರದು. ಆದರೆ ಇವೆಲ್ಲಕ್ಕೂ ಭಿನ್ನವಾಗಿ ಸಮಗ್ರ ಅಭಿವೃದ್ಧಿ ಸಾಧಿಸುವ ಹಾದಿ ಇಲ್ಲವೆ? ಖಂಡಿತ ಇದೆ. ಅಭಿವೃದ್ಧಿಯ ಮೂಲಭೂತ ಕಲ್ಪನೆ-ಸಮಸ್ಯೆ-ಪರಿಹಾರದ ಹಾದಿಗಳ ಬಗ್ಗೆ ವಸ್ತುನಿಷ್ಠವಾದ ವಿಶಿಷ್ಟ ವಿಚಾರ ಮಂಥನ ನಡೆದ ವರದಿ ಇಲ್ಲಿದೆ. ಹವಾಮಹಲುಗಳಲ್ಲಿ ಅಭಿವೃದ್ಧಿ ವರದಿ ಸಿದ್ಧಗೊಳಿಸುವ ಸರ್ಕಾರದ ಪರಿ ಒಂದಿದ್ದರೆ ಇಲ್ಲಿಯದು ಬೇರೆಯದೇ. ಇದರಲ್ಲಿ ವಿಶ್ವವಿದ್ಯಾಲಯದ ಉಪಕುಲಪತಿಗಳೂ ಅಧ್ಯಯನಶೀಲರೂ ಅಲ್ಲದೇ ಜನ ಚಳುವಳಿಯ ನಾಯಕರೂ, ನಿರ್ಲಕ್ಷಿತ, ಶೋಷಿತ ಕೃಷಿಕೂಲಿಕಾರ-ರೈತರೂ ಭಾಗವಹಿಸಿ ಈ ಪ್ರಕ್ರಿಯೆಗೆ ಪ್ರಜಾಸತ್ತಾತ್ಮಕವಾಗಿ ರೂಪು ನೀಡಿದ್ದು ಒಂದು ವಿಶೇಷ. ಅದರ ವರದಿ ನಿತ್ಯಾನಂದ ಸ್ವಾಮಿ ಅವರಿಂದ

"ಉತ್ತರ ಕರ್ನಾಟಕದಲ್ಲಿ ಶೇಕಡಾ 50 ರಷ್ಟಿರುವ ಹೈದ್ರಾಬಾದ್ ಕರ್ನಾಟಕದಲ್ಲಿ ಶೇಕಡಾ 60 ರಷ್ಟಿರುವ ಕೃಷಿಕೂಲಿಕಾರರ ಅಭಿವೃದ್ಧಿಯಾಗದೆ ಉತ್ತರ ಕರ್ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ" **ಅಭಿವೃದ್ಧಿ ಎಂದರೆ ಕೇವಲ ಹೈಕೋರ್ಟ್ ಪೀಠ ಸ್ಥಾಪನೆ, ರೈಲ್ವೆ ವಲಯ ವರ್ಗಾವಣೆ, ರಸ್ತೆ ಸೇತುವೆಗಳ ನಿರ್ಮಾಣ, ಸರ್ಕಾರಿ ಉದ್ಯೋಗಗಳಲ್ಲಿ ನೇಮಕಾತಿ ಎಂಬಂತೆ ವಾದಿಸುವವರ ಕಣ್ಣು ತೆರೆಯಿಸುವ ನುಡಿಮುತ್ತುಗಳು".** ಅಭಿವೃದ್ಧಿ ಎನ್ನುವಾಗ ರಸ್ತೆಗಳು, ರೈಲುಗಳು ಬೇಕು. ಆದರೆ ಕೇವಲ ರಸ್ತೆಗಳಿಂದ ರೈಲುಗಳಿಂದ ಒಂದು ಪ್ರದೇಶದ ಅಭಿವೃದ್ಧಿಯಾಗುವುದಿಲ್ಲ. ಒಂದು ದೇಶ ಎಂದರೆ ಅಲ್ಲಿಯ ಜನ, ದೇಶದ ಅಭಿವೃದ್ಧಿ ಎಂದರೆ ಅಲ್ಲಿಯ ಜನಗಳ ಅಭಿವೃದ್ಧಿ ಎಂದು ತಿಳಿಯದವರು ದಾರಿತಪ್ಪುವುದು ಹೀಗೆ, ದಾರಿ ತಪ್ಪಿಸುವುದೂ ಹೀಗೆ"ಎಂದು ಖ್ಯಾತ ಅರ್ಥಶಾಸ್ತ್ರಜ್ಞರೂ ಗುಲ್ಬರ್ಗಾ ವಿಶ್ವವಿದ್ಯಾಲಯದ ಉಪಕುಲಪತಿಗಳೂ ಆಗಿರುವ ಡಾ॥ ಎಂ.ವಿ.ನಾಡಕರ್ಣಿಯವರು ಹೇಳಿದರು. ಅವರು ಅಕ್ಟೋಬರ್ 5 ರಂದು ರಾಯಚೂರು ಎಪಿಎಂಸಿ ಸಭಾಭವನದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಏರ್ಪಡಿಸಿದ್ದ 'ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ಕೃಷಿಕೂಲಿಕಾರರು' ವಿಚಾರಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅಂದರೆ ಯಾರು ಎಂದು ಪ್ರಶ್ನೆ ಹಾಕಿದ ಅವರು ತಮ್ಮ ಪ್ರಶ್ನೆಗೆ ತಾವೇ ಉತ್ತರ ನೀಡುತ್ತಾ ದಿನೇ ದಿನೇ ಹೆಚ್ಚುತ್ತಿರುವ ಕೃಷಿಕೂಲಿಕಾರರೇ ನಮ್ಮ ದೇಶದಲ್ಲಿ ಅತ್ಯಂತ ಬಡವರು ಎಂದರು. ಕೃಷಿಕೂಲಿಕಾರರ ಸಂಖ್ಯೆ ಬೆಳೆಯುತ್ತಿರುವುದರಿಂದ ಕೃಷಿಯ ಮೇಲೆ ಅವಲಂಬನೆ ಹೆಚ್ಚಾಗುತ್ತದೆ. **ಕೃಷಿಯ ಮೇಲಿನ ಅವಲಂಬನೆ ಹೆಚ್ಚಾಗುವುದು ಕೃಷಿಯಲ್ಲಿ ನಿರತರಾದವರ ಬಡತನವು ಹೆಚ್ಚುತ್ತಿರುವುದರ ಸಂಕೇತವಾಗಿದೆ.** ಈ ಆತಂಕಕಾರಿ ಬೆಳವಣಿಗೆಯನ್ನು ಯಾರೂ ಗಮನಿಸುತ್ತಿಲ್ಲ. ಏಕೆಂದರೆ ದೇಶದ ಕೃಷಿಕೂಲಿಕಾರರು ಅತ್ಯಂತ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾದವರಾಗಿದ್ದಾರೆ. ಇಂತಹ ಮೂಲಭೂತ ಪ್ರಶ್ನೆಗಳ ಬಗ್ಗೆ ಯೋಜನೆಗಳನ್ನು ರೂಪಿಸುವವರ ಲಕ್ಷ್ಯ ಕಡಿಮೆಯಾಗಿದೆ ಎಂದು ಡಾ॥ ನಾಡಕರ್ಣಿ ವಿಷಾದಿಸಿದರು.

ಅಭಿವೃದ್ಧಿಯ ದಾರಿ

ಉತ್ತರ ಕರ್ನಾಟಕದ ಅಭಿವೃದ್ಧಿಯ ದೃಷ್ಟಿಯಿಂದ ಈ ಪ್ರದೇಶದ ಕೃಷಿಕೂಲಿಕಾರರ ಪ್ರಶ್ನೆ ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಕೂಲಿಕಾರರ ಪ್ರಶ್ನೆಯನ್ನು ಕೇವಲ ಕೃಷಿ ಚೌಕಟ್ಟಿನಲ್ಲಿ ಇತ್ಯರ್ಥ ಗೊಳಿಸಲಾಗದು. ಕೃಷಿ ಚೌಕಟ್ಟಿನ ಹೊರಗೂ ಕೆಲವು ಕ್ರಮಗಳು ಅಗತ್ಯ. ಕೃಷಿ ಚೌಕಟ್ಟಿನೊಳಗೆ ಪರಿಶೀಲಿಸುವಾಗ ಕೃಷಿಕೂಲಿಕಾರರ ಕೂಲಿಯ ಪ್ರಶ್ನೆ ಪ್ರಮುಖ ಪ್ರಶ್ನೆಯಾಗುತ್ತದೆ. ಕೃಷಿ ಕೂಲಿಕಾರರ ಕೂಲಿ ಗಣನೀಯವಾಗಿ ಹೆಚ್ಚಾದರೆ ಮಾತ್ರ ಅವರ ಬದುಕಿನಲ್ಲಿ ಬದಲಾವಣೆ ಕಾಣಲು ಸಾಧ್ಯ. ಕೂಲಿ ಹೆಚ್ಚಾಗಬೇಕಾದರೆ ಕೂಲಿಯ ಬೇಡಿಕೆ ಹೆಚ್ಚಾಗಬೇಕು. **ನೀರಾವರಿ ಸೌಲಭ್ಯವನ್ನು ವಿಸ್ತರಿಸಿದಾಗ ತೀವ್ರ ಕೃಷಿ (Intensive cultivation) ಯ ಅವಕಾಶಗಳು ಅಧಿಕಗೊಂಡು ಕೂಲಿಯ ಬೇಡಿಕೆ ಹೆಚ್ಚುತ್ತದೆ.**

> **"ಕೃಷಿ ಕೂಲಿಕಾರರ ಅಭಿವೃದ್ಧಿಯಾಗದೆ ಉತ್ತರ ಕರ್ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ"**
>
> ಡಾ॥ ಎಂವಿ.ನಾಡಕರ್ಣಿ

"ನಮ್ಮ ದೇಶ ಕೃಷಿ ಪ್ರಧಾನ ದೇಶ' ಎಂದು ತಮ್ಮ ಭಾಷಣವನ್ನು ಆರಂಭಿಸಿದ ಡಾ॥ ನಾಡಕರ್ಣಿಯವರು, ಕೃಷಿ ಕ್ಷೇತ್ರದ ಉತ್ಪಾದನೆ ಗಣನೀಯವಾಗಿ ಕುಸಿಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. 1965 ರಲ್ಲಿ ಕೃಷಿ ವಲಯದ ಉತ್ಪಾದನೆಯು ನಮ್ಮ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇ 65 ರಷ್ಟಿತ್ತು. ಈಗ ಅದು ಶೇ 25 ಕ್ಕೆ ಇಳಿದಿದೆ. ಆದರೆ ಕೃಷಿಯ ಮೇಲಿನ ಅವಲಂಬನೆ ಅಷ್ಟೇನು ಕಡಿಮೆಯಾಗಿಲ್ಲ. ಶೇ 66 ರಷ್ಟಿದ್ದ ಕೃಷಿ ಮೇಲಿನ ಅವಲಂಬನೆ ಕೇವಲ ಶೇ 3 ರಷ್ಟು ಕಡಿಮೆಯಾಗಿದೆ. ಕೃಷಿಯನ್ನು ಅವಲಂಬಿಸಿರುವವರ ಬಡತನ ಕಡಿಮೆಯಾಗಿಲ್ಲ.

ಯಾರು ಬಡವರು ಈ ದೇಶದಲ್ಲಿ?

ಡಾ॥ ನಾಡಕರ್ಣಿಯವರು ಮುಂದುವರಿಯುತ್ತಾ, ನಮ್ಮದೇಶದಲ್ಲಿ ಬಡತನದ ನಿರ್ಮೂಲನೆಯ ಬಗ್ಗೆ ಬಹಳಷ್ಟು ಮಾತನಾಡಲಾಗುತ್ತದೆ ಎಂದು ಅಭಿಪ್ರಾಯಪಟ್ಟರು. ನಮ್ಮದೇಶದಲ್ಲಿ ಬಡವರು



ಅಭಿವೃದ್ಧಿಯ ನೋಟ ನೀಡಿದ ಡಾ. ಎಂ.ವಿ.ನಾಡಕರ್ಣಿ

ಕೃಷಿ ಕೂಲಿಕಾರರ ಕೂಲಿ ಹೆಚ್ಚಳಕ್ಕೊಂದು ಮಿತಿ ಇದೆ. ಅದು ರೈತರ ಸಾಮರ್ಥ್ಯವನ್ನು ಅವಲಂಬಿಸಿದೆ. ಕೃಷಿಕೂಲಿಕಾರರ ಕೂಲಿಯ ಹೆಚ್ಚಳಕ್ಕೆ ಒತ್ತಾಯಿಸುತ್ತಾ ಹೋದಂತೆ ರೈತರು ಅದನ್ನು ವಿರೋಧಿಸುತ್ತಾರೆ. ಈ ವೈರುಧ್ಯದ ಕಾರಣದಿಂದ ಕೇರಳದ ರೈತರು ಭತ್ತ ಬೆಳೆಯುವುದನ್ನು ಬಿಟ್ಟು ತೆಂಗು ಬೆಳೆಯಲಾರಂಭಿಸಿದ್ದನ್ನು ಕಾಣಬಹುದು. ಭತ್ತದ ಬೆಳೆಗೆ ತೆಂಗು ಬೆಳೆಗಿಂತ ಅಧಿಕ ಸಂಖ್ಯೆಯಲ್ಲಿ ಕೂಲಿಕಾರರನ್ನು ದುಡಿಸಬೇಕಾಗುತ್ತದೆ ಎಂಬುದೇ ಈ ಬದಲಾವಣೆಗೆ ಕಾರಣವಾಗಿದೆ.

ಭೂಹೀನ ಕೃಷಿಕೂಲಿಕಾರರಿಗೆ ಭೂಮಿಯನ್ನು ಒದಗಿಸುವುದು ಇನ್ನೊಂದು ಪರಿಹಾರವಾಗಿದೆ. ಇದರಿಂದಾಗಿ ಕೂಲಿಕಾರರು ಕೆಲಸ ಹುಡುಕಿಕೊಂಡು ಊರೂರು ಅಲೆಯುವುದನ್ನು ಸ್ವಲ್ಪ ಮಟ್ಟಿಗೆ ತಡೆಯಬಹುದು. ಭೂಸುಧಾರಣೆಗಳಿಂದ ಲಭ್ಯವಾಗುವ ಹೆಚ್ಚುವರಿ ಭೂಮಿ ಮಾತ್ರವಲ್ಲ ಸರ್ಕಾರದ ವಶದಲ್ಲಿರುವ ಅರಣ್ಯವೂ ಅಲ್ಲದ ಕೃಷಿಗೂ ಒಳಪಡದ ಭೂಮಿಯನ್ನೂ ಭೂಹೀನ ಕೃಷಿಕೂಲಿಕಾರರಿಗೆ ಹಂಚುವ ಮೂಲಕ ಕೂಲಿಕಾರರ ಸಮಸ್ಯೆಗೆ ಸ್ವಲ್ಪ ಪ್ರಮಾಣದ ಪರಿಹಾರವನ್ನಾದರೂ ಪಡೆಯಬಹುದು. ಭೂಮಿಯನ್ನು ಪಡೆದ ಕೃಷಿಕೂಲಿಕಾರರ ಕುಟುಂಬಗಳಲ್ಲಿ ಸಹಜವಾಗಿಯೇ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ

ರಾಯಚೂರಿನಲ್ಲಿ ಸಮಯೋ

ಬೆಳವಣಿಗೆ ಸಾಧ್ಯವಾಗುತ್ತದೆ.

ಕೃಷಿ ಚೌಕಟ್ಟಿನ ಹೊರಗಡೆಯೂ ಕೃಷಿ ಕೂಲಿಕಾರರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸಾಧ್ಯವಾಗಬೇಕು. ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ, ದೈಹಿಕ ಶ್ರಮವು ಹೆಚ್ಚಿಗೆ ಬೇಕಾಗುವ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಕೃಷಿಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬಹುದು ಮಾತ್ರವಲ್ಲ ಕೃಷಿ ಕೂಲಿಕಾರರನ್ನು ಆದಾಯಯುಕ್ತ ಉದ್ಯೋಗದಲ್ಲಿ ತೊಡಗಿಸಿದಂತಾಗುವುದು. ಇಂದಿನ ಕಂಪ್ಯೂಟರ್ ಆಧಾರಿತ ಕೈಗಾರಿಕೆಗಳಲ್ಲಿ ವಿದ್ಯಾವಂತರಿಗೆ ಮಾತ್ರ ಉದ್ಯೋಗಗಳು ದೊರೆಯಲು ಸಾಧ್ಯ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಇರುವ ಗ್ರಾಮೀಣ ಕೂಲಿಕಾರರು ಹೆಚ್ಚಾಗಿ ವಿದ್ಯಾಭ್ಯಾಸ ಇಲ್ಲದವರು. ಇವರನ್ನು ಲಾಭದಾಯಕ ಉದ್ಯೋಗಗಳಲ್ಲಿ ತೊಡಗಿಸದೆ ಈ ಪ್ರದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಯೋಜನೆಗಳನ್ನು ತಯಾರಿಸುವಾಗ ಈ ಬಗ್ಗೆ ಗಮನ ಕೊಡುವುದು ಆಗಬೇಕಾಗಿದೆ. ಹೆಚ್ಚೆಚ್ಚು ಜನಗಳಿಗೆ ಉದ್ಯೋಗವನ್ನು ಒದಗಿಸಬಲ್ಲ ಕೈಗಾರಿಕೆಗಳ ಸ್ಥಾಪನೆ ಇಂದಿನ ನಮ್ಮ ಪ್ರಮುಖ ಆದ್ಯತೆಯಾಗಬೇಕು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘವು ಇಷ್ಟೊಂದು ಮಹತ್ವವಿರುವ ಈ ವಿಷಯವನ್ನು ಕುರಿತು ವಿಚಾರಸಂಕಿರಣನ್ನು ಏರ್ಪಡಿಸುವ ಮೂಲಕ ಸಾರ್ವಜನಿಕ ಗಮನ ಸೆಳೆದದ್ದು ಪ್ರಶಂಸನೀಯವಾಗಿದೆ ಎಂದು ಡಾ॥ ನಾಡಕರ್ಣಿ ಹೇಳಿದರು. ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಎನ್.ನಾಗರಾಜ್ ಮಂಡಿಸಲಿರುವ ಆಶಯ ಪ್ರಬಂಧ, ನಂತರದ ಘೋಷ್ಠಿಗಳಲ್ಲಿ ಮಂಡಿಸಲಾಗುವ ವಿಚಾರಗಳು ಉತ್ತರ ಕರ್ನಾಟಕ ಅಭಿವೃದ್ಧಿಯ ಪ್ರಶ್ನೆಯ ಮೇಲೆ ಹೆಚ್ಚಿನ ಬೆಳಕು ಚೆಲ್ಲುವಂತಾಗಲಿ ಎಂದು ಹಾರೈಸಿ ತಮ್ಮ ಉದ್ಘಾಟನಾ ಭಾಷಣವನ್ನು ಮುಕ್ತಾಯ ಮಾಡಿದರು.

ಉತ್ತರ ಕರ್ನಾಟಕ ಹಿಂದುಳಿದುದ್ದೇಕೆ?

ಉತ್ತರ ಕರ್ನಾಟಕ, ಅದರಲ್ಲೂ ಹೈದ್ರಾಬಾದ್ ಕರ್ನಾಟಕ ಆರ್ಥಿಕವಾಗಿಯೂ, ಶೈಕ್ಷಣಿಕವಾಗಿಯೂ ಹಿಂದುಳಿದಿದೆ ಎನ್ನಲಾಗುತ್ತದೆ. ಈ ಹಿಂದುಳಿಯುವಿಕೆಗೆ ಕಾರಣಗಳನ್ನು ಗುರುತಿಸುತ್ತಾ ಡಾ॥ ನಾಡಕರ್ಣಿಯವರು ರಾಜ್ಯದಲ್ಲಿ ಕೃಷಿ ಅವಲಂಬಿತರ ಸಂಖ್ಯೆ ಶೇ 65 ರಿಂದ ಶೇ 63 ಕ್ಕೆ ಇಳಿದಿದ್ದರೂ ಹೈದ್ರಾಬಾದ್ ಕರ್ನಾಟಕದಲ್ಲಿ ಅದು ಶೇ 74 (1976) ರಿಂದ ಶೇ 76 ಕ್ಕೆ ಏರಿದೆ ಎಂದರು. ಕೃಷಿಯ ಮೇಲಿನ ಅವಲಂಬನೆ ಹೆಚ್ಚಾಗುತ್ತಿರುವುದು ಈ ಪ್ರದೇಶದ ಸಾಮಾನ್ಯ ರೈತರು ಮತ್ತು ಕೂಲಿಕಾರರು ಹೆಚ್ಚೆಚ್ಚು ಬಡವರಾಗುತ್ತಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ಹೈದ್ರಾಬಾದ್ ಕರ್ನಾಟಕದಲ್ಲಿ ಕೃಷಿಕೂಲಿಕಾರರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗುತ್ತಿದೆ. 1991 ರ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಶೇ 46 ರಷ್ಟು ಕೃಷಿ ಕೂಲಿಕಾರರಿದ್ದರೆ ಅದರಲ್ಲಿ ಶೇ 59 ಕೃಷಿಕೂಲಿಕಾರರು ಹೈದ್ರಾಬಾದ್ ಕರ್ನಾಟಕದಲ್ಲಿದ್ದಾರೆ. ಹೈದ್ರಾಬಾದ್ ಕರ್ನಾಟಕ ಹಿಂದುಳಿಯಲು ಇಲ್ಲಿ ಕೃಷಿಯ ಮೇಲಿನ ಅವಲಂಬನೆ ಹೆಚ್ಚುತ್ತಿರುವುದು, ಕೃಷಿಕೂಲಿಕಾರರ ಸಂಖ್ಯೆ ಹೆಚ್ಚುತ್ತಿರುವುದು ಕಾರಣವಾಗಿದೆ. ಈ ಪ್ರದೇಶ ಅಭಿವೃದ್ಧಿಯಾಗಬೇಕಾದರೆ ಈ ಪ್ರದೇಶದ ಕೃಷಿಯ ಸಮಸ್ಯೆ ಇತ್ಯರ್ಥವಾಗಬೇಕು. ಕೃಷಿಯ ಸಮಸ್ಯೆಗೂ ಕೂಲಿಕಾರರ ಸಮಸ್ಯೆಗೂ ನೇರವಾದ ಸಂಬಂಧವಿದೆ. ಇಷ್ಟೊಂದು ಸಂಖ್ಯೆಯಲ್ಲಿರುವ ಕೃಷಿಕೂಲಿಕಾರರ ಬದುಕಿನಲ್ಲಿ ಮುನ್ನಡೆ ಸಾಧ್ಯವಾಗದೆ ಹೈದ್ರಾಬಾದ್ ಕರ್ನಾಟಕದ ಮುನ್ನಡೆ ಸಾಧ್ಯವಿಲ್ಲ.

ದಕ್ಷಿಣ ಕರ್ನಾಟಕದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಮೊದಲಾದ ಜಿಲ್ಲೆಗಳಲ್ಲಿ ಕೃಷಿ ಸಮಸ್ಯೆ ಸ್ವಲ್ಪ ಮಟ್ಟಿಗಾದರೂ ಇತ್ಯರ್ಥವಾಗಿದೆ. ಅಲ್ಲಿಯ ಗೇಣಿದಾರರ ಚಳುವಳಿಯಿಂದಾಗಿ ಭೂಸುಧಾರಣೆಯ ಲಾಭವನ್ನು ಪಡೆಯಲು ಅವರಿಗೆ ಸಾಧ್ಯವಾಗಿದೆ. ಹೀಗಾಗಿ ಅಲ್ಲಿ ಕೃಷಿಕೂಲಿಕಾರರ ಸಂಖ್ಯೆಗಿಂತ ರೈತರ ಸಂಖ್ಯೆ ಹೆಚ್ಚಿದೆ. **ಆದರೆ ಅಂತಹ ಗೇಣಿದಾರರ ಚಳುವಳಿ ಹೈದ್ರಾಬಾದ್ ಕರ್ನಾಟಕದಲ್ಲಿ ನಡೆಯಲಿಲ್ಲ.** ಇಲ್ಲಿನ ಭೂಮಾಲಕರಿಗೆ ಬರಲಿದ್ದ ಭೂಸುಧಾರಣೆಗಳ ಬಗ್ಗೆ ಮೊದಲೇ ಸುಳಿವು ಸಿಕ್ಕಿತ್ತು. ಅವರೆಲ್ಲರೂ ಎಚ್ಚರಗೊಂಡು ಸಂಘಟಿತರಾದರು. ಭೂಸುಧಾರಣಾ ಕಾಯ್ದೆಗಳಿಗೆ ಸಾಕಷ್ಟು ತೂತುಗಳನ್ನು ಇಡಲು ಅವರಿಗೆ ಸಾಧ್ಯವಾಯಿತು. ಗೇಣಿದಾರರಿಗೆ ಭೂಮಿಯ ಹಕ್ಕು ಸಿಗದಂತೆ ಮಾಡುವ ವ್ಯವಸ್ಥಿತ ಪಿತೂರಿ ನಡೆಯಿತು. ಹೀಗಾಗಿ ಈ ಪ್ರದೇಶದ ಕೃಷಿ ಸಮಸ್ಯೆ ಇತ್ಯರ್ಥಗೊಳ್ಳಲಿಲ್ಲ. ಪರಿಣಾಮವಾಗಿ ಕೃಷಿಕೂಲಿಕಾರರ ಸಂಖ್ಯೆ ದಕ್ಷಿಣ ಕರ್ನಾಟಕಕ್ಕಿಂತ ಗಣನೀಯವಾಗಿ ಹೆಚ್ಚಾಗುವಂತಾಯಿತು.



ಇತ್ಯರ್ಥ ಕಾಣದ ಕೃಷಿ ಸಮಸ್ಯೆ - ಬೆಂಗಾಡಿನಲ್ಲಿ ಬಸವಳಿದವರು

...ಮತ್ತು ಕೃಷಿಕೂಲಿಕಾರರು

ಮಾನವ ಕೇಂದ್ರೀಕೃತ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ

- ಜಿ.ಎನ್.ನಾಗರಾಜ್

ಅಭಿವೃದ್ಧಿ ಎಂದರೆ ಕೆಲವು ಸೌಧಗಳ **ಅಥವಾ ಸಂಸ್ಥೆಗಳ ಸ್ಥಾಪನೆ ಎಂಬ ತಿಳುವಳಿಕೆ ಪರಿಪೂರ್ಣವಾದುದಲ್ಲ; ಮಾನವ ಕೇಂದ್ರೀಕೃತ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ ಎಂಬ ತಿಳುವಳಿಕೆ ಮೂಡಬೇಕಾದ್ದುದು ಅಗತ್ಯವಾಗಿದೆ** ಎಂದು ಹೇಳುತ್ತಾ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಅಧ್ಯಕ್ಷರಾದ ಜಿ.ಎನ್.ನಾಗರಾಜ ತಮ್ಮ ಆಶಯ ಪ್ರಬಂಧದ ಮಂಡನೆಯನ್ನು ಆರಂಭಿಸಿದರು. ರಸ್ತೆಗಳು ರೈಲುಗಳು ಬೇಕು, ಕೋರ್ಟುಗಳು ಕಛೇರಿಗಳು ಬೇಕು. ಆದರೆ ಅಭಿವೃದ್ಧಿ ಅಂದರೆ ಇಷ್ಟು ಮಾತ್ರವಲ್ಲ. ಅದು ಮಾನವ ಸಮಾಜದ ಅಭಿವೃದ್ಧಿ, ಮಾನವ ಸಮಾಜದ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮೊದಲಾದ ಎಲ್ಲಾ ರಂಗಗಳನ್ನು ಒಳಗೊಂಡ ಸರ್ವಾಂಗೀಣ ಅಭಿವೃದ್ಧಿ.

ಅಧ್ಯಯನ ಹೇಗೆ?


ಅಭಿವೃದ್ಧಿ ದೃಷ್ಟಿಯಿಂದ ಕರ್ನಾಟಕವನ್ನು 3 ಭಾಗಗಳಾಗಿ ಅಧ್ಯಯನ ಮಾಡಬಹುದು ಎಂದು ಮುಂದುವರೆದ ಜಿ.ಎನ್.ನಾಗರಾಜು, ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಅಭಿವೃದ್ಧಿ ಎನ್ನುವುದು ವಿಭಿನ್ನವಾಗಿದೆ.

ಯಶಸ್ವಿ ವಿಚಾರಸಂಕಿರಣ

ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಒಳಗೊಂಡ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಕೃಷಿಯ ಮೇಲಿನ ಅವಲಂಬನೆ ತುಂಬಾ ಕಡಿಮೆ. ಕೃಷಿಯೇತರ ಉದ್ಯೋಗಗಳು ಅಭಿವೃದ್ಧಿಯಾಗಿರುವ ಪ್ರದೇಶವಿದು. ಕೃಷಿಕೂಲಿಕಾರರ ಸಂಖ್ಯೆಗಿಂತ ರೈತರ ಸಂಖ್ಯೆಯೇ ಹೆಚ್ಚು. ಕೃಷಿಯ ಮೇಲೆ ಅವಲಂಬಿತರು ಶೇ 60 ರಷ್ಟಿದ್ದು ಅದರಲ್ಲಿ ರೈತರು ಶೇ 40 ರಷ್ಟಿದ್ದು ಕೃಷಿಕೂಲಿಕಾರರು ಶೇ. 20 ಮಾತ್ರ. ಇಲ್ಲಿ ಕೃಷಿಕೂಲಿಕಾರರಿಗೆ ರೂ. 60 ರಿಂದ ರೂ. 100 ರ ವರೆಗೂ ದಿನಗೂಲಿ ದೊರೆಯುತ್ತಿದ್ದು ಅದು ರಾಜ್ಯದಲ್ಲೇ ಗರಿಷ್ಟ ಪ್ರಮಾಣದ ಕೂಲಿ ಆಗಿರುತ್ತದೆ. ಇಲ್ಲಿ ಹಿಂದಿನ ಗೇಣಿದಾರರು ಭೂಸುಧಾರಣೆಯ ಲಾಭ ಪಡೆದು ರೈತರಾಗಿದ್ದಾರೆ. ಹೆಂಚು, ಗೇರುಬೀಜ, ಬೀಡಿ, ತೋಟ, ಮೀನು ಹಿಡಿಯುವುದು ಮೊದಲಾದ ಅಸಂಘಟಿತ ವಲಯದ ಕೈಗಾರಿಕೆಗಳಲ್ಲಿ ಉದ್ಯೋಗದ ಅವಕಾಶಗಳು ವಿಸ್ತಾರಗೊಂಡಿರುವುದರಿಂದ ಕೃಷಿಯ ಮೇಲಿನ ಅವಲಂಬನೆ ಕಡಿಮೆಯಾಗಿದೆ ಮಾತ್ರವಲ್ಲ ಕೂಲಿಯ ಬೇಡಿಕೆಯನ್ನು ಹೆಚ್ಚಿಸಿದೆ.

ದಕ್ಷಿಣ ಕರ್ನಾಟಕವೆಂದು ಗುರುತಿಸಲ್ಪಡುವ ಹಳೆಯ ಮೈಸೂರು ಪ್ರದೇಶದಲ್ಲಿ ಕೃಷಿಯ ಮೇಲಿನ ಅವಲಂಬನೆ ಇದ್ದರೂ ಇಲ್ಲಿ ಕೃಷಿಕೂಲಿಕಾರರ ಸಂಖ್ಯೆಗಿಂತ ರೈತರ ಸಂಖ್ಯೆಯೇ ಹೆಚ್ಚು. ಕೃಷಿಯ ಮೇಲೆ ಅವಲಂಬಿತರು ಒಟ್ಟು ಸುಮಾರು ಶೇ 80 ರಷ್ಟು. ಅದರಲ್ಲಿ ರೈತರು ಶೇ 55 ರಷ್ಟಾದರೆ ಶೇ 25 ಮಾತ್ರ ಕೃಷಿಕೂಲಿಕಾರರು. ಇಲ್ಲಿಯ ಈ ಪರಿಸ್ಥಿತಿಗೆ ಕರ್ನಾಟಕ ಭೂಸುಧಾರಣೆಗಳ ಪೂರ್ವದ ಭೂಸಂಬಂಧಗಳೇ ಕಾರಣ. ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ರ ಕಾಲದಲ್ಲೇ ಇಲ್ಲಿ ಪಾಳೆಗಾರಿ ಭೂಸಂಬಂಧಗಳು ಒಂದು ರೀತಿಯಲ್ಲಿ ನಿರ್ಮೂಲನೆಯಾಗಿ ರೈತರು ನೇರವಾಗಿ ಅರಸನಿಗೆ ಕಂದಾಯ ಸಂದಾಯ ಮಾಡುವಂತಾಯಿತು. ಮೈಸೂರಿನ ರಾಜರು ಕೈಗಾರಿಕೆಗಳ ಸ್ಥಾಪನೆಗೆ ತೋರಿದ ಆಸಕ್ತಿಯಿಂದಾಗಿ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುಂತಾಯಿತು. ಭೂಹೀನ ಕೃಷಿಕೂಲಿಕಾರರಿಗೆ ಸ್ವಲ್ಪ ಮಟ್ಟಿಗಾದರೂ ಕಾರ್ಖಾನೆಗಳಲ್ಲಿ ಕೆಲಸ ದೊರೆಯುಂತಾಯಿತು.

ಮೇಲಿನ ಎರಡೂ ಪ್ರದೇಶಗಳ ಪರಿಸ್ಥಿತಿಗಿಂತ ಉತ್ತರ ಕರ್ನಾಟಕ, ಅದರಲ್ಲೂ ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕದ ಪರಿಸ್ಥಿತಿ ತೀರಾ ಭಿನ್ನವಾಗಿದೆ. ಇಲ್ಲಿ ಕೃಷಿಯ ಮೇಲಿನ ಅವಲಂಬನೆ ಅತಿ ಹೆಚ್ಚು. ಇಲ್ಲಿ ಒಟ್ಟು ಜನಸಂಖ್ಯೆಯ ಸುಮಾರು ಶೇ 95 ರಷ್ಟು ಜನ ಕೃಷಿಯನ್ನೇ ಅವಲಂಬಿಸಿದ್ದು ಅದರಲ್ಲಿ ಶೇಕಡಾ 45 ರಷ್ಟು ಜನ ಕೃಷಿಕೂಲಿಕಾರರೇ ಆಗಿದ್ದಾರೆ. ಇಲ್ಲಿ ಕೃಷಿ ಕೂಲಿಕಾರ ಸಂಖ್ಯೆ ಹೆಚ್ಚು. ಅವರಿಗೆ ಕೆಲಸ ಸಿಗುವುದು ವಿರಳ. ನೀರಾವರಿ ಸೌಕರ್ಯ ತುಂಬಾ ಸೀಮಿತ. ಸತತವಾಗಿ ಬರಗಾಲಕ್ಕೆ ತುತ್ತಾಗುವ ಪ್ರದೇಶ. ಒಣ ಬೇಸಾಯ ಪ್ರದೇಶದಿಂದ ಕೃಷಿಕೂಲಿಕಾರರು ನೀರಾವರಿ ಪ್ರದೇಶಕ್ಕೆ ವಲಸೆ ಹೋಗುವುದು ತೀರಾ ಸಾಮಾನ್ಯ. **ರಾಜ್ಯದ ಇತರ ಪ್ರದೇಶಗಳಿಗೂ ಗಡಿ**



ರಾಜ್ಯಗಳಿಗೂ ಇಲ್ಲಿಯ ಕೃಷಿ ಕೂಲಿಕಾರರು ವಲಸೆಹೋಗುತ್ತಿರುತ್ತಾರೆ.

ವಲಸೆ ಪರಿಣಾಮ

ಕೃಷಿಕೂಲಿಕಾರರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗುತ್ತಿರುವುದರಿಂದ ಇಲ್ಲಿಯ ಹಳ್ಳಿಗಳಲ್ಲಿ ಆರ್ಥಿಕ ಚಟುವಟಿಕೆಗಳೇ ಸ್ಥಗಿತಗೊಂಡು ಅವುಗಳು ವರ್ಷವಿಡೀ ಬಿಕೋ ಎನ್ನುತ್ತಿರುತ್ತವೆ. **ಇವರು ವಲಸೆಹೋದ ನಗರಗಳಲ್ಲಿ ಎತ್ತರದ ಮಹಲುಗಳು ತಲೆ ಎತ್ತುತ್ತವೆ. ಆದರೆ ಇವರು ಬಿಟ್ಟುಬಂದ ಗ್ರಾಮಗಳು ಹಾಳು ಕೊಂಪೆಗಳಾಗುತ್ತವೆ. ಇವರ ಬೆವರು ಬಿದ್ದ ಬೊಂಬಾಯಿ, ಬೆಂಗಳೂರಿನ ರಸ್ತೆಗಳು ಝಗಝಗಿಸುತ್ತವೆ; ಆದರೆ ಇವರ ಸ್ವ ಗ್ರಾಮಗಳ ಹಾದಿಗಳಲ್ಲಿ ಹುಲ್ಲುಮುಳ್ಳು ಬೆಳೆಯುತ್ತದೆ. ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಗುಳೇ ಹೋಗುವ ಕೂಲಿಕಾರರ ಮಕ್ಕಳಿಗೆ ಅಕ್ಷರ, ಅರಿವು ಹೇಗೆ ದೊರೆಯಲು ಸಾಧ್ಯ?** ಮಕ್ಕಳು ಶಾಲೆಗೆ ಬರುತ್ತಿಲ್ಲ ಎಂದುಕೊಂಡು ಸರ್ಕಾರ ಶಾಲೆಗಳನ್ನೇ ಮುಚ್ಚಲು ಮುಂದಾಗುತ್ತಿರುವಾಗ ಅಭಿವೃದ್ಧಿ ಹೇಗೆ ಸಾಧ್ಯ?

ಸುಧಾರಣೆಗಳು ತಂದ ಆಪತ್ತು

1991 ರಿಂದ ಸುಧಾರಣೆಗಳ ಹೆಸರಿನಲ್ಲಿ ಜಾರಿಗೆ ತರಲಾದ ಹೊಸ ಆರ್ಥಿಕ ನೀತಿಗಳಿಂದ ಕೃಷಿ ಕೂಲಿಕಾರರ ಬದುಕು ಮತ್ತಷ್ಟು ಆಪತ್ತಿಗೆ ಸಿಲುಕಿದೆ. ಹೊಸ ನೀತಿಗಳ ಪರಿಣಾಮವಾಗಿ ಕೃಷಿ ಕ್ಷೇತ್ರ ಅನಾಥವಾಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ಸರ್ಕಾರ ಹಣ ತೊಡಗಿಸುವುದನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಿದೆ. ಇದರಿಂದಾಗಿ ಮುಖ್ಯವಾಗಿ ನೀರಾವರಿ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಹೈದ್ರಾಬಾದ್ ಕರ್ನಾಟಕದಲ್ಲಿ ಲಭ್ಯವಿರುವ ಜಲಸಂಪತ್ತಿನ ಪೂರ್ಣಬಳಕೆ ಸಾಧ್ಯವಾಗಿಲ್ಲ. ಇದರಿಂದಾಗಿ ಈ ಪ್ರದೇಶವು ಸತತ ಬರಗಾಲಕ್ಕೆ ತುತ್ತಾಗುತ್ತಿದ್ದು ಕೂಲಿಕಾರ ಕುಟುಂಬಗಳನ್ನು ಉಪವಾಸ ವನವಾಸಗಳಿಗೆ ತಳ್ಳುತ್ತಿದೆ.

ಹೊಸ ಆರ್ಥಿಕ ನೀತಿಗಳ ಹೆಸರಿನಲ್ಲಿ ಸರ್ಕಾರ ಗ್ರಾಮೀಣ ಅಭಿವೃದ್ಧಿ, ರೋಜಗಾರ ಯೋಜನೆ, ಬರಪರಿಹಾರ ಕಾರ್ಯಗಳಿಗೆ ಹಣ ತೊಡಗಿಸುವುದನ್ನು ಕಡಿಮೆ ಮಾಡಿದೆ. ಇದರಿಂದಾಗಿ ಗ್ರಾಮೀಣ ನಿರುದ್ಯೋಗ ಉಲ್ಬಣಗೊಂಡಿದೆ; ಕೂಲಿಕಾರರು ವಲಸೆ ಹೋಗುವುದು ಮತ್ತಷ್ಟು ವ್ಯಾಪಕವಾಗಿದೆ. ಕೃಷಿಯೊಳಗೆ ಕಾಲಿಟ್ಟಿರುವ ಯಾಂತ್ರೀಕರಣವು ಕೃಷಿಕೂಲಿಕಾರರ ಬದುಕಿನಲ್ಲಿ ಅಳಿದುಳಿದ ಭರವಸೆಯನ್ನು ಕಿತ್ತುಕೊಂಡಿದೆ. ಭತ್ತದ ಕೊಯ್ಲಿಗೆ ಪಂಜಾಬದಿಂದ ವಲಸೆ ಬರುವ ಯಂತ್ರಗಳು ಹೈದ್ರಾಬಾದ್ ಕರ್ನಾಟಕದ ನೀರಾವರಿ ಪ್ರದೇಶದಲ್ಲಿ ಕೃಷಿಕೂಲಿಕಾರರಿಗೆ ದೊರೆಯುತ್ತಿದ್ದ ಕೆಲಸವನ್ನು ಕಸಿಯುತ್ತವೆ. ಮಂಡ್ಯದಂತಹ ಪೂರ್ಣ ನೀರಾವರಿ ಜಿಲ್ಲೆಗಿಂತಲೂ **ಹೈದ್ರಾಬಾದ್ ಕರ್ನಾಟಕದ ನೀರಾವರಿ ಪ್ರದೇಶದಲ್ಲಿ ಹೆಚ್ಚು ಕಳೆನಾಶಕಗಳ ಬಳಕೆಯಾಗುತ್ತಿದ್ದು ಕೃಷಿ ಕೂಲಿಕಾರರಿಗೆ ಕೆಲಸ ಸಿಗದಂತೆ ಮಾಡುತ್ತದೆ.** ಅಕ್ಕಿ ಗಿರಣಿಗಳಂತಹ ಕೃಷಿ ಆಧಾರಿತ ಕೈಗಾರಿಕೆಗಳಲ್ಲಿಯೂ ಆಧುನಿಕ ಯಂತ್ರಗಳ ಬಳಕೆ ಆರಂಭವಾಗಿದ್ದು ಕೂಲಿಕಾರರು ಉದ್ಯೋಗದ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಜಾಗತೀಕರಣದ ಪರಿಣಾಮದಿಂದ ಈ ಪ್ರದೇಶದ ಜವಳಿ ಗಿರಣಿಗಳು, ಸಿಮೆಂಟ್ ಕಾರ್ಖಾನೆಗಳು, ಸಣ್ಣ ಪ್ರಮಾಣದ ಕೈಗಾರಿಕೆಗಳು ಮುಚ್ಚಿದ್ದು ಪರಿಸ್ಥಿತಿ ಮತ್ತಷ್ಟು ಭೀಕರಗೊಳಿಸುತ್ತಿದೆ. ಪಾರಂಪರಿಕ ಕೈಮಗ್ಗ ಉದ್ಯೋಗವನ್ನು ಅವಲಂಬಿಸಿದ್ದ ಸಾವಿರಾರು ನೇಕಾರ ಸ್ತ್ರೀ ಪುರುಷರು ಕೆಲಸ ಇಲ್ಲದಂತಾಗಿ ಕೂಲಿಕಾರರಾಗುತ್ತಿದ್ದಾರೆ.

ದಿನೇ ದಿನೇ ಬೆಳೆಯುತ್ತಿರುವ ಕೃಷಿ ಕೂಲಿಕಾರರ ಸಂಖ್ಯೆ ಹಾಗೂ ಸಮಸ್ಯೆಗಳನ್ನು ಕಡೆಗಣಿಸಿ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಯೋಚನೆ ಮಾಡುವುದು ವ್ಯರ್ಥ. ಅಭಿವೃದ್ಧಿಯ ಯೋಜನೆಗಳು ಹಾಗೂ ಕಾರ್ಯಕ್ರಮಗಳು ಕೃಷಿ ಕೂಲಿಕಾರರನ್ನು ಕೇಂದ್ರವಾಗಿಟ್ಟು ಹೆಣೆಯಲ್ಪಡದಿದ್ದರೆ ಯಾವ ಅಭಿವೃದ್ಧಿಯೂ ಸಾಧ್ಯವಾಗದು ಎಂದು ಹೇಳಿ ಜಿ.ಎನ್. ಅವರು ತಮ್ಮ ಪ್ರಬಂಧವನ್ನು ಮುಕ್ತಾಯಗೊಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ನಿತ್ಯಾನಂದಸ್ವಾಮಿ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಇನ್ನೊಬ್ಬ ಉಪಾಧ್ಯಕ್ಷರಾದ ಕರಿಯಪ್ಪ ಅಚ್ಚೊಳ್ಳಿ ಅವರು ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ವಿಚಾರಗೋಷ್ಠಿಗಳು

ಅನಂತರ ನಡೆದ ಎರಡು ವಿಚಾರಗೋಷ್ಠಿಗಳು ಕೂಲಿಕಾರರ ಸಮಸ್ಯೆಯ ವಿವಿಧ ಮುಖಗಳನ್ನು ಪರಿಚಯಿಸುವುದರಲ್ಲಿ ಯಶಸ್ವಿಯಾದವು. **ಉತ್ತರಕರ್ನಾಟಕದ ಆರ್ಥಿಕ ಅಭಿವೃದ್ಧಿ ಮತ್ತು ಕೃಷಿ ಕೂಲಿಕಾರರ ಜೀವನ ಮಟ್ಟ** ಎಂಬ ವಿಷಯದ ಕುರಿತು ಮಾತನಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ **ಡಾ॥ ಟಿ.ಆರ್.ಚಂದ್ರಶೇಖರ್** ಅವರು ಹೈದ್ರಾಬಾದ್ ಕರ್ನಾಟಕದ ತೀವ್ರ ವಂಚನೆಗೊಳಗಾದ ಇಡೀ ಕೃಷಿ ಕಾರ್ಮಿಕ ವಿಭಾಗವನ್ನು ಅಭಿವೃದ್ಧಿಯ ಘಟಕವನ್ನಾಗಿ (Target Group) ಪರಿಗಣಿಸಿ ಅವರ ಸುತ್ತ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಹೇಳಿದರು.

ಉತ್ತರ ಕರ್ನಾಟಕದ ಕೃಷಿ ಸಂಬಂಧಗಳು ಮತ್ತು ಕೂಲಿಕಾರರು ಎಂಬ ವಿಷಯವನ್ನು ಕುರಿತು ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ **ಮಾರುತಿ ಮಾನ್ಪಡೆ**ಯವರು ಭೂಮಾಲಕ ಶಕ್ತಿಗಳ ಅಟ್ಟಹಾಸ ಅಳಿಯದೆ ಕೃಷಿಕೂಲಿಕಾರರ ಬದುಕಿನಲ್ಲಿ ಬದಲಾವಣೆ ಬರುವುದಿಲ್ಲ ಎಂದು ಹೇಳಿದರು.

ಶೈಕ್ಷಣಿಕ ಅಭಿವೃದ್ಧಿ ಮತ್ತು ಕೂಲಿಕಾರರು ಎಂಬ ವಿಷಯವನ್ನು ಪ್ರಸ್ತಾಪಿಸಿ ಮಾತನಾಡಿದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ

ಪುಟ 10 ಕ್ಕೆ

ಎಲ್ಲಿಂದ ಬಂದವರು ಇವರು?

ಹೈದ್ರಾಬಾದ್ ಕರ್ನಾಟಕದಲ್ಲಿ ಕೃಷಿಕೂಲಿಕಾರರ ಸಂಖ್ಯೆ ರಾಜ್ಯದಲ್ಲೇ ಅತಿ ಹೆಚ್ಚು ಮತ್ತು ಅದು ಇನ್ನೂ ಹೆಚ್ಚುತ್ತಾ ಇದೆ ಎಂದು ಹೇಳಿದ ಜಿ.ಎನ್.ನಾಗರಾಜ ಅವರು ಹೈದ್ರಾಬಾದ್ ಕರ್ನಾಟಕದ ಕೃಷಿಕೂಲಿಕಾರರ ಮೂಲವನ್ನು ಹುಡುಕಲು ಹೊರಟರು. ಸುಮಾರು 100 ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಕೃಷಿ ಕೂಲಿಕಾರರು ಅತೀ ಕಡಿಮೆ ಸಂಖ್ಯೆಯಲ್ಲಿ ಇದ್ದರು. ಬಹುತೇಕ ಭೂಮಿಯು ದೊಡ್ಡ ದೊಡ್ಡ ಜಮೀನ್ದಾರರ, ಜಾಗಿರ್ದಾರರ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ಲಕ್ಷಾಂತರ ಗೇಣಿದಾರರು ಇವರ ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದು ಭೂಮಾಲೀಕರಿಂದ ತೀವ್ರ ಶೋಷಣೆ ಹಾಗೂ ದಬ್ಬಾಳಿಕೆಗೆ ಒಳಗಾಗಿದ್ದರು. ಭೂಸುಧಾರಣೆ ಜಾರಿಗೆ ಬರುವುದರ ಸುಳಿವು ಸಿಕ್ಕ ತಕ್ಷಣವೇ ಭೂಮಾಲೀಕರು ಗೇಣಿದಾರರನ್ನು ನಿರ್ದಾಕ್ಷಿಣ್ಯವಾಗಿ ಒಕ್ಕಲೆಬ್ಬಿಸಿ ಭೂಮಿಯಿಂದ ಹೊರದಬ್ಬಿದರು. ಇಲ್ಲಿ ಉಳುವವನೇ ಭೂಮಿಯ ಒಡೆಯನಾಗಲಿಲ್ಲ. ಕಾನೂನಿನ ಕಣ್ಣಿಗೆ ಮಣ್ಣೆರಚಿ ಇಲ್ಲಿಯ ಮಾಲೀಕರು ಭೂಮಿಯನ್ನು ತಮ್ಮ ಕೈಯಲ್ಲಿ ಉಳಿಸಿಕೊಂಡರು. ಭೂಮಿಯನ್ನು ಕಳೆದುಕೊಂಡ ಗೇಣಿದಾರ ರೈತರು ಕೃಷಿ ಕೂಲಿಕಾರರಾಗಿ ಪರಿವರ್ತನೆ ಹೊಂದಿದರು. ಅಂದಿನಿಂದ ಆರಂಭವಾಯ್ತು ಅವರ ಅಲೆಮಾರಿ ಜೀವನ. ಭೂಸುಧಾರಣೆ ಜಾರಿಗೆ ಬಂದಾಗ ನಮೂನೆ 7 ರಲ್ಲಿ ಅರ್ಜಿ ಸಲ್ಲಿಸಲು ಸಹ ಧೈರ್ಯ ಮಾಡಲಿಲ್ಲ. ಇಲ್ಲಿ ಪಾಳೆಗಾರಿ ಭೂಮಾಲೀಕರ ದಬ್ಬಾಳಿಕೆ ಎಷ್ಟು ತೀವ್ರವಾಗಿತ್ತೆಂದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಕೇವಲ 10 ಸಾವಿರ ಡಿಕ್ಲರೇಷನ್ ಅರ್ಜಿಗಳು ಸ್ವೀಕೃತವಾಗಿ ಅವುಗಳಲ್ಲಿ ಕೇವಲ ಶೇ 18 ರಷ್ಟು ಅರ್ಜಿಗಳು ಮಾತ್ರ ಪುರಸ್ಕೃತಗೊಂಡವು. ಆದರೆ ಇದೇ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1,36,000 ಅರ್ಜಿಗಳು ಸ್ವೀಕಾರವಾಗಿ ಅವುಗಳಲ್ಲಿ ಶೇ 77 ರಷ್ಟು ಅರ್ಜಿಗಳು ಪುರಸ್ಕೃತವಾದವು. ಹೀಗಾಗಿ **ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರ ಸಂಖ್ಯೆ ಹೆಚ್ಚು, ಗುಲ್ಬರ್ಗಾ ಜಿಲ್ಲೆಯಲ್ಲಿ ಕೂಲಿಕಾರರ ಸಂಖ್ಯೆ ಹೆಚ್ಚು. ಹೈದ್ರಾಬಾದ್ ಕರ್ನಾಟಕದಲ್ಲಿ ಕರ್ನಾಟಕ ಭೂಸುಧಾರಣೆಗಳ ವಿಕೃತರೂಪವಷ್ಟೇ ಜಾರಿಗೆ ಬಂತು.** 500 ಎಕರೆಗಿಂತಲೂ ಹೆಚ್ಚು ಜಮೀನು ಹೊಂದಿರುವ ಭೂಮಾಲೀಕರು ಇಲ್ಲಿ ಇಂದಿಗೂ ಕಾಣಸಿಗುತ್ತಿದ್ದು ಅವರೇ ಈ ಪ್ರದೇಶದ ರಾಜಕೀಯವನ್ನು ನಿಯಂತ್ರಿಸುತ್ತಾರೆ. ಇವರು ಸ್ವತಃ ವ್ಯವಸಾಯ ಮಾಡುವುದಿಲ್ಲ. ಭೂಮಿಯನ್ನು ಬಹುತೇಕವಾಗಿ ಅನಧಿಕೃತ ಗುತ್ತಿಗೆಗೆ ಕೊಡುತ್ತಾರೆ. ಆಂಧ್ರದಿಂದ ಬಂದವರೂ ಇಲ್ಲಿ ಭೂಮಿಯನ್ನು ಗುತ್ತಿಗೆಗೆ ಪಡೆಯುತ್ತಿದ್ದಾರೆ. ಎಕರೆಗೆ ಸುಮಾರು ಹತ್ತು ಸಾವಿರ ರೂಪಾಯಿಗಳಷ್ಟು ಪ್ರಮಾಣದಲ್ಲಿ ಗೇಣಿಕೊಡುತ್ತಾರೆ. ಹೀಗೆ ಯಾವುದೇ ನೋವಿಲ್ಲದೆ ಬರುವ ಹಣದಿಂದ ಬೆಂಗಳೂರಿನ ಪಂಚತಾರಾ ಹೋಟೆಲುಗಳಲ್ಲಿ ಇವರು ಮಜಾ ಮಾಡಿಕೊಂಡು ಇರುತ್ತಾರೆ. **ಮತದಾರರಿಗೆ ಒಂದು ಸಲವೂ ಮುಖ ತೋರಿಸದಿರುವವರು ಶಾಸಕರಾಗಿ ಆಯ್ಕೆಯಾಗುತ್ತಾರೆ. ಇವರು ಹುಟ್ಟುಹಾಕಿ ಪೋಷಿಸುವ 'ದಣಿ ಸಂಸ್ಕೃತಿಯ ಹೆಸರಿನಲ್ಲಿ ಬಾಲ್ಯವಿವಾಹ, ದೇವದಾಸಿ ಪದ್ಧತಿ, ಅಸ್ಪೃಶ್ಯತೆ, ಮೂಢನಂಬಿಕೆ ಮೊದಲಾದ ಅನಿಷ್ಟಗಳು ಹುಲುಸಾಗಿ ಬೆಳೆಯುತ್ತದೆ.**

ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ' ಎಂಬ ಹೆಸರಿನಲ್ಲಿ ಅಮೆರಿಕಾ ಅಫಘಾನಿಸ್ತಾನದ ಮೇಲೆ ಭೀಕರ ಯುದ್ಧ ಸಾರಿದೆ. ನಿರಂತರ ನಡೆಯುತ್ತಿರುವ ಬಾಂಬ್‌ಗಳ ಧಾಳಿಗೆ ಸಾವಿರಾರು ಮುಗ್ಧ ನಾಗರೀಕರು, ಮಕ್ಕಳು ಬಲಿಯಾಗುತ್ತಿದ್ದಾರೆ. ಅಪಾರ ಆಸ್ತಿ ಪಾಸ್ತಿ ಧ್ವಂಸವಾಗಿದೆ. ಇಂತಹ ಯುದ್ಧದಿಂದ ಬರ್ಬರ ಭಯೋತ್ಪಾದನಾ ಪಿಡುಗು ತೊಲಗೀತೆ? 'ಲಾಡೆನ್ ಸತ್ತರೂ ಯುದ್ಧ ನಿಲ್ಲುವುದಿಲ್ಲ ಇದನ್ನು ಇತರೆಡೆಗೂ (ಇರಾಕ, ಸೂಡಾನ್...) ವಿಸ್ತರಿಸಲಾಗುವುದು, ಇದೊಂದು ದೀರ್ಘ ಯುದ್ಧ' ಎನ್ನುತ್ತವೆ ಅಮೆರಿಕಾ-ಬ್ರಿಟನ್. ಅಂತರ್ರಾಷ್ಟ್ರೀಯ ಕಾನೂನು ಕ್ರಮ ಬಳಸಿ ಭಯೋತ್ಪಾದನೆ ಮಟ್ಟ ಹಾಕುವುದನ್ನು ತಿರಸ್ಕರಿಸಿರುವ ಅಮೆರಿಕಾ ಈ ಯುದ್ಧವನ್ನು ಸಾರಿರುವ ನಿಜವಾದ ಉದ್ದೇಶಗಳೇನು? ಭಾರತದ ಪಾತ್ರ ಏನಿರಬೇಕು ಎಂಬುದನ್ನು ಈ ಲೇಖನ ವಿವರಿಸುತ್ತದೆ. ಹಾಗೆ ಜಗತ್ತಿನೆಲ್ಲೆಡೆ ಸಿಡಿದೆದ್ದ ಯುದ್ಧ ವಿರೋಧಿ ಜನ ಪ್ರತಿಭಟನೆಗಳನ್ನೂ ಸಹ.



ಬಾಂಬ್ ಧಾಳಿಯಲ್ಲಿ ಧ್ವಂಸ

ಅಫಘಾನಿಸ್ತಾನದ ಮೇಲೆ ಅಮೆರಿಕ ಬರ್ಬರ ಬಾಂಬ್ ಧಾಳಿ ವ್ಯಾಪಕ ಯುದ್ಧದ ಅಪಾಯ

ಶರತ್‌ಚಂದ್ರ

ಕೊನೆಗೂ ಯುದ್ಧ ಆರಂಭವಾಗಿದೆ. ಅಮೆರಿಕ ಈ ವಾರವಿಡೀ ಅಫಘಾನಿಸ್ತಾನದ ಹಲವು ನಗರಗಳ, ಪ್ರದೇಶಗಳ ಮೇಲೆ ಭೀಕರ ಬಾಂಬ್ ಧಾಳಿ ನಡೆಸಿತು. ಈಗಾಗಲೇ ನೂರಾರು ಜನ ಸತ್ತಿದ್ದಾರೆ. ಅಫಘಾನಿಸ್ತಾನದ ಅಳಿದುಳಿದಿರುವ ಮೂಲಭೂತ ಸೌಕರ್ಯ(ವಿಮಾನ ನಿಲ್ದಾಣ, ರೇಡಿಯೋ, ಟಿ.ವಿ.ಸ್ಟೇಶನ್‌ಗಳು, ನೀರು ವಿದ್ಯುತ್ ಪೂರೈಕೆ)ಗಳನ್ನು ಧ್ವಂಸ ಮಾಡಲಾಗುತ್ತಿದೆ. ಭಯೋತ್ಪಾದಕರ ತರಬೇತಿ ಶಿಬಿರಗಳು ಮತ್ತು ಮಿಲಿಟರಿ ಕೇಂದ್ರಗಳ ಮೇಲೆ ಬಾಂಬ್ ದಾಳಿ ಎಂಬುದು ಅಮೆರಿಕದ ಪ್ರಚಾರವಾದರೂ, ಹಲವು ನಾಗರಿಕರ ಮನೆ ಮಾರುಗಳೂ, ನಾಗರಿಕ ಸೌಲಭ್ಯಗಳೂ ದಾಳಿಗೆ ತುತ್ತಾಗಿವೆ. ವಿಶ್ವಸಂಸ್ಥೆಯ ಆಫೀಸೊಂದು ವಿಮಾನದಾಳಿಯಲ್ಲಿ ಧ್ವಂಸವಾಗಿದೆ. ಅಮೆರಿಕ ಒಪ್ಪಿಕೊಂಡಿರುವ ಮೊದಲ ಸಾವು ವಿಶ್ವಸಂಸ್ಥೆ ಕಾರ್ಯಕರ್ತರದ್ದೇ. ದಾಳಿಯನ್ನು ಹಿಂದೂ ಮಹಾಸಾಗರದ ಎರಡು ಭಾರಿ ಅಮೆರಿಕನ್ ಯುದ್ಧ ನೌಕೆಗಳಲ್ಲಿರುವ ವಿಮಾನಗಳನ್ನು ಬಳಸಿ ಮತ್ತು ಡಿಯಾಗೋ ಗಾರ್ಸಿಯದಲ್ಲಿರುವ ಅಮೆರಿಕದ ನೆಲೆಗಳಿಂದ ಮಾಡಲಾಗಿದೆ. ಕೆಲವು ವಿಮಾನಗಳು ಪಾಕಿಸ್ತಾನದ ವಾಯುನೆಲೆಗಳನ್ನು ಬಳಸಿವೆ ಎಂದು ವರದಿಯಾಗಿದೆ. ಅಫಘಾನಿಸ್ತಾನದ ಬಹುಭಾಗ ಜನ ಅವರ ದೇಶದಲ್ಲೇ ನಿರಾಶ್ರಿತರಾಗಿದ್ದಾರೆ. ಸಾವಿರಾರು ಜನ ಪಾಕಿಸ್ತಾನದ ಗಡಿ ಪ್ರದೇಶಗಳಿಗೆ ಓಡಿ ಹೋಗುತ್ತಿದ್ದಾರೆ. ಆದರೆ ಪಾಕಿಸ್ತಾನ ಅಫಘಾನಿಸ್ತಾನದ ಜತೆ ಗಡಿಯನ್ನು ಮುಚ್ಚಿರುವುದರಿಂದ ಅಫಘಾನ್ ಜನರ ಪರಿಸ್ಥಿತಿ ಇನ್ನಷ್ಟು ವಿಷಮ ಸ್ಥಿತಿಗೆ ತಲುಪಿದೆ. ಈಗಾಗಲೇ 37 ಲಕ್ಷ ಅಫಘಾನರು ನೆರೆಯ ದೇಶಗಳಲ್ಲಿ ನಿರಾಶ್ರಿತರಾಗಿ ಬದುಕುತ್ತಿದ್ದಾರೆ. ಸುಮಾರು 10 ಲಕ್ಷ ದೇಶದೊಳಗೆ ನಿರಾಶ್ರಿತರಾಗಿ ಬದುಕುತ್ತಿದ್ದಾರೆ. ಅಂದರೆ ನಾಲ್ವರು ಅಫಘಾನರಲ್ಲಿ ಒಬ್ಬ ನಿರಾಶ್ರಿತ ಎಂಬಂತಹ ಭೀಕರ ಸ್ಥಿತಿ. ಅಮೆರಿಕದ ಈ ಬರ್ಬರ ಧಾಳಿ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಲಿದೆ.

ವ್ಯಾಪಕ ದೀರ್ಘ ಯುದ್ಧದ ಅಪಾಯ

ಅಧ್ಯಕ್ಷ ಬುಶ್ ಯುದ್ಧ ಆರಂಭಿಸುವಾಗ ಮತ್ತು ಆಮೇಲೆ ಯುದ್ಧದ ಬಗ್ಗೆ ನೀಡುತ್ತಿರುವ ಹೇಳಿಕೆಗಳು ಇನ್ನಷ್ಟು ಆತಂಕಕಾರಿಯಾಗಿವೆ. ಬುಶ್ ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಯುದ್ಧದ ಬಗ್ಗೆ ಕೊಟ್ಟ ನೋಟೀಸ್‌ನಲ್ಲಿ; ಯುದ್ಧ ಅಫಘಾನಿಸ್ತಾನಕ್ಕೆ ಸೀಮಿತವಾಗಿರುವುದಿಲ್ಲ. ಯುದ್ಧ ಬೇರೆ ದೇಶಗಳಿಗೂ ವಿಸ್ತರಿಸಬಹುದು ಎಂದು ಹೇಳಿದ್ದಾರೆ. ಬೇರೆ ಹೇಳಿಕೆಗಳಲ್ಲಿ ಇರಾಕ್ ಮತ್ತು ಇತರ ಕೊಲ್ಲಿ ದೇಶಗಳಿಗೂ ಯುದ್ಧ ಹರಡಬಹುದು ಎಂದು ಹೇಳಲಾಗಿದೆ. ಯುದ್ಧ ಹತ್ತು ವರ್ಷಗಳವರೆಗೂ ಮುಂದುವರೆಯಬಹುದು ಎಂದು ಹೇಳಲಾಗಿದೆ. ಅಫಘಾನಿಸ್ತಾನದ ದುರ್ಗಮ ಬೆಟ್ಟಗಳಲ್ಲಿ ಭೂಯುದ್ಧದ ನೆಪದಲ್ಲಿ ದೀರ್ಘ ಯುದ್ಧಕ್ಕೆ ಅಧ್ಯಕ್ಷ ಬುಶ್ ತಮ್ಮದೇಶದ ಮತ್ತು ಇಡೀ ಜಗತ್ತಿನ ಜನತೆಯನ್ನು ಮಾನಸಿಕವಾಗಿ ತಯಾರು ಮಾಡುತ್ತಿದ್ದಾರೆ. ಅಫಘಾನಿಸ್ತಾನದಲ್ಲಿರುವ ಭಯೋತ್ಪಾದಕರನ್ನು ಅಟ್ಟಿಸುತ್ತಾ ನೆರೆ ದೇಶಗಳಿಗೆ ಅವರು ಹೋದರೆ ಅವರ ಮೇಲೆ ಅಲ್ಲಿಯ ಧಾಳಿ ಮಾಡಬೇಕಾದೀತು ಎಂದು ಹೇಳುತ್ತಾ ಅಮೆರಿಕ ಈಗಾಗಲೇ ನೆರೆಯ ಇರಾನ್, ಚೀನಾ, ತುರ್ಕಿಸ್ತಾನ, ತಾಝಿಕಿಸ್ತಾನ, ಉಝ್‌ಬೇಕಿಸ್ತಾನ ಮೇಲೆ ದಾಳಿ ನಡೆಸುವ ಹಕ್ಕನ್ನು ಸಾಧಿಸುತ್ತಿದೆ. ಇವೆಲ್ಲ ವ್ಯಾಪಕ ದೀರ್ಘ ಯುದ್ಧದ ಅಪಾಯವನ್ನು ಹೆಚ್ಚಿಸಿದೆ.

ಮಧ್ಯ ಏಶ್ಯಾ ತೈಲ ಸಂಪನ್ಮೂಲದ ಮೇಲೆ ಹಿಡಿತಕ್ಕೆ ಯುದ್ಧ

ಆದರೆ ಈ ಯುದ್ಧ ಅಮೆರಿಕ ಮತ್ತು ಅದರ ಹಿಂಬಾಲಕರು ಹೇಳುವಂತೆ ಭಯೋತ್ಪಾದನೆಯ ವಿರುದ್ಧವೇ? ಅಲ್ಲ ಎಂಬುದು ದಿನೇ ದಿನೇ ಹೆಚ್ಚು


ಯಾಕೀ ಯುದ್ಧದ ರಣಭೇರಿ

ಹಾಗಾದರೆ ಯಾಕೀ ಯುದ್ಧದ ರಣಭೇರಿ? ಅಮೆರಿಕ ಮತ್ತು ಸಾಮ್ರಾಜ್ಯಶಾಹಿ ಆಳರಸರು 'ಭಯೋತ್ಪಾದನೆ ವಿರುದ್ಧ ಯುದ್ಧ' ವನ್ನು ತಮ್ಮ ಮೂಲಭೂತ ಆರ್ಥಿಕ ಹಿತಾಸಕ್ತಿ ಸಾಧಿಸಲು ಬಳಸುತ್ತಿದ್ದಾರೆ. ಏನದು ಆರ್ಥಿಕ ಹಿತಾಸಕ್ತಿ? ಮಧ್ಯ ಏಶ್ಯಾ ತೈಲ ಮತ್ತು ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಶ್ರೀಮಂತವಾದ ಪ್ರದೇಶ. ಕ್ಯಾಸ್ಪಿಯನ್ ಸಮುದ್ರ ತಳ ಮತ್ತು ತೀರ (ಇರಾನ್, ತುರ್ಕೇಯಾನಿಸ್ತಾನ, ರಶ್ಯಾ, ಕಝಾಕಿಸ್ತಾನದ ನಡುವೆ ಬರುವ ಸಮುದ್ರ), ತುರ್ಕೇಯಾನಿಸ್ತಾನದ ಕಾರಕೂಮ್ ಮರುಭೂಮಿಯಲ್ಲಿ ಜಗತ್ತಿನ ಮೂರನೇ ದೊಡ್ಡ ಇನ್ನೂ ಬಳಸಬಹುದಾದ ತೈಲ ಮತ್ತು ಪ್ರಾಕೃತಿಕ ಗ್ಯಾಸ್ ಸಂಪನ್ಮೂಲವಿದೆ. ಇಂದು ಬಳಸಲಾಗುತ್ತಿರುವ ತೈಲ ನಿಕ್ಷೇಪ ಇರುವ ಪ್ರದೇಶಗಳೆಂದರೆ ಪಶ್ಚಿಮ ಸೈಬೀರಿಯಾ ಮತ್ತು ಪರ್ಶಿಯನ್ ಕೊಲ್ಲಿ ಪ್ರದೇಶ. ಮಧ್ಯಏಶ್ಯಾ ಪ್ರದೇಶದ ತೈಲ ಮತ್ತು ಪ್ರಾಕೃತಿಕ ಗ್ಯಾಸ್ ನಿಕ್ಷೇಪ ಅಮೆರಿಕದ ಮುಂದಿನ 30 ವರ್ಷಗಳ ಇಂಧನ ಅವಶ್ಯಕತೆ ಪೂರೈಸಬಲ್ಲದು. ಇದರ ಒಟ್ಟು ಮೌಲ್ಯ ನಾಲ್ಕು ಸಾವಿರ ಶತಕೋಟಿ ಡಾಲರುಗಳು! ಅಮೆರಿಕ ಈಗ ತನ್ನ ಅರ್ಧದಷ್ಟು ತೈಲ ಅವಶ್ಯಕತೆಯನ್ನು ಆಮದು ಮಾಡುತ್ತಿದ್ದು ಇನ್ನೂ 20 ವರ್ಷಗಳಲ್ಲಿ ಇದು ಮೂರನೇ ಎರಡು ಭಾಗಕ್ಕೆ ಏರಬಹುದು. ಅಲ್ಲದೆ ಅಮೆರಿಕದ ತೈಲ ಕಂಪನಿಗಳ ಅಂತರ್ರಾಷ್ಟ್ರೀಯ ತೈಲ ವ್ಯವಹಾರ, ಆ ದೇಶದ ಆರ್ಥಿಕ ಬಲದ ಬೆನ್ನೆಲುಬು. ತೈಲ ನಿಕ್ಷೇಪಗಳು ಅವುಗಳ ಬೆಲೆ ಮೇಲೆ ನೇರ ಹಿಡಿತ, ಅವನ್ನು ಸಾಗಾಣಿಕೆ ಮಾಡುವ ಪ್ರದೇಶದಲ್ಲಿ ಕೈಗೊಂಬೆ ಸರ್ಕಾರಗಳ ಸ್ಥಾಪನೆ - ಹಿಂದೆಯೂ ಅಮೆರಿಕದ ದೈತ್ಯ ತೈಲ ಕಂಪನಿಗಳು ಮತ್ತು ಅವುಗಳ ಪ್ರಭಾವವಿರುವ ಅಮೆರಿಕಾದ ಸರ್ಕಾರದ ದೂರಗಾಮಿ ಆರ್ಥಿಕ ಮತ್ತು ರಾಜಕೀಯ ನೀತಿಯನ್ನು ನಿರ್ಧರಿಸುತ್ತಿತ್ತು. ಈಗಲೂ ಅಫಘಾನಿಸ್ತಾನದ ಮೇಲೆ ಯುದ್ಧದ ಹಿಂದಿರುವ ಹೂರಣವೂ ಅದೇ. ಅಮೆರಿಕದ ತೈಲ ಅವಶ್ಯಕತೆ ಅಲ್ಲದೆ, ತೈಲಕ್ಕೆ ಬೇಡಿಕೆ ಇರುವುದು ಬೆಳೆಯುತ್ತಿರುವುದು ಏಶ್ಯಾದಲ್ಲಿ. ಈ ಪ್ರದೇಶಗಳಿಗೆ ಸಾಗಾಣಿಕೆಗೆ ತುರ್ಕೆಯಾಸ್ತಾನ್, ಅಫಘಾನಿಸ್ತಾನ, ಪಾಕಿಸ್ತಾನದ ಮೂಲಕ ಪೈಪ್ ಲೈನ್‌ಗಳಲ್ಲಿ ಹರಿಸಿ ಹಿಂದೂ ಮಹಾಸಾಗರಕ್ಕೆ ಒಂದು ಹಡಗು ಸಾಗಾಣಿಕೆ ಮಾಡುವುದು ಅತ್ಯಂತ ಸೂಕ್ತ ಹಾದಿ. ಈ ಪ್ರದೇಶದ ಎತ್ತರಕ್ಕಿರುವುದು ಪೂರ್ತಿ ಏಶ್ಯಾದ ಪ್ರದೇಶಗಳು ಮತ್ತು ಯುರೋಪಿಯನ್ ಮಾರುಕಟ್ಟೆಯಲ್ಲಿ ತೈಲದ ಬೇಡಿಕೆ ಅಷ್ಟೇನೂ ಹೆಚ್ಚುತ್ತಿಲ್ಲ. ಆದ್ದರಿಂದ ಈ ಬದಲಿ ಕಾರ್ಯ ಸಾಧುವಲ್ಲ. ಇದರಿಂದಲೇ **ಅಫಘಾನಿಸ್ತಾನಕ್ಕೆ ಅಮೆರಿಕದ ಆಳುವವರ, ತೈಲ ಕಂಪನಿಗಳ ಯೋಜನೆಯಲ್ಲಿ ಮಹತ್ವ ಬರುವುದು. ಹಿಂದೆ 'ಇಸ್ಲಾಮಿಕ್ ಮೂಲಭೂತವಾದಿ ಭಯೋತ್ಪಾದನೆ'ಯನ್ನು ಹುಟ್ಟು ಹಾಕಿದ್ದೂ ಇದಕ್ಕಾಗಿಯೇ. ಈಗ ಆ 'ಭಯೋತ್ಪಾದನೆ'ಯ ವಿರುದ್ಧ ಸಮರದ ಹೆಸರಲ್ಲಿ ಅದನ್ನೇ ಮುಂದುವರೆಸಲಾಗುತ್ತಿದೆ.** ಅಫಘಾನಿಸ್ತಾನದಲ್ಲಿ ಕೈಗೊಂಬೆ ಸರ್ಕಾರ ಅವರ ಗುರಿ'. ಇದಲ್ಲದೆ ಅಫಘಾನಿಸ್ತಾನ, ಪಾಕಿಸ್ತಾನಗಳಲ್ಲಿ ಬಲವಾದ ಮಿಲಿಟರಿ ನೆಲೆಗಳು ಉಳಿದೆಲ್ಲಾ ನೆರೆಯ ದೇಶಗಳನ್ನು ಈ ಆರ್ಥಿಕ ಹಿತಾಸಕ್ತಿಗೆ ಧಕ್ಕೆ ತರದಂತೆ ಬೆದರಿಸಲು ಉತ್ತಮ ಆಯಕಟ್ಟಿನ ನೆಲೆಗಳು. ಇದಷ್ಟೇ ಅಮೆರಿಕದ 'ಭಯೋತ್ಪಾದನೆ ವಿರುದ್ಧ ಯುದ್ಧ'ದ ಹೂರಣ. ಅಧ್ಯಕ್ಷ ಬುಶ್ ಮತ್ತು ಉಪಾಧ್ಯಕ್ಷ ಚೇನಿ ಇಬ್ಬರೂ ದೈತ್ಯ ತೈಲ ಕಂಪನಿಗಳ ಮ್ಯಾನೇಜ್‌ಮೆಂಟ್‌ಗಳಲ್ಲಿ ಹಿರಿಯ ಅಧಿಕಾರಿಗಳಿದ್ದರು ಎಂಬುದನ್ನು ಇಲ್ಲಿ ನೆನಪಿಸಿ ಕೊಳ್ಳಬಹುದು. ಅವರು ತಮ್ಮ ತೈಲ ಧಣಿಗಳ ಕೆಲಸವನ್ನು ತಮ್ಮ ಈಗಿನ 'ಉದ್ಯೋಗ'ಗಳಲ್ಲೂ ಮುಂದುವರೆಸುತ್ತಿದ್ದಾರೆ.

ಇದಕ್ಕಾಗಿಯೇ ಅಫಘಾನಿಸ್ತಾನದ ಮಾಜಿ ದೊರೆ (80 ವರ್ಷದ) ಝಾಹಿರ್ ಶಾಹನ್ನು 'ಕೈಗೊಂಬೆ ದೊರೆ' ಯಾಗಿ ಕೂರಿಸುವ ಸನ್ನಾಹವನ್ನು ಅಮೆರಿಕ ಮಾಡುತ್ತಿದೆ. ಅಫಘಾನಿಸ್ತಾನದ ಇಸ್ಲಾಮಿಕ್ ಗುಂಪುಗಳು ಸರ್ಕಾರದಲ್ಲಿ ಪಾತ್ರವಹಿಸುತ್ತವೆ. ಆದರೆ ಯಾವುದೇ ಒಂದು ಗುಂಪು ಬಲವಾಗದಂತೆ ಅಮೆರಿಕ ಎಚ್ಚರಿಕೆ ವಹಿಸುತ್ತಿದೆ. ಅವುಗಳೊಳಗಿನ ಒಳಜಗಳಗಳನ್ನು ಜೀವಂತವಾಗಿದ್ದು ಅವೆಲ್ಲಾ 'ಕೈಗೊಂಬೆ ಸರ್ಕಾರ'ದ ಭಾಗವಾಗಿರುವುದು ಅಮೆರಿಕದ ಹುನ್ನಾರ.



ಹೆಚ್ಚು ಜನರಿಗೆ ಸ್ಪಷ್ಟವಾಗುತ್ತಿದೆ. ಈಗ ಅಮೆರಿಕ ಹೆದರಿಸುತ್ತಿರುವ ಎಲ್ಲಾ ಭಯೋತ್ಪಾದಕರು, ಭಯೋತ್ಪಾದಕ ಸಂಘಟನೆಗಳು, ಅಮೆರಿಕದ ಸಿಐಎ-ಪಾಕಿಸ್ತಾನದ ಐಎಸ್‌ಐಗಳ ಅಕ್ರಮ ಸಂತಾನ ಎಂಬುದು ಈಗ ಬಹಿರಂಗ ಗುಟ್ಟು. 80 ರ ದಶಕದಲ್ಲಿ ಸೋವಿಯತ್ ಒಕ್ಕೂಟದ ವಿರುದ್ಧ ಈ ಭಯೋತ್ಪಾದನೆಯ ಭಾರಿ ವ್ಯವಸ್ಥೆಯನ್ನು ಹುಟ್ಟು ಹಾಕಲಾಗಿತ್ತು ಮತ್ತು ಇತ್ತೀಚಿನ ಚೆಚೆನ್ಯಾ, ಕೊಸೊವೊ ಆಂತರಿಕ ಯುದ್ಧಗಳವರೆಗೆ ಬಳಸಲಾಗಿತ್ತು. ಭಯೋತ್ಪಾದನಾ ವ್ಯವಸ್ಥೆ ಹುಟ್ಟುಹಾಕುವುದರಲ್ಲಿ ಅಮೆರಿಕದ ಜೂನಿಯರ್ ಪಾರ್ಟನರ್ ಆಗಿದ್ದ ಮತ್ತು ಭಾರತದ ವಿರುದ್ಧ ಭಯೋತ್ಪಾದನಾ ವ್ಯವಸ್ಥೆಯನ್ನು ನಡೆಸುತ್ತಿರುವ ಪಾಕಿಸ್ತಾನ, 'ಭಯೋತ್ಪಾದನೆ ವಿರುದ್ಧ ಯುದ್ಧ'ದಲ್ಲಿ ಅತ್ಯಂತ ದೊಡ್ಡ ಸಹಚರ ಎಂಬುದೇ ಇದು ಎಷ್ಟು ಹಾಸ್ಯಾಸ್ಪದ ಎಂಬುದನ್ನು ತೋರಿಸುತ್ತದೆ. ಭಯೋತ್ಪಾದಕ ಸಂಘಟನೆಗಳ ಆರ್ಥಿಕ ಮೂಲಗಳ ಮೇಲೆ ದಿಗ್ಬಂಧನ ಹಾಕುವ ಅಮೆರಿಕದ ತರಾತುರಿಯೂ ನಾಟಕವೇ. ಏಕೆಂದರೆ ಭಯೋತ್ಪಾದಕರಿಗೆ ಆರ್ಥಿಕ ನೆರವು, ಬೆಂಬಲ ಯಾವಾಗಲೂ ನೇರವಾಗಿ ಬ್ಯಾಂಕ್ ಮೂಲಕ ಬರುವುದಿಲ್ಲ.



ಬಾಂಬ್ ದಾಳಿಯಲ್ಲಿ ಗಾಯಗೊಂಡು ಬದುಕಲು ಹಾತೊರೆಯುವವರು

ಭಯೋತ್ಪಾದಕರಿಗೆ ಆರ್ಥಿಕ ನೆರವು ತಲುಪಿಸುವ ಭೂಗತ ಹಣಕಾಸು ವ್ಯವಸ್ಥೆಯನ್ನು (ಮಾದಕ ದ್ರವ್ಯಗಳ ಮಾರಾಟ, ಶಸ್ತ್ರಾಸ್ತ್ರ ಮಾಫಿಯಾ ಮೂಲಕ, ಭಯೋತ್ಪಾದಕ ಎಂದು ಹೆಸರಿಲ್ಲದ ಇತರ ಸಂಘಟನೆಗಳ ಮೂಲಕ ಇತ್ಯಾದಿ) ಸಿಐಎ ನೇ ಬೆಳೆಸಿತ್ತು. ಈ ಭೂಗತ ವ್ಯವಸ್ಥೆ ಹಣಕಾಸು ಸಂಸ್ಥೆಗಳ ಮೇಲೆ ನಿಷೇಧ ಹೇರಿದರೂ ಕೆಲಸ ಮಾಡುತ್ತದೆ.

ಭಯೋತ್ಪಾದನೆ ಮತ್ತು ಯುದ್ಧ ಎರಡಕ್ಕೂ ವಿರೋಧ

ಈ ಸಾಮ್ರಾಜ್ಯಶಾಹಿ ಆರ್ಥಿಕ ಹಿತಾಸಕ್ತಿ ಮುಚ್ಚಿಕೊಳ್ಳಲು ಈ ಯುದ್ಧವನ್ನು ವಿರೋಧಿಸುವವರು ಭಯೋತ್ಪಾದನೆಗೆ ಬೆಂಬಲ ನೀಡಿದಂತೆ ಎಂದು ಅಮೆರಿಕದ ಸರ್ಕಾರ ಮತ್ತು ಅದರ ಬಾಲಬಡುಕ ಮಾಧ್ಯಮಗಳಾದ CNN, BBC ಇತ್ಯಾದಿ ಪ್ರಚಾರ ಮಾಡುತ್ತಿವೆ. ಆದರೆ ಜಗತ್ತಿನಾದ್ಯಂತ ಜನತೆ ಇದನ್ನು ತಿರಸ್ಕರಿಸಿದ್ದಾರೆ. ಈ ಯುದ್ಧ ಭಯೋತ್ಪಾದನೆ ಸಮಸ್ಯೆಯನ್ನು ಯಾವುದೇ ರೀತಿಯಲ್ಲಿ ಪರಿಹರಿಸುವುದಿಲ್ಲ ಮಾತ್ರವಲ್ಲ, ಅದನ್ನು ಉಲ್ಬಣಗೊಳಿಸಬಹುದು. ಭಯೋತ್ಪಾದನೆ ವಿರುದ್ಧ ಹೋರಾಟವನ್ನು ವಿಶ್ವಸಂಸ್ಥೆಯ ಅಂತರ್ರಾಷ್ಟ್ರೀಯ ಸಂಘಟನೆಗಳ ಮೂಲಕ ಜರುಗಿಸಬೇಕು. ಸೆಪ್ಟೆಂಬರ್ 11 ವಿಶ್ವವಾಣಿಜ್ಯ ಕೇಂದ್ರದ ಮೇಲೆ ಭೀಕರ ದಾಳಿಯಿಂದ ಉಂಟಾದ ಜನರ ಆಕ್ರೋಶವನ್ನು ತನ್ನ ಬೇಳೆ ಬೇಯಿಸಿಕೊಳ್ಳುವ ಅಮೆರಿಕದ ಪ್ರಯತ್ನ ವಿಫಲವಾಗುವ ಸೂಚನೆ ಕಾಣುತ್ತಿದೆ. ಭಯೋತ್ಪಾದನೆ ಮತ್ತು ಯುದ್ಧ ಎರಡರ ವಿರುದ್ಧ ತೀವ್ರ 'ವಿರೋಧ, ಪ್ರತಿಭಟನೆ ತೋರುವ ಧೋರಣೆ ಜಗತ್ತಿನಾದ್ಯಂತ ಕಂಡು ಬರುತ್ತಿದೆ.

ಅಮೆರಿಕ ಮತ್ತು ಯುರೋಪಿನ ಅಭಿವೃದ್ಧಿ ದೇಶಗಳಲ್ಲೂ ಯುದ್ಧ ಮತ್ತು ಭಯೋತ್ಪಾದನೆ ವಿರೋಧಿಸುವ ಭಾರಿ ಪ್ರದರ್ಶನಗಳು ನಡೆದಿವೆ. ಎಲ್ಲಾ ಅರಬ್ ಮತ್ತು ಮುಸ್ಲಿಂ ದೇಶಗಳಲ್ಲಿ 'ಭಯೋತ್ಪಾದನೆ ವಿರುದ್ಧ ಯುದ್ಧ' 'ಮುಸ್ಲಿಮರ ವಿರುದ್ಧ ಯುದ್ಧ' ಆಗಿ ಅಮೆರಿಕದಲ್ಲಿ ಹಾಗೂ ಇತರ ಪ್ರದೇಶಗಳಲ್ಲಿ ಆಗಿರುವುದರ ವಿರುದ್ಧ ಭಾರಿ ಪ್ರದರ್ಶನಗಳಾಗಿವೆ. ಪಾಕಿಸ್ತಾನದಲ್ಲೂ ಭಾರೀ ಪ್ರದರ್ಶನಗಳಾಗಿವೆ. ಬೇರೆ ರೀತಿಯಲ್ಲಿ ಅಮೆರಿಕ-ವಿರೋಧಿಯಲ್ಲದ ಅರಬ್ ಮತ್ತು ಮುಸ್ಲಿಮ್ ದೇಶಗಳ ಸರ್ಕಾರಗಳೂ ಅಫಘಾನ್ ಯುದ್ಧವನ್ನು ಇತರ ದೇಶಗಳಿಗೆ ವಿಸ್ತರಿಸುವ ಅಮೆರಿಕನ್ ಹೇಳಿಕೆಗಳನ್ನು ಖಂಡಿಸಿದ್ದಾರೆ. 'ಇಂಡೋನೇಶ್ಯಾ, ಬಾಂಗ್ಲಾದೇಶದಿಂದ ಹಿಡಿದು ಲಿಬ್ಯಾ, ಇರಾಕ್, ಸೂಡಾನಿನ ಎಲ್ಲಾ ದೇಶಗಳಲ್ಲಿ ಯುದ್ಧವಿರೋಧಿ ಪ್ರದರ್ಶನಗಳು ನಡೆದಿವೆ. ಇವುಗಳಲ್ಲಿ ಕೆಲವು 'ಇಸ್ಲಾಮಿಕ್ ಮೂಲಭೂತವಾದಿ' ಬೆಂಬಲಿಗರದ್ದು ನಿಜ. ಆದರೆ ಎಲ್ಲವೂ ಹಾಗಲ್ಲ. ಕೆಲವೊಮ್ಮೆ ಇಂತಹ ಸಂಘಟನೆಗಳು ಪ್ರತಿಭಟನೆ ಸಂಘಟಿಸಿದಾಗಲೂ ವ್ಯಕ್ತವಾಗಿರುವುದು ಜನತೆಯ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವನ್ನೆಲ್ಲಾ 'ಭಯೋತ್ಪಾದನೆ' ಎಂದು ಬಣ್ಣ ಹಚ್ಚುವ ಧೋರಣೆ ಮತ್ತು ಅಮೆರಿಕದ ಯುದ್ಧದ ವಿರುದ್ಧ. ಅಮೆರಿಕನ್ ಸರ್ಕಾರದ ಬಾಲಬಡುಕ ಮಾಧ್ಯಮಗಳು ಮಾತ್ರ ಅಮೆರಿಕ ವಿರೋಧಿಸುವವರೆಲ್ಲ 'ಭಯೋತ್ಪಾದನೆ' ಬೆಂಬಲಿಸುವ ಮೂಲಭೂತವಾದಿಗಳು ಎಂದು ಪ್ರಚಾರ ಮಾಡುತ್ತಿವೆ.

'ಭಯೋತ್ಪಾದನೆ (ಅದರ ಧಾರ್ಮಿಕ ಮೂಲಭೂತವಾದ ಮತ್ತು ಇತರ ಎಲ್ಲಾ ಅವತಾರಗಳನ್ನು) ಮತ್ತು ಯುದ್ಧ ಎರಡನ್ನು ವಿರೋಧಿಸುವ ಚಳುವಳಿಯನ್ನು ನಮ್ಮ ದೇಶದಲ್ಲೂ ಅಂತರ್ರಾಷ್ಟ್ರೀಯವಾಗಿ ರೂಪಿಸುವುದು ಎಲ್ಲಾ ಪ್ರಗತಿಪರರ ಜವಾಬ್ದಾರಿ. ಇಂತಹ ಪ್ರತಿಭಟನಾ ಚಳುವಳಿಗಳನ್ನು ಧಾರ್ಮಿಕ ಮೂಲಭೂತವಾದಿಗಳು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳದಂತೆ, ವಿಕೃತಿಗೊಳಿಸದಂತೆ ಜಾಗ್ರತೆವಹಿಸಬೇಕು. ದೆಹಲಿಯ ಇಮಾಮ ಬುಖಾರಿಯ 'ಕೋಮುವಾದಿ' ಹೇಳಿಕೆಗಳೂ ಈ ಸಂದರ್ಭದಲ್ಲಿ ಆತಂಕಕಾರಿ. ಭಯೋತ್ಪಾದನೆಗೆ ಕೋಮುವಾದಿ ಬಣ್ಣ ಹಚ್ಚುವ ಎಲ್ಲಾ ಪ್ರಯತ್ನಗಳ ಬಗ್ಗೆ ಈ ಚಳುವಳಿ ಎಚ್ಚರವಹಿಸಬೇಕು.



ಸೂತ್ರಧಾರಿ — ಪಾತ್ರಧಾರಿ

ಭಯೋತ್ಪಾದನೆ'ಗೆ ಕೋಮುವಾದಿ ಬಣ್ಣ

ಇಂಡಿಯಾದಲ್ಲೂ ಕೇಂದ್ರ ಸರ್ಕಾರ ಮತ್ತು ಸಂಘ ಪರಿವಾರ 'ಭಯೋತ್ಪಾದನೆ ವಿರುದ್ಧ ಯುದ್ಧ'ಕ್ಕೆ ಕೋಮುವಾದಿ ಬಣ್ಣ ಹಚ್ಚಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಉತ್ತರ ಪ್ರದೇಶದ ಚುನಾವಣೆಗಳಲ್ಲಿ 'ಭಯೋತ್ಪಾದನೆ ವಿರುದ್ಧ ಯುದ್ಧ' ಮುಖ್ಯ ವಿಷಯವಾಗಿರುತ್ತದೆ ಎಂಬ ಬಿಜೆಪಿ ಹೇಳಿಕೆ, ಮುಂಬರಲಿರುವ ಬಿಜೆಪಿ ಯುವಜನ ಹಾಗೂ ಪಕ್ಷದ ಮಹಾಧಿವೇಶನದಲ್ಲಿ ಇದೇ ಮುಖ್ಯ ವಿಷಯವಾಗಿರುವುದು - ಸಂಘ ಪರಿವಾರದ ಈ ಧೋರಣೆಗೆ ನಿದರ್ಶನಗಳು. ಒಂದು ಕಡೆ ವಾಜಪೇಯಿ, ಜಸ್ವಂತ್ ಸಿಂಗ್ 'ಭಯೋತ್ಪಾದೆ ವಿರುದ್ಧ ಹೋರಾಟ' ಮುಸ್ಲಿಮರ ವಿರುದ್ಧ ಅಲ್ಲ ಎಂದು ಹೇಳುತ್ತಿರುವುದು. ಇನ್ನೊಂದು ಕಡೆ ಸಂಘ ಪರಿವಾರದ ವಕ್ತಾರ 'ಎಲ್ಲಾ ಮುಸ್ಲಿಮರು ಜೇಹಾದಿಗಳು' ಆದರೆ ಎಲ್ಲಾ ಜೇಹಾದಿಗಳಲು ಮುಸ್ಲಿಮರುಎಂದು ಹೇಳಿಕೆ ನೀಡುವುದು ಸಂಘ ಪರಿವಾರದ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ.

ಇದಲ್ಲದೆ ಅಮೆರಿಕದ ಯುದ್ಧವನ್ನು ಪಾಕಿಸ್ತಾನದ ವಿರುದ್ಧ ತಿರುಗಿಸುವ ವಾಜಪೇಯಿ ಸರ್ಕಾರದ ಪ್ರಯತ್ನ ಎಷ್ಟು ಹಾಸ್ಯಾಸ್ಪದವೋ ಅಷ್ಟೇ ಆತಂಕಕಾರಿ ಸಹ. ಈ ಹಾಸ್ಯಾಸ್ಪದ, ಆತಂಕಕಾರಿ ಪ್ರಯತ್ನದಲ್ಲಿ ದೇಶದ ಆತ್ಮಗೌರವ, ಸ್ವತಂತ್ರ ವಿದೇಶ ನೀತಿಗಳನ್ನೆಲ್ಲಾ ಗಾಳಿಗೆ ತೂರಿಬಿಡಲಾಗುತ್ತಿದೆ. ಕಾಶ್ಮೀರದ ವಿಧಾನಸಭೆ ಮೇಲೆ ಆತ್ಮಾಹುತಿ ದಾಳಿಯ ಹಿನ್ನೆಲೆಯಲ್ಲಿ ಅದಕ್ಕೆ ಜವಾಬ್ದಾರ 'ಜೈಶ್-ಎ-ಮುಹಮ್ಮದ್' ಸಂಘಟನೆಯನ್ನು ನಿಷೇಧಿಸಬೇಕು. ಆರ್ಥಿಕ ದಿಗ್ಬಂಧನ ಹಾಕಬೇಕು ಎಂದು ಜಸ್ವಂತ್ ಸಿಂಗ್ ಜಗತ್ತೆಲ್ಲ ಪ್ರಯಾಣ ಮಾಡುವುದು ಸರಿಯಾದ ನೀತಿ ಅಲ್ಲ. ಕಾಶ್ಮೀರ ವಿವಾದದಲ್ಲಿ ಅಮೆರಿಕ ಮಧ್ಯಪ್ರವೇಶ ಮಾಡಲು ಆಹ್ವಾನವಿತ್ತಂತೆ ಎಂದು ಹಲವು ಸ್ವತಂತ್ರ ರಾಜಕೀಯ ವೀಕ್ಷಕರೂ ಅಭಿಪ್ರಾಯಪಟ್ಟಿದ್ದಾರೆ. ಪಾಕಿಸ್ತಾನದ 'ಭಯೋತ್ಪಾದನೆಯ ಚರಿತ್ರೆ' ಗೊತ್ತಿಲ್ಲದಿರುವಷ್ಟು ಅಮೆರಿಕನ್ ಸರ್ಕಾರ

ಅಮೆರಿಕಾ ತೋಡಿದ ಹೊಂಡಕ್ಕೆ ಭಾರತ ಬೀಳಬೇಕೆ?

ಮೂರ್ಖವಲ್ಲ. ಅವರು ಸ್ವಂತ ಹಿತಾಸಕ್ತಿಗೆ ಪಾಕಿಸ್ತಾನವನ್ನು ಅತ್ಯಂತ ನಿಕಟ ಸಹಚರನನ್ನಾಗಿಸಿಕೊಂಡಿದ್ದಾರೆ ಎಂಬ ಸತ್ಯ ನಮ್ಮ 'ಪಾಕಿಸ್ತಾನ-ವಿರೋಧ'ದಲ್ಲಿ ಕುರುಡಾಗಿರುವ ವಾಜಪೇಯಿ ಸರ್ಕಾರಕ್ಕೆ ಗೊತ್ತಾಗುತ್ತಿಲ್ಲ. ಕಾಶ್ಮೀರದಲ್ಲಿ ಭಯೋತ್ಪಾದನೆಯಲ್ಲಿ ಪಾಕಿಸ್ತಾನದಷ್ಟೇ ಅಮೆರಿಕದ ಪಾತ್ರ ಇದೆ ಎಂಬ ಸತ್ಯ ಹೇಳದೆ, ಆ ಬಗ್ಗೆ ಅಂತರ್ರಾಷ್ಟ್ರೀಯ ಪ್ರಚಾರ ಯಾವುದೇ ರೀತಿಯಲ್ಲಿ ಫಲಗೊಡುವುದಿಲ್ಲ. ಬದಲಾಗಿ ಅಂತರ್ರಾಷ್ಟ್ರೀಯ ಮಧ್ಯಪ್ರವೇಶಕ್ಕೆ ರಂಗ ಸಿದ್ಧತೆ ಮಾಡಿದಂತೆ. ಅಮೆರಿಕಕ್ಕೆ ವಾಯುನೆಲೆ, ನೌಕಾ ನೆಲೆಗಳನ್ನು ಒದಗಿಸಲು ಮುಂದಾಗಿ, ಅಮೆರಿಕ ಅದನ್ನು ಸ್ವೀಕರಿಸದೆ ಪಾಕಿಸ್ತಾನ ನೆಲೆಗಳನ್ನು ಬಳಸುವ ನಿರ್ಧಾರ ತೆಗೆದುಕೊಂಡು 'ಮುಖಭಂಗ' ವಾದ ಮೇಲೂ ವಾಜಪೇಯಿ ಸರ್ಕಾರ ಅಮೆರಿಕನ್ನರನ್ನು 'ಸಂಪ್ರೀತಗೊಳಿಸುವ' ತಮ್ಮ ಪ್ರಯತ್ನ ಬಿಟ್ಟಿಲ್ಲ. ಪಾಕಿಸ್ತಾನಕ್ಕಿಂತ 'ಭಾರತ ಒಳ್ಳೆಯ ಜೂನಿಯರ್ ಪಾರ್ಟನರ್' ಎಂದು ಅಮೆರಿಕವನ್ನು ಒಪ್ಪಿಸಲು ಈಗಲೂ ಹಾಸ್ಯಾಸ್ಪದ ಪ್ರಯತ್ನ ನಡೆಸುತ್ತಿದೆ. ಇದಕ್ಕಾಗಿ ಈಗಾಗಲೇ ದೇಶದ ಆತ್ಮಗೌರವ, ಸ್ವತಂತ್ರ ವಿದೇಶ ನೀತಿಗಳನ್ನು ಪಾತಾಳಕ್ಕೆ ತಳ್ಳಿದೆ.

ಇತ್ತೀಚಿಗಿನ ಎರಡು ಉದಾಹರಣೆಗಳು ಈ ಸಂದರ್ಭದಲ್ಲಿ ಅತ್ಯಂತ ಆತಂಕಕಾರಿ. ಅಮೆರಿಕಾದಲ್ಲಿ ಅಲ್ಲಿನ ಪೋಲೀಸರು ವಲಸೆ ಕಾನೂನು ಉಲ್ಲಂಘನೆಗೆ ಬಂಧಿಸಿದ ನಮ್ಮ ಹೈದರಾಬಾದಿನ ಇಬ್ಬರು ನಿವಾಸಿಗಳ ತನಿಖೆಗೆ ಸಂಬಂಧಿಸಿದಂತೆ ಅಮೆರಿಕದ ಆಂತರಿಕ ಗೂಢಾಚಾರ ಸಂಸ್ಥೆ ಎಫ್‌ಬಿಐ ನ್ನು ಹೈದರಾಬಾದಿನ ನಿವಾಸಿಗಳ ಕುಟುಂಬಗಳನ್ನು ನೇರ ವಿಚಾರಣೆಗೆ ಅನುಮತಿ ಕೊಡಲಾಯಿತು. ಸ್ಥಳೀಯ ಪೋಲೀಸರಿಗಾಗಲಿ ರಾಜ್ಯ ಸರ್ಕಾರಕ್ಕಾಗಲೀ ಈ ವಿಚಾರಣೆಯಲ್ಲಿ ಯಾವುದೇ ಪಾತ್ರವಿರಲಿಲ್ಲ. ಮಾತ್ರವಲ್ಲ ಅವರಿಗೆ ಅದು ಗೊತ್ತಿರಲಿಲ್ಲ. ನಮ್ಮ ಆಂತರಿಕ ಗೂಢಾಚಾರ ಸಂಸ್ಥೆ ಐಬಿ ಸಹಾಯ ದಿಂದ ಎಫ್‌ಬಿಐ ನೇರವಾಗಿ ಈ ತನಿಖೆ ನಡೆಸಿತು ಎಂಬ ಬಗ್ಗೆ ವರದಿ ಯಾರಲ್ಲೂ ಯಾವುದೇ ಆತಂಕ ಉಂಟು ಮಾಡಲಿಲ್ಲ. ಸಿಪಿಐ(ಎಂ) ಆಂಧ್ರ ರಾಜ್ಯ ಸಮಿತಿ ಮಾತ್ರ ಇದನ್ನು ವಿರೋಧಿ ಸಿತು. **ಎಫ್‌ಬಿಐ ಅಧಿಕಾರಿಗಳು ನೇರವಾಗಿ ನಮ್ಮ ದೇಶದ ನಾಗರಿಕರ ವಿಚಾರಣೆ ನಡೆಸುವು ದೆಂದರೆ ಇದು ನಮ್ಮ ಸಾರ್ವ ಭೌಮತೆ, ಸಂವಿಧಾನ ಎರಡನ್ನೂ ಉಲ್ಲಂಘಿ ಸಿದಂತೆ.** ಇಂತಹ ತನಿಖೆಯನ್ನು ರಾಜ್ಯ ಸರ್ಕಾರ, ಸ್ಥಳೀಯ ಪೋಲಿಸ್ ನಡೆಸಬೇಕು. ಎಫ್‌ಬಿಐ ಏನಿದ್ದರೂ ಇಂತಹ ತನಿಖೆ ಅವಶ್ಯಕತೆಗೆ ಕೇಂದ್ರ ಸರ್ಕಾರದ ಗೃಹಖಾತೆಯ ಮೂಲಕ ಮನವಿ ಸಲ್ಲಿಸಬೇಕು ಅಷ್ಟೆ. ಇನ್ನೊಂದು ಘಟನೆ - **ಸೆಪ್ಟೆಂಬರ್ 11 ರ ಭಯೋತ್ಪಾದಕ ಕೃತ್ಯದ ಒಂದು ವಾರದ ಒಳಗೆ ಭಾರತದಲ್ಲಿ ಅಮೆರಿಕದ ರಾಯಭಾರಿ ನಮ್ಮ ಸರ್ಕಾರದ ಮುಖ್ಯಸ್ಥರೊಡನೆ ನೇರ ಮಾತುಕತೆ ನಡೆಸಿರುವುದು ಇನ್ನೊಂದು ಆತಂಕಕಾರಿ ಘಟನೆ.** ಇದೂ ನಮ್ಮ ಸಂವಿಧಾನ, ಸಾರ್ವ ಭೌಮತೆಯ ಉಲ್ಲಂಘನೆಯೆ. ಅವರು ಅಮೆರಿಕದ ಅಫಘಾನ್ ಯುದ್ಧಕ್ಕೆ ಯಾವ ರೀತಿಯ ಸವಲತ್ತುಗಳನ್ನು ನಮ್ಮ ಸೈನ್ಯದ ವಿಭಾಗಗಳು ಕೊಡಬಹುದು ಎಂಬ ಬಗ್ಗೆ ಚರ್ಚಿಸಿದರಂತೆ. ಇಂತಹ ನಿರ್ಧಾರವನ್ನು ಕೇಂದ್ರದ ಪೂರ್ಣ ಮಂತ್ರಿ ಮಂಡಲ ಮಾತ್ರ ತೆಗೆದುಕೊಳ್ಳಬಹುದು. ಇಂತಹ ಕೋರಿಕೆಯನ್ನು ರಾಯಭಾರಿ ವಿದೇಶಾಂಗ ಖಾತೆಗೆ ಸಲ್ಲಿಸಬೇಕು. ಇಂತಹ ಸಂವಿಧಾನ, ಸಾರ್ವ ಭೌಮತ್ವದ ಉಲ್ಲಂಘನೆ ವಾಜಪೇಯಿ ಸರ್ಕಾರದ ನೀತಿಯಾಗಿಬಿಟ್ಟಿದೆ. ಅಮೆರಿಕನ್ನರನ್ನು ಹೇಗಾದರೂ 'ಸಂಪ್ರೀತ ಗೊಳಿಸುವುದು' ಈ ಸರ್ಕಾರದ ಒಂದಂಶದ ಕಾರ್ಯಕ್ರಮ. ○

ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ಕೃಷಿಕೂಲಿಕಾರರು

ಪುಟ 7 ರಿಂದ

ಪ್ರಧಾನ ಕಾರ್ಯದರ್ಶಿ **ಚಂದ್ರಪ್ಪ ಹೊಸ್ಕೆರಾ** ಅವರು ಶಿಕ್ಷಣವನ್ನು ಹೆಚ್ಚೆಚ್ಚು ದುಬಾರಿಗೊಳಿಸುತ್ತಾ ಹೋಗುವ ಮೂಲಕ ಬಡ ಕೃಷಿಕೂಲಿಕಾರರ ಮಕ್ಕಳನ್ನು ಶಿಕ್ಷಣದಿಂದ ವ್ಯವಸ್ಥಿತವಾಗಿ ಹೊರಗಿಡಲಾಗುತ್ತದೆ ಎಂದರು. ಕರಿಯಪ್ಪ ಅಚ್ಚೊಳ್ಳಿ ಘೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಎರಡನೇ ಗೋಷ್ಠಿಯಲ್ಲಿ **ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ಮಹಿಳೆ** ಎಂಬ ವಿಷಯವನ್ನು ಚರ್ಚಿಸಿದ ಗುಲ್ಬರ್ಗಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ **ಡಾ|| ಛಾಯಾ ದೇವಗಾಂವಕರ್** ಅವರು ಹೆಚ್ಚುತ್ತಿರುವ ಬಡತನದಿಂದಾಗಿ ಮಹಿಳೆಯರು ಕೂಲಿಕೆಲಸಕ್ಕೆ ಹೋಗಲು ಹೆಚ್ಚೆಚ್ಚು ನಿರ್ಬಂಧಿತರಾಗುತ್ತಿದ್ದಾರೆ ಎಂದರಲ್ಲದೆ **ಜಾಗತೀಕರಣದಿಂದ ಬಡತನದ ಸ್ತ್ರೀಕರಣವಾಗುತ್ತಿದೆ** ಎಂದು ಆತಂಕವ್ಯಕ್ತಡಿಸಿದರು.

ಉತ್ತರ ಕರ್ನಾಟಕದ ಮಹಿಳಾ ಚಳುವಳಿ ಮತ್ತು ಕೂಲಿಕಾರ ಮಹಿಳೆಯರು ಎಂಬ ವಿಷಯವನ್ನು ಎತ್ತಿಕೊಂಡು ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ **ಕೆ.ನೀಲಾ** ಅವರು ಹೈದ್ರಾಬಾದ್ ಕರ್ನಾಟಕದ ಕೂಲಿಕಾರ ಮಹಿಳೆಯರು 12ನೇ ಶತಮಾನದಷ್ಟು ಹಿಂದೆಯೇ ಶೋಷಣೆಯ ವಿರುದ್ಧ ದನಿ ಎತ್ತಿದ್ದಾರೆ ಎಂದು ಅನುಭವ ಮಂಟಪದ ಕಾರ್ಯ ಜೀವಿಗಳ ಚಳುವಳಿಯನ್ನು ನೆನಪಿಸಿದರು. ಅಲ್ಲದೆ ಅಭಿವೃದ್ಧಿಗಾಗಿ ನಡೆಯಬೇಕಾದ ಚಳುವಳಿಯಲ್ಲಿ ನೂರಕ್ಕೆ ಸುಮಾರು ಐವತ್ತರಷ್ಟಿರುವ ಕೂಲಿಕಾರ ಮಹಿಳೆಯರು ಅದರಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ತುಂಬಾ ಮುಖ್ಯವಾಗಿದೆ ಎಂದರು.

ಉತ್ತರ ಕರ್ನಾಟಕದಲ್ಲಿ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ಎಂಬ ವಿಷಯವನ್ನು ಪ್ರಸ್ತಾಪಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ **ಯು.ಬಸವರಾಜ** ಅವರು ಹೈದ್ರಾಬಾದ್ ಕರ್ನಾಟಕದಲ್ಲಿ ಇನ್ನೂ ಜೀವಂತವಾಗಿರುವ ಪಾಳೆಗಾರಿ ಭೂಸಂಬಂಧಗಳಿಂದಾಗಿ ಅಮಾನುಷ ಜಾರಿ ದಮನ ಮತ್ತು ಅಸ್ಪೃಶ್ಯತೆ ಇನ್ನುಳಿದ ಪ್ರದೇಶಗಳಿಗಿಂತಲೂ ಇಲ್ಲಿ ಭೀಕರವಾಗಿದೆ ಎಂದು ಇತ್ತೀಚಿನ ಅನೇಕ ಘಟನೆಗಳನ್ನು ಉಲ್ಲೇಖಿಸಿ ಹೇಳಿದರು. ಜೀವ ವಿಮಾ ನಿಗಮದ ನೌಕರರ ಸಂಘದ ವಿಭಾಗ ಕಾರ್ಯದರ್ಶಿ **ಜಿ.ಸುರೇಶ್ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.**

ಎರಡು ಪ್ರಮುಖ ನಿರ್ಣಯಗಳನ್ನು ಅಂಗೀಕರಿಸುವುದರೊಂದಿಗೆ ವಿಚಾರಸಂಕಿರಣ ಹಾಗೂ ಸಮಾವೇಶವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಅಭಿವೃದ್ಧಿಯ ಆಗ್ರಹಗಳು

ಕೃಷಿಕೂಲಿಕಾರರ ಸಮುದಾಯವನ್ನು ಉತ್ತರ ಕರ್ನಾಟಕದ ಅಭಿವೃದ್ಧಿಯ ಆಧಾರಘಟಕವೆಂದು ಪರಿಗಣಿಸಲು ಆಗ್ರಹ

ಕರ್ನಾಟಕದಲ್ಲಿ ಉತ್ತರ ಕರ್ನಾಟಕದ ಹಿಂದುಳಿದಿದೆ, ಹೈದರಾಬಾದ್ ಕರ್ನಾಟಕ ಬಹಳ ಹಿಂದುಳಿದಿದೆ ಎಂಬ ಬಗ್ಗೆ ಚರ್ಚೆ ನಡೆಯುತ್ತಿರುವುದು, ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಕೆಲವು ಕ್ರಮಗಳು ಆರಂಭವಾಗಿರುವುದು ಸ್ವಾಗತಾರ್ಹ.

ಅಧಿಕ ಸಂಖ್ಯೆಯಲ್ಲಿರುವ ಉತ್ತರ ಕರ್ನಾಟಕ ಕೃಷಿಕೂಲಿಕಾರರಿಗೆ ಉದ್ಯೋಗದ ಸೃಷ್ಟಿ ಹಾಗೂ ಹೆಚ್ಚು ಆದಾಯ ದೊರಕುವಂತಾದಾಗ ಮಾತ್ರ ಇಲ್ಲಿ ಸಾಕ್ಷರತೆ, ಶಿಕ್ಷಣ, ಆರೋಗ್ಯ ಮೊದಲಾದವುಗಳ ಅಭಿವೃದ್ಧಿ ಸಾಧ್ಯ. ಆದ್ದರಿಂದ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಯನ್ನು ಸಾಧಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕೆಂದು 'ಉತ್ತರ ಕರ್ನಾಟಕ ಅಭಿವೃದ್ಧಿ ಮತ್ತು ಕೂಲಿಕಾರರು ' ಸಮಾವೇಶವು ಒತ್ತಾಯಿಸಿತು.

1. ಅಪಾರ ಸಂಖ್ಯೆಯಲ್ಲಿ ಕೃಷಿ ಕೂಲಿಕಾರರು ಇಲ್ಲಿ ಸೃಷ್ಟಿಯಾಗಿರುವುದಕ್ಕೆ ಕಾರಣವಾದ ವಿಕೃತ ಭೂಸುಧಾರಣೆಗೆ ಪ್ರತಿಯಾಗಿ ನೈಜ ಮತ್ತು ತೀವ್ರ ಭೂಸುಧಾರಣೆಯನ್ನು ಜಾರಿಗೆ ತರಬೇಕು.

i. ಉತ್ತರ ಕರ್ನಾಟಕದಲ್ಲಿ ಲಭ್ಯವಿರುವ ಕೃಷಿಯೋಗ್ಯ ಸರ್ಕಾರಿ ಭೂಮಿಯನ್ನು ಭೂಹೀನ ಕೃಷಿಕೂಲಿಕಾರರಿಗೆ ಹಂಚಬೇಕು.

ii. ಭೂಮಿತಿ ಕಾಯ್ದೆಯನ್ನು ಪ್ರಾಮಾಣಿಕವಾಗಿ, ಕಟ್ಟುನಿಟ್ಟಾಗಿ ಜಾರಿಗೆ ತರಬೇಕು

iii. ಗೇಣಿಪದ್ಧತಿ, ಲೀಸ್ ಪದ್ಧತಿಗಳನ್ನು ಕಾನೂನು ಚೌಕಟ್ಟಿನಲ್ಲಿ ತಂದು ಗೇಣಿದಾರರ ಹಿತಗಳನ್ನು ರಕ್ಷಿಸಬೇಕು.

2. ಉತ್ತರಕರ್ನಾಟಕದ ಜಲಸಂಪನ್ಮೂಲಗಳನ್ನು ಪೂರ್ಣವಾಗಿ ಉಪಯೋಗಿಸಿಕೊಂಡು ನೀರಾವರಿಯನ್ನು ವಿಸ್ತಾರಗೊಳಿಸಬೇಕು.

3. i. ಉತ್ತರ ಕರ್ನಾಟಕದಲ್ಲಿ ಮೂಲಭೂತ ಸೌಕರ್ಯ ಹಾಗೂ ಮಾನವಸಂಪನ್ಮೂಲಗಳ ಅಭಿವೃದ್ಧಿ ಸಾಧಿಸಲು ರಸ್ತೆ, ರೈಲು, ಸೇತುವೆ, ಶಾಲೆಕಾಲೇಜು, ಆಸ್ಪತ್ರೆ ಮೊದಲಾದವುಗಳ ನಿರ್ಮಾಣ ಕಾರ್ಯವನ್ನು ಕೈಗೊಂಡು ಇಲ್ಲಿಯ ಕೃಷಿಕೂಲಿಕಾರರಿಗೆ ಉದ್ಯೋಗವನ್ನು ದೊರಕಿಸಬೇಕು. ಉದ್ಯೋಗಳನ್ನು ಕಿತ್ತುಕೊಳ್ಳುವ ಬೃಹತ್ ಯಂತ್ರಗಳ ಬಳಕೆಯನ್ನು ನಿಷೇಧಿಸಬೇಕು.

ii. ಈ ಪ್ರದೇಶದ ಕೈಗಾರಿಕರಣಕ್ಕೆ, ಉದ್ಯೋಗಗಳನ್ನು ಸೃಷ್ಟಿಸುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ, ಇಲ್ಲಿಯ ಕುಶಲಕರ್ಮಿಗಳ ಕೌಶಲ್ಯಗಳ ವೃದ್ಧಿಗೆ ವ್ಯಾಪಕ ಯೋಜನೆಗಳನ್ನು ರೂಪಿಸಿ ಜಾರಿಗೆ ತರಬೇಕು.

4. ಕೃಷಿಕೂಲಿಕಾರರಿಗೆ ವರ್ಷದಲ್ಲಿ ಕನಿಷ್ಟ 250 ದಿನಗಳ ಕೆಲಸ ದೊರಕಿಸಬೇಕು. ಕನಿಷ್ಟ ಕೂಲಿಯನ್ನು ಖಾತರಿಗೊಳಿಸುವ ಮೂಲಕ ಅವರ ಜೀವನಮಟ್ಟವನ್ನು ಉತ್ತಮಪಡಿಸಬೇಕು. ಈ ಮೂಲಕ ಕೃಷಿಕೂಲಿಕಾರರ ಅಸಹಾಯಕ ವಲಸೆಯನ್ನು ತಡೆಗಟ್ಟಬೇಕು. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಬರುವ ಕೃಷಿಕೂಲಿಕಾರರ ಹಿತರಕ್ಷಣೆಗೆ ಸಮರ್ಪಕ ವ್ಯವಸ್ಥೆ ಮಾಡಬೇಕು. ವಲಸೆ ಕಾಯ್ದೆ (Migration Act) ಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.

5. ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಯಲ್ಲಿ ಕೂಲಿಕಾರರಿಗೆ ಒದಗಿಸಲು ಅಂತ್ಯೋದಯ ಅನ್ನ ಯೋಜನೆಯಂತಹ ಕ್ರಮಗಳನ್ನು ಎಲ್ಲ ಕೂಲಿಕಾರ ಕುಟುಂಬಗಳಿಗೆ ವಿಸ್ತರಿಸಬೇಕು. ಕೂಲಿಗಾಗಿ ಕಾಳು ಯೋಜನೆಯನ್ನು ಎಲ್ಲ ಗ್ರಾಮಗಳಿಗೆ ವಿಸ್ತರಿಸಬೇಕು ಮತ್ತು ವರ್ಷವಿಡೀ ಜಾರಿಯಲ್ಲಿ ಇರಬೇಕು.

6. ಹೆಚ್ಚೆಚ್ಚು ಪ್ರಾಥಮಿಕ ಶಾಲೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಬೇಕು. ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ, ಸಮವಸ್ತ್ರ, ಪುಸ್ತಕಗಳನ್ನು ಉಚಿತವಾಗಿ ಒದಗಿಸಬೇಕು.

7. ಎಲ್ಲ ಕೃಷಿ ಕೂಲಿಕಾರರಿಗೆ ಆರೋಗ್ಯ ಚೀಟಿಗಳನ್ನು ನೀಡಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಅವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಹಾಗೂ ಅವಶ್ಯಕವಾದ ಎಲ್ಲಾ ಔಷಧಿಗಳನ್ನು ಉಚಿತವಾಗಿ ನೀಡಬೇಕು.

8. ಪ್ರತಿಯೊಂದು ಕೃಷಿಕೂಲಿಕಾರರ ಕುಟುಂಬಕ್ಕೆ ವಾಸಕ್ಕೆ ಮನೆ ಹಾಗೂ ಮನೆಯ ಸುತ್ತಲು ಹಿತ್ತಲು ಸಹಿತವಾದ ನಿವೇಶನವನ್ನು ಒದಗಿಸಲು ಬೃಹತ್ ಯೋಜನೆಯನ್ನು ರೂಪಿಸಬೇಕು.

9. ಮಹಿಳಾ ಕೂಲಿಕಾರರಿಗೆ ಸಮಾನವೇತನ ನೀಡುವುದನ್ನು ಖಚಿತಪಡಿಸಬೇಕು. ಆಸ್ತಿ ಮತ್ತು ಮನೆಯ ಒಡೆತನದ ವಿಷಯದಲ್ಲಿ ಪತಿ-ಪತ್ನಿಯರಿಗೆ ಜಂಟಿ ಪಟ್ಟಾ ನೀಡಬೇಕು. ಮಹಿಳಾ ಸಮಾನತೆಗಾಗಿ ವ್ಯಾಪಕ ಪ್ರಚಾರಾಂದೋಲನ ನಡೆಸಬೇಕು. ಕೃಷಿ ಕೂಲಿಕಾರ ಸಂಘದೊಳಗೂ ಸಮಾಜದಲ್ಲಿ ಮಹಿಳಾ ಸಮಾನತೆಗಾಗಿ ಶಿಕ್ಷಣ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಬೇಕು. ಅಸ್ಪೃಶ್ಯತೆ ವಿರೋಧಿ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಭೂಮಿ, ಉದ್ಯೋಗ ಮೊದಲಾದವುಗಳನ್ನು ನೀಡುವಾಗ ದಲಿತ ಕೂಲಿಕಾರರಿಗೆ ಆದ್ಯತೆ ನೀಡಬೇಕು.

ಮಂಡನೆ: ಜಿ.ಎನ್.ನಾಗರಾಜ

ಅನುಮೋದನೆ: ಚಂದ್ರಪ್ಪ ಹೊಸ್ಕೇರಾ.

●●●

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ನಿರ್ಮಾಣದ ಹೋರಾಟವನ್ನು ಕೈಬಿಡಲು ಆಗ್ರಹ

ರಾಜ್ಯಮಟ್ಟದ ಈ ಸಮಾವೇಶವು ಉತ್ತರ ಕರ್ನಾಟಕಕ್ಕೆ ಅಭಿವೃದ್ಧಿ ವಿಷಯದಲ್ಲಿ ಅನ್ಯಾಯವಾಗಿದೆ ಎಂಬ ವಾದವನ್ನು ಮುಂದಿಟ್ಟು ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡಬೇಕು ಎಂದು ಒತ್ತಾಯಿಸಿ ನೀಡಲಾಗುತ್ತಿರುವ ಹೋರಾಟದ ಕರೆಯನ್ನು ಕೈಬಿಡಬೇಕೆಂದು ಆಗ್ರಹಿಸಿತು.

ಸುದೀರ್ಘವಾದ ಜನ ಚಳುವಳಿಗಳ ನಂತರವಷ್ಟೇ ನಮ್ಮ ದೇಶದಲ್ಲಿ ಭಾಷಾವಾರು ರಾಜ್ಯಗಳ ರಚನೆಯಾಗಿತ್ತು. ಕರ್ನಾಟಕ ರಾಜ್ಯ ನಿರ್ಮಾಣದ ಹಿಂದೆಯೂ ಅಪಾರ ತ್ಯಾಗ ಬಲಿದಾನಗಳ ಹೋರಾಟದ ಚರಿತ್ರೆಯಿದೆ. ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಆಡಳಿತವು ಜನರ ಭಾಷೆಯಲ್ಲೇ ಆಗಬೇಕು ಎಂಬುದೇ ಭಾಷಾವಾರು ರಾಜ್ಯ ನಿರ್ಮಾಣದ ಹಿಂದಿರುವ ಜನಪರ ಆಶಯವಾಗಿದೆ. ಈ ಉದ್ದೇಶಕ್ಕಾಗಿ ನಿರ್ಮಾಣವಾದ ಕರ್ನಾಟಕ ರಾಜ್ಯವನ್ನು ಒಡೆದು ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡಬೇಕೆನ್ನುವ ಘೋಷಣೆಯು ಇಡೀ ಕನ್ನಡ ಜನತೆಯ ಹಾಗೂ ವಿಶೇಷವಾಗಿ ಉತ್ತರ ಕರ್ನಾಟಕದ ಜನತೆಯ ಹಿತಕ್ಕೆ ವಿರುದ್ಧವಾಗಿದೆ.

ಉತ್ತರ ಕರ್ನಾಟಕದ ಜನತೆಗೆ ಅಭಿವೃದ್ಧಿ ವಿಷಯದಲ್ಲಿ ಅನ್ಯಾಯವಾಗಿದೆ ಎಂಬ ವಾದದಲ್ಲಿ ನಿಜಾಂಶವಿದೆ. ಆದರೆ ಉತ್ತರ ಕರ್ನಾಟಕಕ್ಕೆ ದಕ್ಷಿಣ ಕರ್ನಾಟಕದಿಂದ ಅನ್ಯಾಯವಾಗಿದೆ ಎಂಬಂತೆ ಪ್ರತ್ಯೇಕ ರಾಜ್ಯ ರಚನೆಗೆ ಹೊರಡುವುದು ಸರಿಯಾದ ಕ್ರಮವಲ್ಲ. **ಇಡೀ ಕರ್ನಾಟಕದ ಒಟ್ಟು ಜನಸಮುದಾಯದ ಪ್ರಜ್ಞಾಪೂರ್ವಕವಾದ ಬೆಂಬಲ ಹಾಗೂ ಸಂಪನ್ಮೂಲಗಳ ಸಹಾಯದಿಂದ ಮಾತ್ರ ಉತ್ತರ ಕರ್ನಾಟಕದ, ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿ ಸಾಧ್ಯ.** ಇಂತಹ ಸಂದರ್ಭದಲ್ಲಿ ಪ್ರತ್ಯೇಕತೆಯ ಬೇಡಿಕೆ ಈ ಪ್ರದೇಶದ ಆಳುವ ವರ್ಗಗಳ ರಾಜಕಾರಣಿಗಳ ಅಧಿಕಾರದ ಆಸೆಯನ್ನು ಪ್ರತಿಬಿಂಬಿಸುತ್ತದೆಯಷ್ಟೇ ಹೊರತು ದುಡಿಯುವ ಜನತೆಯ ಹಿತಗಳನ್ನಲ್ಲ.

ಪ್ರತ್ಯೇಕ ರಾಜ್ಯ ನಿರ್ಮಾಣದಿಂದ ದುಡಿಯುವ ಜನಗಳ ಅಭಿವೃದ್ಧಿ ಸಾಧ್ಯ ಎಂದು ಹೇಳಲು ಬರುವುದಿಲ್ಲ. ಈ ಪ್ರದೇಶದ ಕೂಲಿಕಾರರ, ಬಡ ರೈತರ ಆದಾಯ ಹೆಚ್ಚಾಗಿ ಅವರ ಜೀವನ ಮಟ್ಟ ಉತ್ತಮಗೊಂಡಾಗ ಮಾತ್ರ ಪ್ರಾದೇಶಿಕ ಹಿಂದುಳಿಯುವಿಕೆ ತೊಡಗಲು ಸಾಧ್ಯ. ಈ ಪ್ರದೇಶದಲ್ಲಿ ಇನ್ನೂ ಜೀವಂತವಾಗಿರುವ ಪ್ರತಿಗಾಮಿ ಭೂಮಾಲಕ ಪದ್ಧತಿಯ ವಿರುದ್ಧ ಹಾಗೂ ಪ್ರಗತಿಪರ ಭೂಸುಧಾರಣೆಗಳ ಜಾರಿಗಾಗಿ ಇಡೀ ಕರ್ನಾಟಕದ ಜನತೆ ಹೋರಾಟ ಮಾಡದೆ ಉತ್ತರ ಕರ್ನಾಟಕದ ಹಿಂದುಳಿಯುವಿಕೆ ಯನ್ನು ಹೋಗಲಾಡಿಸಲು ಬರಲಾರದು. ಇಂತಹ ಹೋರಾಟಕ್ಕೆ ಇಡೀ ರಾಜ್ಯದ ದುಡಿಯುವ ಜನಗಳ ಐಕ್ಯತೆ ಬಹಳ ಮುಖ್ಯವಾಗುತ್ತದೆ. ಇಂತಹ ಹೋರಾಟದಿಂದ ದುಡಿಯುವ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಪ್ರತ್ಯೇಕತವಾದಿ ಚಳುವಳಿಯನ್ನು ತಿರಸ್ಕರಿಸಬೇಕೆಂದು ಸಮಾವೇಶವು ದುಡಿಯುವ ಜನಗಳಿಗೆ ಮತ್ತು ಮುಖ್ಯವಾಗಿ ಕೃಷಿ ಕೂಲಿಕಾರರಿಗೆ ಕರೆ ನೀಡುತ್ತದೆ.

ಮಂಡನೆ: ನಿತ್ಯಾನಂದ ಸ್ವಾಮಿ

ಅನುಮೋದನೆ: ಬಾಲಪ್ಪ

ಕೃಷ್ಣ ಸರ್ಕಾರಕ್ಕೀಗ ಎರಡು ವರ್ಷ

ಪುಟ 3 ರಿಂದ

ಪಾಳೇಕರ, ಗ್ರಾಮೀಣ ಸ್ಥಾಪಿತ ಹಿತಾಸಕ್ತಿ-ಜಾತಿವಾದಿಗಳ ಹಿತ ಕಾಯುವ ದಿಕ್ಕಿನಲ್ಲಿರುವವು.

ಇನ್ನು ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ಮತ್ತೆ ತಮ್ಮ ದ್ವೇಷದ ಆಟವನ್ನು ಬಾಬಾ ಬುಡನ್‌ಗಿರಿ, ಹುಬ್ಬಳ್ಳಿ, ಸುರತ್ಕಲ್, ಅಕ್ಕಿ ಆಲೂರು ಮುಂತಾದೆಡೆ ಹರಿಯಬಿಟ್ಟ ಕೋಮುದಳ್ಳುರಿ ಹಬ್ಬಿಸುವಾಗ ಕೃಷ್ಣರ ಸರ್ಕಾರ ದೃಢವಾಗಿ ಅವುಗಳನ್ನು ಎದುರಿಸಲಿಲ್ಲ. ಆರ್‌ಎಸ್ ಎಸ್, ವಿಹೆಚ್‌ಪಿ, ಬಿಜೆಪಿ ಬಜರಂಗದಳಗಳ ಸ್ಪಷ್ಟ ಭಾಗಿತ್ವ ಕಂಡರೂ ಹೆಸರಿಸಲಿಲ್ಲ. ಬಾಬಾ ಬುಡನ್‌ಗಿರಿಯಲ್ಲಂತೂ ಈ ಸಂಘ ಪರಿವಾರದ ಆಟಾಟೋಪಗಳು ಇನ್ನೂ ಗರಿಗೆದರುವಂತಾಗಿದೆ. ಈಗಲೂ ಸೂಕ್ತವಾಗಿ ಕಾರ್ಯ್ಯವೆಸಗಲು ಸಾಧ್ಯವಿದೆ.

ಕೃಷ್ಣರವರು ವಿರೋಧ ಪಕ್ಷಗಳ ಸಭೆಗಳನ್ನು ಕರೆದು ಆಗಾಗ ಸಮಾಲೋಚಿಸುವುದನ್ನು ಮಾಡಿದ್ದಾರೆ. ಆದರೆ ಇವು ಕೇವಲ ಕಾವೇರಿ-ಕೃಷ್ಣ ನದಿ ನೀರಿನ ವಿವಾದಕ್ಕೆ, ಡಾ. ರಾಜ್ ಅಪಹರಣ ದಂತಹ ವಿಷಯಗಳಿಗೆ ಮಾತ್ರ ಸೀಮಿತ. ಮುಖ್ಯವಾಗಿ ರಾಜ್ಯದ ಕೈಗಾರಿಕಾ ನೀತಿ ರೂಪಿಸುವಾಗ ಆಗಲೀ, ಶಿಕ್ಷಣ-ಆರೋಗ್ಯ, ಕೃಷಿ ಮುಂತಾದ ಮೂಲಭೂತ ನೀತಿಗಳನ್ನು ಅಂಗೀಕರಿಸುವ ಮೊದಲು ವಿರೋಧ ಪಕ್ಷಗಳೊಂದಿಗೆ ಸಮಾಲೋಚಿಸಿಯೇ ಇಲ್ಲ.

ಕಾಂಗ್ರೆಸ್‌ಗೆ ಜನ ಬೆಂಬಲಿಸಿದ್ದೇಕೆ?

ಆದರೆ ಇಷ್ಟೆಲ್ಲಾ ಇರುವಾಗಲೂ ಈ ಎರಡು ವರುಷಗಳಲ್ಲಿ ಜನತೆ ಮತ್ತೆ ಕಾಂಗ್ರೆಸ್ಸನ್ನು ಪಂಚಾಯತ್ - ಪುರಸಭೆಗಳಂತಹ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಹುಮತದಿಂದ, ಕೆಲವೆಡೆ ದೈತ್ಯ ಬಹುಮತದಿಂದ ಆರಿಸಿದ್ದಾರೆ. ಆದರೆ ಇತ್ತೀಚೆಗೆ ಆಂಧ್ರದಲ್ಲಿ ಪಂಚಾಯತ್ ಚುನಾವಣೆಗಳಲ್ಲಿ ನಾಯ್ಡುವಿನ ತೆಲುಗುದೇಶಂ ಸೋತು ಗಂಭೀರವಾಗಿ ಮುಖಭಂಗ ಅನುಭವಿಸಿದೆ. ಆದರೆ ಇಲ್ಯಾಕೆ ಇಲ್ಲ ಎಂಬ ಪ್ರಶ್ನೆ ಏಳಬಹುದು. ಒಂದಂತೂ ನಿಜ. ಆಂಧ್ರದಲ್ಲಿ ಚಂದ್ರಬಾಬು ನಾಯ್ಡು ಸರ್ಕಾರ ವಿಶ್ವಬ್ಯಾಂಕ್ ನಿರ್ದೇಶನ, ನೀತಿಗಳನ್ನು, CEO ಮಾದರಿಯನ್ನು ನೇರವಾಗಿ, ಆಕ್ರಮಣಕಾರಕವಾಗಿ ಜಾರಿಗೊಳಿಸಲು ಮುಂದಾಗಿದೆ. ಪ್ರತಿಭಟನೆಗಳೂ ಹೆಚ್ಚಿವೆ. (ವಿದ್ಯುತ್ ಹೋರಾಟ ಉದಾಹರಣೆ) ಈ ನೀತಿಗಳ ವಿರುದ್ಧ ಜನತೆ ಹೋರಾಟಗಳು ಬೆಳೆದಿವೆ. ಅಲ್ಲಿ ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಪ್ರಬಲವಾಗಿವೆ. ವಿದ್ಯುತ್ ಸಮಸ್ಯೆ ವಿರುದ್ಧ ಆರಂಭಿಸಿದ ನಿರ್ಣಾಯಕ ಹೋರಾಟದಲ್ಲಿ, ಕೊನೆಗೆ ಎಡ ಪಕ್ಷಗಳೊಂದಿಗೆ ಕಾಂಗ್ರೆಸ್ ಸಹ ಸೇರಲೇಬೇಕಾಗಿ ಬಂತು. ಜನರ ಸಮರಧೀರ ಹೋರಾಟ ಹಾಗೂ ಕೆಲವು ಕಾರ್ಯಕರ್ತರು ಪೋಲೀಸರ ಗುಂಡೇಟಿಗೆ ಎದೆಯೊಡ್ಡಿ ಹುತಾತ್ಮರಾದರು. ಆದರೆ ಎದೆಗುಂದಲಿಲ್ಲ. ಹೀಗೆ ವಿರೋಧ ಪಕ್ಷಗಳ ಬಲ, ಎಡಶಕ್ತಿಗಳು ಗಣನೀಯ ಪ್ರಭಾವ-ಸರಿಯಾದ ಹೋರಾಟದ ಶಕ್ತಿ - ನಾಯ್ಡು ನೀತಿಗಳಿಗೆ ಪ್ರತಿರೋಧ ತಂದಿದೆ.

ವಿರೋಧ ಪಕ್ಷಗಳ ನಿಶ್ಶಕ್ತಿ

ಆದರೆ ಇಲ್ಲಿ ಕೃಷ್ಣ ಹಂತಹಂತವಾಗಿ ಅಂತಹ ನೀತಿಗಳನ್ನು ಜಾರಿಗೊಳಿಸ ತೊಡಗಿದ್ದಾರೆ. ಜನರ ಅತೃಪ್ತಿ ತನ್ನ ವಿರುದ್ಧ ತಿರುಗದಂತೆ ಹೆಜ್ಜೆ ಇಡತೊಡಗಿದ್ದಾರೆ. ಆಗಾಗೆ ಸ್ವಲ್ಪ ಸ್ವಲ್ಪ ರಿಯಾಯಿತಿ ಪ್ರಕಟಿಸಿದ್ದಾರೆ. ಬಹಳ ಮುಖ್ಯವಾಗಿ ಜನ ಚಳುವಳಿ ಪ್ರಬಲವಾಗಿ ಬೆಳೆಸಲು ರಾಜ್ಯದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಶಕ್ತಿಯೂ ಸಾಲದು. ವಿಶೇಷವಾಗಿ ಇತರ ವಿರೋಧ ಪಕ್ಷಗಳು ವಿಫಲ ವಾಗಿವೆ. ಉದಾರೀಕರಣ, ಜಾಗತೀಕರಣದ ನೀತಿಗಳನ್ನು ಒಂದಿಲ್ಲ ಒಂದು ಬಗೆಯಲ್ಲಿ ಅವು ಅಂಗೀಕರಿಸಿವೆ. ಅಲ್ಲದೇ ನಿಶ್ಶಕ್ತವಾಗಿವೆ. ಜನತಾ ದಳದ ಬಣಗಳಲ್ಲಿ ಒಂದುಗೂಡುವ ಮಾತು ಮಾತ್ರ ನಿಂತಿಲ್ಲ. ಆದರೆ ಆಗಲಿಲ್ಲ. ವಿರೋಧ ಪಕ್ಷಗಳ ಈ ಸ್ಥಿತಿ,ಇದರ ಲಾಭ ಕೃಷ್ಣರಿಗಿದೆ.

ಹೀಗೇ ಸಾಗಲಾರದು

ಆದರೆ ಇವಾವುಗಳೂ ಕೃಷ್ಣರನ್ನು ಬಹುದೂರ ಕೊಂಡೊಯ್ಯಲಾರವು. ಈಗ ಜನ ಪ್ರತಿಭಟನೆ ಸಿಡಿಯುತ್ತಿದೆ. ಇಂತಹ ಸ್ಥಿತಿಯಲ್ಲಿ ಎಡ ಪ್ರಜಾಸತ್ತಾತ್ಮಕ ಧರ್ಮನಿರಪೇಕ್ಷ ಶಕ್ತಿಗಳು ಒಗ್ಗಟ್ಟಿನಿಂದ ಕಾರ್ಯವೆಸಗಬೇಕಿದೆ. ಅಂದಾಗ ಈ ಐಟಿ, ಬಿಟಿ, ವಿಶ್ವಬ್ಯಾಂಕ್‌ನ ನಿರ್ದೇಶನಗಳ ನಿಷ್ಠ, ಅನುಷ್ಠಾನಿಐಲು ದೊರೆಯ ಜನವಿರೋಧಿ ಆಡಳಿತಕ್ಕೆ ಪ್ರತಿರೋಧ ಒಡ್ಡಬಹುದು.

ಯುದ್ಧ ವಿರೋಧಿಸಿ ಎಲ್ಲೆಡೆ ಪ್ರತಿಭಟನೆ

"ಭಯೋತ್ಪಾದನೆಯ ಜನಕ ಅಮೆರಿಕಾ. ಅಮೆರಿಕಾ ಭಯೋತ್ಪಾದಕ ಬಿನ್ ಲ್ಯಾಡನ್, ತಾಲಿಬಾನ್‌ಗಳನ್ನು ಸೃಷ್ಟಿಸಿದವರ್‍ಯಾರು, ಅಮೆರಿಕವಲ್ಲದೆ ಇನ್ಯಾರು? ಯುದ್ಧ ಬೇಡ-ಶಾಂತಿ ಬೇಕು"ಎಂಬಿತ್ಯಾದಿ ಮುಗಿಲು ಮುಟ್ಟುವ ಘೋಷಣೆಗಳು ಬೆಂಗಳೂರಿನ ಪ್ರಮುಖ ಬೀದಿಗಳಲ್ಲಿ ಕೇಳಿಬಂದವು. ದೇಶದಾದ್ಯಂತ ಎಡಪಕ್ಷಗಳ ಕರೆಯ ಮೇರೆಗೆ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಬೆಂಗಳೂರಿನಲ್ಲಿ ಅಕ್ಟೋಬರ್ 12 ರಂದು ನಡೆಸಿದ ಜಂಟಿ ಪ್ರತಿಭಟನಾ ರ್‍ಯಾಲಿಯಲ್ಲಿ 500 ಕ್ಕೂ ಹೆಚ್ಚು ಕಾರ್ಯಕರ್ತರು ಅಮೆರಿಕಾದ ಯುದ್ಧಖೋರ ನೀತಿಗೆ ತಮ್ಮ ಆಕ್ರೋಶದ ಪ್ರತಿಭಟನೆಯನ್ನು ತೋರಿದರು.



ಮಂಗಳೂರಿನಲ್ಲಿ


ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದ ಬಳಿಯಿರುವ ಚಿಕ್ಕಲಾಲ್‌ಬಾಗ್‌ನಿಂದ ಹೊರಟ ಮೆರವಣಿಗೆ, ರೈಲ್ವೆ ಸ್ಟೇಷನ್, ಆನಂದರಾವ್ ಸರ್ಕಲ್, ಮಹಾರಾಣಿ ಕಾಲೇಜು ಮಾರ್ಗವಾಗಿ ಬಸವೇಶ್ವರ ಸರ್ಕಲ್ ತಲುಪಿದಾಗ ಅಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಯ್ತು. ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯರಾದ ಎಸ್.ಸೂರ್ಯನಾರಾಯಣ ರಾವ್, ಅಮೆರಿಕ ಸಾಮ್ರಾಜ್ಯಶಾಹಿಯ ಕರಾಳ ಚರಿತ್ರೆಯನ್ನು ಬಿಚ್ಚಿಟ್ಟರು. ಇರಾಕ್, ಲಿಬ್ಯಾ, ಗ್ರೆನಾಡಾ, ಗ್ವಾಟೆಮಾಲಾ, ಕ್ಯೂಬಾ, ಕಾಂಬೋಡಿಯಾ ಹೀಗೆ ಹತ್ತಾರು ದೇಶಗಳ ಮೇಲೆ ಬಾಂಬುಗಳ ಸುರಿಮಳೆಯನ್ನೇ ಸುರಿಸಿದ ಅಮೆರಿಕಾ, ಅಫಘಾನಿಸ್ತಾನದ ಅಮಾಯಕ ಜನರನ್ನು ಬಲಿ ತೆಗೆದುಕೊಳ್ಳುತ್ತಿದೆ. ಇದು ಇಲ್ಲಿಗೆ ನಿಲ್ಲುವುದಿಲ್ಲ. ಅಫಘಾನ್ ಯುದ್ಧ ಮುಗಿದ ನಂತರ ಇನ್ನೂ ಕೆಲವು ದೇಶಗಳನ್ನು 'ನೋಡಿಕೊಳ್ಳುವುದಾಗಿ' ಅಮೆರಿಕ ಮತ್ತು ಬ್ರಿಟನ್ ಬೆದರಿಕೆ ಹಾಕಿವೆ. ಇಂತಹ ಸಾಮ್ರಾಜ್ಯಶಾಹಿ ಯುದ್ಧಕ್ಕೆ ವಾಜಪೇಯಿ ಸರಕಾರ ಬೆಂಬಲ ನೀಡುತ್ತಿರುವುದು ಭಾರತೀಯರ ಗೌರವಕ್ಕೆ, ದೇಶದ ಸಾರ್ವಭೌಮತೆಗೆ ಕುಂದು ಎಂದು ಹೇಳಿದ ಸೂರಿ ಮುಸ್ಲಿಮರು ಮಾತ್ರ ಭಯೋತ್ಪಾದಕರು ಎಂದು ಬಿಂಬಿಸಿ, ರಾಜಕೀಯ ಲಾಭ ಪಡೆಯಲು ಬಿಜೆಪಿ ಹವಣಿಸುತ್ತಿದೆ. ಇದನ್ನು ಜನತೆ ಅರಿಯಬೇಕು ಎಂದು ಕರೆ ನೀಡಿದರು.


ತುಮಕೂರಿನಲ್ಲಿ

ಸಿಪಿಐ ವತಿಯಿಂದ ಮಾತನಾಡಿದ ರಾಜ್ಯ ಮಂಡಳಿ ಕಾರ್ಯದರ್ಶಿ ಎಂ.ಸಿ.ವೆಂಕಟರಾಮು, 'ಇಂದಿನ ಪರಿಸ್ಥಿತಿ, 40 ರ ದಶಕದ ಹಿಟ್ಲರ್ ಶಾಹಿಯನ್ನು ನೆನಪಿಸುತ್ತದೆ. ಅಂದು ಫ್ಯಾಸಿಸ್ಟ್ ಶಕ್ತಿಗಳು ನಡೆಸಿದ ಹಾನಿಯ ಪುನರಾವರ್ತನೆ ಆಗದಂತೆ ಜನತೆ ನೋಡಿಕೊಳ್ಳಬೇಕು' ಎಂದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಪ್ರಕಾಶ್ ಸ್ವಾಗತಿಸಿ ಸಿಪಿಐನ ನಾಯಕರಾದ ಜಯತೀರ್ಥ ವಂದನೆ ಸಲ್ಲಿಸಿದರು. ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್ .ನಾಗರಾಜ್, ಜಿ.ಸಿ.ಬಯ್ಯಾರೆಡ್ಡಿ, ಎಸ್.ವೈ.ಗುರುಶಾಂತ್ ಭಾಗವಹಿಸಿದ್ದರು.

ಜಂಟಿ ಪ್ರತಿಭಟನೆಗಳು ಮಂಗಳೂರು, ಗುಲ್ಬರ್ಗಾ, ಮೈಸೂರುಗಳಲ್ಲೂ ನಡೆದ ವರದಿಯಾಗಿವೆ. ಮಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ 300 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದು, ಸಿಪಿಐ(ಎಂ) ವತಿಯಿಂದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಬಿ.ಮಾಧವ,ಸಿಪಿಐ ನ ನಾಯಕ ಬಿ.ಕೆ.ಕೃಷ್ಣಪ್ಪ ಮಾತನಾಡಿದರು.


ಮಳವಳ್ಳಿಯಲ್ಲಿ ಮಾನವಸರಪಳಿ

ಗುಲ್ಬರ್ಗಾದ ಸೂಪರ್ ಮಾರ್ಕೆಟ್‌ನಲ್ಲಿ ನಡೆದ ಸಭೆಯಲ್ಲಿ 250 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ, ಸಿಪಿಐ ಮುಖಂಡರಾದ ಶಂಕರಶೆಟ್ಟಿ ಸಂಗಾವಿ ಮೊದಲಾದವರು ಮಾತನಾಡಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಕುತಂತ್ರವನ್ನು ಸೋಲಿಸಬೇಕೆಂದು ಕರೆ ನೀಡಿದರು.


ಹೊಸಪೇಟೆಯಲ್ಲಿ ಭೂತದಹನ


ಮೈಸೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ಕಾರ್ಯಕರ್ತರು ಭಾಗವಹಿಸಿದ್ದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಎಂ.ಎನ್.ಉಗ್ರಪ್ಪನವರು ಭಯೋತ್ಪಾದಕತೆ ಮತ್ತು ಸಾಮ್ರಾಜ್ಯಶಾಹಿ ಇವೆರಡರ ವಿರುದ್ಧವೂ ಹೋರಾಟ ನಡೆಸಬೇಕಾಗಿದೆ ಎಂದರು. ಮಳವಳ್ಳಿಯಲ್ಲಿ ಡಿವೈಎಫ್‌ಐ, ಎಸ್‌ಎಫ್‌ಐ ಕಾರ್ಯಕರ್ತರು ಮಾನವ ಸರಪಳಿ ರಚಿಸಿದರು.

ದೆಹಲಿಯಲ್ಲಿ ನಡೆದ ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್, ಸಿಪಿಐ ಕಾರ್ಯದರ್ಶಿ ಎ.ಬಿ.ಬರ್ಧನ್, ಫಾರ್ವರ್ಡ್‌ಬ್ಲಾಕ್ ಪ್ರಧಾನ ಕಾರ್ಯದರ್ಶಿ ದೇಬಬ್ರತಾ ಬಿಸ್ವಾಸ್, ಆರ್.ಎಸ್.ಪಿ. ಕಾರ್ಯದರ್ಶಿ ಮೊದಲಾದವರು ವಹಿಸಿದ್ದು, 'ಅಮೆರಿಕನ್ ಸೆಂಟರ್' ಮುಂದೆ ತೀವ್ರ ಪ್ರತಿಭಟನೆ ಸಲ್ಲಿಸಿದರು.

'ಜಗತ್ತಿನ ಬಹುತೇಕ ಎಲ್ಲಾ ದೇಶಗಳು, ಜನತೆ ಭಯೋತ್ಪಾದಕತೆ ಅಥವಾ ಆತಂಕವಾದವನ್ನು ಖಂಡಿಸಿದ್ದಾರೆ. ಆದರೆ ಆತಂಕವಾದಕ್ಕೆ ಯುದ್ಧ ಪರಿಹಾರವಲ್ಲ. ಬದಲಾಗಿ ವಿಶ್ವಸಂಸ್ಥೆ ಮತ್ತು ಇತರೆ ಅಂತರ್ರಾಷ್ಟ್ರೀಯ ವೇದಿಕೆಗಳ ಮೂಲಕ ಮೂಲೆಗುಂಪು ಮಾಡಬೇಕಾಗಿದೆ. ಆದರೆ ಅಮೆರಿಕಾವು ನ್ಯಾಟೋ ಕೂಟದ ಮೂಲಕ ಯುದ್ಧ ನಡೆಸುತ್ತಿದೆ. ದಕ್ಷಿಣ ಏಶ್ಯಾ ರಾಷ್ಟ್ರಗಳ ಮೇಲೆ ಇದು ತೀವ್ರ ಪರಿಣಾಮ ಬೀರಲಿದೆ' ಎಂದು ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು ಎಚ್ಚರಿಸಿದರು.


ಪ್ರಪಂಚದಲ್ಲೆಡೆ ಪ್ರತಿಭಟನೆ

ಅಫಘಾನಿಸ್ತಾನದಲ್ಲಿ ಅಮೇರಿಕಾದ ಧಾಳಿ ಆರಂಭವಾಗುತ್ತಲೇ ಜಗತ್ತಿನ ವಿವಿಧ ದೇಶಗಳಲ್ಲಿ ಪ್ರತಿಭಟನೆಗಳ ಸಾಗರವೇ ಉಕ್ಕಿದೆ. ಜಾರ್ಜ್ ಬುಷ್ ಕೃಪಾಪೋಷಿತ ಮಾಧ್ಯಮ ಪ್ರಚಾರಕರು, ಅಮೆರಿಕನ್ ಎಲ್ಲರೂ ಒಕ್ಕೊರಲಿನಿಂದ ಯುದ್ಧ ಬೆಂಬಲಿಸುತ್ತಿದ್ದಾರೆ' ಎಂದು ಬಡಾಯಿ ಕೊಚ್ಚಿದರೂ, ರಾಜಧಾನಿ ವಾಷಿಂಗಟನ್ ಒಂದರಲ್ಲೇ 25000 ಕ್ಕೂ ಅಧಿಕ ಜನ ಯುದ್ಧಬೇಡವೆಂದು ಘೋಷಣೆ ಹಾಕಿದರು.



8 ಮಿಲಿಯ ಅಫಘಾನ್ ನಿರಾಶ್ರಿತರಿಗೆ ಆಹಾರ ಬೇಕಾಗಿದೆ. ಯುದ್ಧ ಮತ್ತು ಭಯೋತ್ಪಾದೆ ಅಲ್ಲ ಎಂದು ಹೇಳಲು ಪೋಸ್ಟರ್‌ಗಳು ನ್ಯೂಜೆರ್ಸಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಣಿಸಿಕೊಂಡರೆ, ವರ್ಲ್ಡ್‌ಟ್ರೇಡ್ ಸೆಂಟರ್ ಇದ್ದ ನ್ಯೂಯಾರ್ಕಿನಲ್ಲಿ ಹಲವಾರು ಪ್ರತಿಭಟನೆಗಳು ನಡೆದಿವೆ.

ಯುದ್ಧದಲ್ಲಿ ಅಮೆರಿಕಾದ ಪಾಲುದಾರನಾದ ಇನ್ನೊಂದು ದೇಶ ಬ್ರಿಟನ್ ಅಲ್ಲಿ ಉಗ್ರ ಪ್ರತಿಭಟನೆಗಳು ನಡೆಯುತ್ತಿವೆ. ಹೆಸರಾಂತ ಸಾಹಿತಿಗಳು ಬುದ್ಧಿಜೀವಿಗಳು ದನಿ ಗೂಡಿಸುತ್ತಿದ್ದಾರೆ. 'ಸ್ನೇಹಿತರ ಕೂಟ' ಏರ್ಪಡಿಸಿದ ಒಂದು ಸಭೆಯಲ್ಲಿ ಬರೀ 2 ದಿನದ ನೋಟೀಸಿನಲ್ಲಿ 2000 ಮಂದಿ ಸೇರಿದ್ದು ಹೆಸರಾಂತ, ಸಂಸತ್ ಸದಸ್ಯರು, ಪತ್ರಿಕೋದ್ಯಮಿಗಳು ಭಾಗವಹಿಸಿದ್ದರು. ಭಯೋತ್ಪಾದಕ ಧಾಳಿಗೆ ತುತ್ತಾದ ಕಟ್ಟದ ಕುಸಿತದಿಂದ ದಾರುಣ ಮರಣ ಹೊಂದಿದ ಯುವಕನ ತಂದೆ ಆಡಿದ ಮಾತುಗಳು ಹೃದಯವಿದ್ದವರ ಮನ ಕಲಕುವಂತಿತ್ತು "ದಯವಿಟ್ಟು ಸತ್ತ ನನ್ನ ಮಗನ ಹೆಸರಿನಲ್ಲಿ ಯುದ್ಧ ಮಾಡಿ ಇನ್ನಷ್ಟು ಜನರನ್ನು ಸಾಯಿಸದಿರಿ' ಎಂದ ಕೇಳಿಕೊಂಡರು.



ಭಯೋತ್ಪಾದನೆ = ನ್ಯಾಟೋ+ ಸಿಐಎ ಈ ಬ್ಯಾನರ್‌ನ್ನು ಹೊತ್ತು ಪ್ರದರ್ಶನ ನಡೆಸಿದ ಮಹಿಳೆಯರು ಗ್ರೀಸ್ ದೇಶದ ಅಥೆನ್ಸ್ ಪಟ್ಟಣದವರು. ಅಲ್ಲಿನ ಕಮ್ಯುನಿಸ್ಟ್ ಪಕ್ಷ ಏರ್ಪಡಿಸಿದ ಪ್ರತಿಭಟನೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಹೀಗೆ ಜಗತ್ತಿನಾದ್ಯಂತ ಪ್ರತಿಭಟನೆಯ ಮಹಾಪೂರವೇ ಹರಿದುಬರುತ್ತಿದೆ.


ಶಾಂತಿ ಪಾರಿವಾಳ.... ಎದ್ದೇಳಿ

ಸಿನಿಮಾ

ಚಾಂದಿನಿ ಬಾರ್

ಮಹಿಳೆಯರ ಬದುಕಿನ ಒಂದು ದಾರುಣ ಮುಖ

ಕೆಸರಿನಲ್ಲಿ ಬದುಕಿದರೂ ಉತ್ತಮ ಬದುಕಿನ ಕಡೆಗೆ ತುಡಿಯುತ್ತಾ ತನ್ನ ಜೀವನವನ್ನೆಲ್ಲಾ ತೇಯ್ದ ಈ ಹೆಣ್ಣು ಜೀವದ ಎಲ್ಲಾ ಕನಸೂ ಹುಡಿಪುಡಿಯಾಗುವುದನ್ನು ಮನಮುಟ್ಟುವಂತೆ ಬಿಚ್ಚಿಡುತ್ತದೆ ಈ ಚಿತ್ರ.

"ಈಗ ಐಕ್ಯರಂಗದ ವಿಶೇಷ ಸಂಚಿಕೆಯ ಬಗ್ಗೆ ಸಂಪಾದಕೀಯ ಸಭೆ ನಡೆಸೋಣವೇ?" ಐಕ್ಯರಂಗ ಸಂಪಾದಕರಿಂದ ಮೀಟಿಂಗ್ ನೋಟಿಸ್ ಜಾರಿ. "ನಿನ್ನೆಯೇ ನಿಮಗೆ ಹೇಳಿದ್ದಂತೆ ನಾನು ಈಗ ಒಂದು ಕೆಲಸ ಮಾಡಬೇಕಾಗಿದೆ. ಮತ್ತೆ ಅದಕ್ಕೆ ಅವಕಾಶ ಸಿಗುವುದೇ ಇಲ್ಲ. ಮನ್ನಿಸಿ ಬಿಡಿ" ಎಂದು ನಾನು ಐಕ್ಯರಂಗ ಕಛೇರಿಯಿಂದ ಹೊರ ನಡೆದೆ. ಏನದು ಅಂತಹ ಕೆಲಸ? ಹೇಳುವುದು ಸ್ವಲ್ಪ ಕಷ್ಟದ ಕೆಲಸ. ಐಕ್ಯರಂಗದ ಸಂಪಾದಕೀಯ ಸಮಿತಿ ಸಭೆ ಬಿಟ್ಟು ನಾನೊಂದು ಸಿನಿಮಾ ನೋಡಬೇಕಾಗಿದೆ ಎಂದರೆ ಯಾರಾದರೂ ನಂಬುತ್ತಾರೆಯೆ? 'ಚಾಂದಿನಿ ಬಾರ್' ಸಿನಿಮಾವನ್ನು ನಾನು ನೋಡಿದ್ದು ಇಂತಹ ಹಿನ್ನೆಲೆಯಲ್ಲಿ. (ಹೆಚ್ಚು ಸಿನಿಮಾಗಳನ್ನು ನೋಡದ ನನಗೆ ಸಿನಿಮಾಗಳ ಕಡೆ ಎಳೆದದ್ದೇ 'ಐಕ್ಯರಂಗ' ಪತ್ರಿಕೆ ಎಂದರೂ ತಪ್ಪಿಲ್ಲಬಿಡಿ).

● ● ●

'ಚಾಂದಿನಿ ಬಾರ್' ಅತ್ಯಂತ ಹೀನಾಯ ಸ್ಥಿತಿಯಲ್ಲಿ ಬದುಕನ್ನು ಹೊರೆಯುವ ಮುಂಬೈ ನಗರದ ಮಹಿಳೆಯರ ಒಂದು ವಿಭಾಗದ ಕಣ್ಣೀರಿನ ಕಥೆ. ಅಲ್ಲಿ ಸುಮಾರು 1,50,000 ಮಹಿಳೆಯರು ಬಾರ್‌ಗಳಲ್ಲಿ ಕುಣಿದು (ನೃತ್ಯ ಮಾಡುವುದಲ್ಲ) ಜೀವನ ನಡೆಸುತ್ತಾರಂತೆ. ಅವರ ಬದುಕಿನ ವಾಸ್ತವ ಚಿತ್ರಣ ಈ ಚಿತ್ರ. ಬಾರ್‌ಗಳಲ್ಲಿ ಕುಣಿಯುವವರ ಚಿತ್ರ ಎಂದರೆ ಅಸಂಖ್ಯ ಅಶ್ಲೀಲ ಕುಣಿತಗಳು, ದೃಶ್ಯಗಳು, ಹಾಡುಗಳು, ಹೊಡೆದಾಟಗಳು ಇವುಗಳನ್ನು ನೋಡಲೆಂದೇ ಜನ ಮುಕುರಿ ಬೀಳುವುದು ಸಹಜ. ಆದರೆ ವಾಸ್ತವ ಮಾರ್ಗದ ಈ ಚಿತ್ರದಲ್ಲಿ ಒಂದೇ ಒಂದು ಹಾಡೂ ಇಲ್ಲ. ಬಾರ್‌ಗಳಲ್ಲಿ ಕುಣಿಯುವುದಕ್ಕೆ ಹಿನ್ನೆಲೆಯಾಗಿ ಬಸುವುದು ಇತರ ಹಿಂದಿ ಚಿತ್ರಗಳ ಹಾಡುಗಳ ತುಣುಕುಗಳು ಮಾತ್ರವೇ ಚಿತ್ರದ ಸಂಗೀತ.

ಉತ್ತರ ಪ್ರದೇಶದ ಸಣ್ಣ ಪಟ್ಟಣವೊಂದರಲ್ಲಿ ನಡೆದ ಕೋಮು ಗಲಭೆಯಲ್ಲಿ ತಂದೆ, ತಾಯಿಗಳಿಬ್ಬರನ್ನೂ ಕಳೆದುಕೊಂಡ ಮುಸ್ಲಿಂ ಯುವತಿಯೊಬ್ಬಳು ಅವಳ ಮಾವನ ಆಶ್ರಯದಲ್ಲಿ ಮುಂಬೈಗೆ ಬಂದು ಅವನ ಕುಡಿತಕ್ಕೆ ಹಣ ದೊರಕಿಸಲು ಬಾರ್‌ಗಳಲ್ಲಿ ಕುಣಿಯುವ



ವೃತ್ತಿಗೆ ನೂಕಲ್ಪಟ್ಟಳು. ಅವಳ ಮಾವನಿಂದಲೇ ಮಾನಭಂಗಕ್ಕೊಳಗಾಗಿ ಅವನಿಂದ ಬಿಡುಗಡೆಗೊಳ್ಳಲು ತಹತಹಿಸಿದಳು. ಮಾಫಿಯಾ ಗೂಂಡಾ ಅವಳ ಕಥೆ ಕೇಳಿ ಮದುವೆಯಾದಾಗ ಕೆಲಕಾಲ ಸುಖದ ಬದುಕೆಂಬ ಭ್ರಮೆ. ಎರಡು ಮಕ್ಕಳ ಜನನ.

ಆದರೆ ಪೋಲೀಸ್ ಎನ್‌ಕೌಂಟರ್ ಎಂಬ ಕೌರ್ಯಕ್ಕೆ ಗಂಡನ ಬಲಿ. ಗಂಡನಿಂದ ಸಾಲ ಪಡೆದ ರಾಜಕಾರಣಿ, ಗಂಡನ ಮಾಫಿಯಾ ಜಾಲದ ದೊರೆ ಇವರಿಂದ ಅವಳ ಬದುಕಿಗೆ ಸಹಾಯ ದೊರೆಯುವ ಬದಲಾಗಿ ಅಪಮಾನ, ವೇಶ್ಯಾವೃತ್ತಿಗೆ ನೂಕುವ ಪ್ರಯತ್ನ. ಇವುಗಳಿಂದಾಗಿ ನೊಂದು ಮತ್ತೆ ಬಾರ್‌ನಲ್ಲಿ ಕುಣಿಯುವ ಕೆಲಸದಿಂದ ಜೀವನ. ಇಬ್ಬರು ಮಕ್ಕಳನ್ನು ಓದಿಸಿ ಉತ್ತಮ ಬದುಕು ಸಾಗಿಸುವಂತೆ ಮಾಡುವ ಅದಮ್ಯ ಹಂಬಲ ಮತ್ತು ಅದಕ್ಕಾಗಿ ಜೀವನವನ್ನೇ ತೇಯ್ದಳು. ಆದರೆ ನಮ್ಮ ದೇಶದ ಇಂದಿನ ಕ್ರೌರ್ಯ ವ್ಯವಸ್ಥೆ ಬಿಡುವುದೇ? ಮಾಫಿಯಾ ಗೂಂಡಾನ ಮಗ ಒಳ್ಳೆಯ ಹುಡುಗನೆಂದು ನಂಬಲು ಸಾಧ್ಯವೇ? ನೆರೆಯ ಹುಡುಗರ ಜೊತೆಗೆ ಕ್ರಿಕೆಟ್ ಆಡುತ್ತಿದ್ದವನನ್ನು ಅದೇ ಬೀದಿಯ ಗೂಂಡಾಗಳ ಜೊತೆಗೆ ಜೈಲಿಗೆ ತಳ್ಳುತ್ತಾರೆ. ಬಿಡಿಸಿಕೊಂಡು ಬರಲು ಬೇಕಾದ ಅಪಾರಮೊತ್ತದ ಹಣಕ್ಕಾಗಿ ತಾಯಿ ವೇಶ್ಯಾವೃತ್ತಿಗೆ ಇಳಿಯುತ್ತಾಳೆ. ಮಗಳು ಕೂಡ ಓದು ಬಿಟ್ಟು ತಾಯಿಯಂತೆಯೇ ಬಾರ್‌ನಲ್ಲಿ ಕುಣಿಯುವ ವೃತ್ತಿಗೆ ಇಳಿಯುತ್ತಾಳೆ. ಇಷ್ಟೆಲ್ಲಾ ಆದರೂ ಕೇವಲ ಎರಡನೇ ದಿನದ ಜೈಲು ವಾಸದಲ್ಲಿ ಜೊತೆಯಲ್ಲಿದ್ದ ಗೂಂಡಾಗಳಿಂದ ಕ್ರೌರ್ಯಕ್ಕೊಳಗಾದ ಮಗ ತಾಯಿ ಹಣ ತೆತ್ತು ಜೈಲಿನಿಂದ ಹೊರಬಂದ ಕೂಡಲೇ ಆ ಗೂಂಡಾಗಳನ್ನು ತಾಯಿಯ ಮುಂದೆಯೇ ಕೊಲೆ ಮಾಡುತ್ತಾನೆ. **ಕೆಸರಿನಲ್ಲಿ ಬದುಕಿದರೂ ಉತ್ತಮ ಬದುಕಿನ ಕಡೆಗೆ ತುಡಿಯುತ್ತಾ ತನ್ನ ಜೀವನವನ್ನೆಲ್ಲಾ ತೇಯ್ದ ಈ ಹೆಣ್ಣು ಜೀವದ ಎಲ್ಲಾ ಕನಸೂ ಹುಡಿಪುಡಿಯಾಗುವುದನ್ನು ಮನಮುಟ್ಟುವಂತೆ ಬಿಚ್ಚಿಡುತ್ತದೆ ಈ ಚಿತ್ರ.**

ಹೆಣ್ಣಿನ ಬಾಳು ಸುಣ್ಣಾಗಿ ಕುದಿಯಲಿ
ದೀಪದೆಣ್ಣೆಯಾಗಿ ಉರಿಯಾಲಿ ಎಲೆಜೀವ
ಹೆಣ್ಣೆಂಬ ಜನುಮ ಕೊಡಬ್ಯಾಡ

ಎಂಬ ಜನಪದ ಗೀತೆ ರಾಜರ, ಪಾಳೆಯಗಾರರ ದಬ್ಬಾಳಿಕೆಯ ಯುಗಕ್ಕೆ ಮಾತ್ರವಲ್ಲ ಇಂದಿಗೂ ನಿಜ ಎಂಬುದನ್ನು ಬಿಂಬಿಸುತ್ತದೆ.

ಇಡೀ ಚಿತ್ರ ಮಧುರ್ ಬಂಡಾರ್ಕರ್‌ರಿಂದ ಮೊದಲಿನಿಂದ ಬಿಗಿಯಾಗಿ ನಿರ್ದೇಶಿಲ್ಪಟ್ಟಿದೆ. ಕೊನೆಯಲ್ಲಿ ಮಗ ಜೈಲಿಗೆ ತಳ್ಳಲ್ಪಡುವುದು,ಮಗಳು ಬಾರ್‌ನಲ್ಲಿ ಕುಣಿಯುವ ವೃತ್ತಿಗಿಳಿಯುವುದು, ತಾಯಿ ವೇಶ್ಯಾ ವೃತ್ತಿಗೆ ತಳ್ಳಲ್ಪಡುವುದು ಚಿತ್ರವನ್ನು ದುರಂತದೆಡೆಗೆ ತಳ್ಳಲೆಂದೇ ಅವಸರವಸರವಾಗಿ ಚಿತ್ರಿತವಾಗಿದೆ. ಚಿತ್ರದ ನಾಯಕಿ ಟಬುವಿನ ಅಭಿನಯ ಮನೋಜ್ಞವಾಗಿದೆ. ಎಲ್ಲರೂ ನೋಡಬೇಕಾದ ಚಿತ್ರ ಕೇವಲ ಎರಡೇ ವಾರ ಬೆಂಗಳೂರಿನ ಎರಡು ಚಿತ್ರಮಂದಿರಗಳಲ್ಲಿ ಮಾತ್ರ ನಡೆದು ತೆಗೆದು ಹಾಕಲ್ಪಟ್ಟಿದೆ. ಇನ್ನು ಬೇರೆ ಊರುಗಳಲ್ಲಿ ಈ ಚಿತ್ರ ಪ್ರದರ್ಶನವಾಗುವ ಯಾವ ಸಂಭವವೂ ಇಲ್ಲ. ಹೀಗೆ ಚಿತ್ರರಂಗದ ಲಾಭಕೋರ ಪಟ್ಟಭದ್ರ ಹಿತಗಳ ಒಳಸುಳಿಗಳಿಗೆ ಬಲಿಯಾದ ಮತ್ತೊಂದು ಒಳ್ಳೆಯ ಚಿತ್ರ 'ಚಾಂದಿನಿ ಬಾರ್'

• ಜಿ ಎನ್ ನಾಗರಾಜ್ ○

ಟಬೂ: ಸೂಕ್ಷ್ಮ ಸಂವೇದನೆಯ ಉತ್ತಮ ಕಲಾವಿದೆ



ಟಬೂ ಎಂಬ ಚಿತ್ರನಟಿಯನ್ನು ಪ್ರೇಕ್ಷಕರು ಗುರುತಿಸಲಾರಂಭಿಸಿದ್ದೇ 'ಮಾಚಿಸ್' ಚಿತ್ರದಲ್ಲಿ ನೀಡಿದ ಅದ್ಭುತ ಅಭಿನಯಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿದ ಮೇಲೆ. ಅಂದಿನಿಂದ ಈಕೆಗೆ ಪ್ರಶಸ್ತಿಗಳ ಸುರಿಮಳೆಯೇ ಸುರಿದಿದೆ. ನಟನೆಗಾಗಿ ಅಪಾರ ಮೆಚ್ಚುಗೆಯನ್ನು ಗಳಿಸಿದ್ದಾಳೆ. ವಿರಾಸತ್, ಹಮ್ ಸಾಥ್ ಸಾಥ್ ಹೈ, ಕಾಲಾಪಾನಿ, ಬೀವಿ ನಂ. 1 ಮೊದಲಾದ ಅಪ್ಪಟ ವ್ಯಾಪಾರಿ ಚಿತ್ರಗಳಲ್ಲಿಯೂ ಉತ್ತಮ ನಟನೆಗಾಗಿ ಮೆಚ್ಚುಗೆ ಗಳಿಸಿದ ಈ ನಟಿ ಅರೆ ಬೆತ್ತಲೆ ಕುಣಿಯುವ ಪಾತ್ರಗಳಿಂದ ನೃತ್ಯಗಳಿಂದ ದೂರವಿರುವಾಕೆ. 2000 ಇಸ್ವಿಯಲ್ಲಿ ಬಿಜೆಪಿಯ ಕುತ್ಸಿತ ರಾಜಕೀಯವಿಲ್ಲದೇ ಹೋಗಿದ್ದರೆ 'ಅಸ್ತಿತ್ವ' ಚಿತ್ರದಲ್ಲಿಯ ಪ್ರೌಢ ಅಭಿನಯಕ್ಕಾಗಿ ಮತ್ತೆ ರಾಷ್ಟ್ರ ಪ್ರಶಸ್ತಿ ದೊರಕಬೇಕಾಗಿತ್ತು. ಆಕೆ ಮುಸ್ಲಿಂ ಎಂಬ ಕಾರಣಕ್ಕಾಗಿ 'ಅಸ್ತಿತ್ವ' ಚಿತ್ರದ ಆಕೆಯ ಪಾತ್ರ ಹಿಂದೂ ಸಾಂಪ್ರಾದಾಯಿಕ ಮೌಲ್ಯಗಳ ವಿರುದ್ಧ ಎಂಬ ಕಾರಣಕ್ಕಾಗಿ ಸಂಘ ಪರಿವಾರ ಈ ಪ್ರಶಸ್ತಿಯನ್ನು ವಂಚಿಸಿತು. ಈಗ ಮತ್ತೆ ಚಾಂದಿನಿಬಾರ್ ಚಿತ್ರದ ನಟನೆಗಾಗಿ ಪ್ರಶಸ್ತಿ ನೀಡಬೇಕು ಎಂಬುದು ಎಲ್ಲರ ಅಂಬೋಣ.

ತುಳಿದು ತಿನ್ನುವ ಮದ್ದಾನೆ ಬರುತ್ತಲಿದೆ

ಮದವೇರಿದ ಮದ್ದಾನೆ ಬರುತ್ತಿದೆ
ಮದವೇರಿದ ಬಂಡವಾಳಶಾಹಿ
ಮದ್ದಾನೆ ಬರುತಿದೆ
ಮುದ ನೀಡದಿರಿ ಅದಕೆ.

ಕದವ ತಟ್ಟಿ ಗುದಾಮು ಹೊಕ್ಕು
ನಮ್ಮ ನಿಮ್ಮೆಲ್ಲರ ತುಳಿಯಲು
ಮದ್ದಾನೆ ಬರುತಿದೆ. ಮದವೇರಿದೆ
ಮುದ ನೀಡದಿರಿ ಅದಕೆ

ಅಧಿಕಾರದಲ್ಲಿರುವ ಮಾವುತಗೆ
ಅಂಕುಶ ಹೇರದೆ ಹಿಂಜರಿದಾಗ
ಸಿಕ್ಕವರನ್ನು ತುಳಿದು ತಿನ್ನಲು
ಮದವೇರಿದ ಮದ್ದಾನೆ ಬರುತಿದೆ
ಮುದ ನೀಡದಿರಿ ಅದಕೆ.

ನಿರುದ್ಯೋಗ ಹುಟ್ಟಿಸುವ
ಉದ್ಯೋಗ ಕಸಿಯುವ, ಇರುವುದನೆಲ್ಲಾ
ಕಬಳಿಸುವ, ಸಾಮ್ರಾಜ್ಯಶಾಹಿ ಎಂಬ
ಮದವೇರಿದ ಮದ್ದಾನೆ ಬರುತಿದೆ
ಮುದ ನೀಡದಿರಿ ಅದಕೆ.

ಅಣುಬಾಂಬಿನ ಅಬ್ಬರದ ಮದ್ದಾನೆ
ಸಿರಿವಂತನೆಂಬ ಕೊಬ್ಬಿದ ಮದ್ದಾನೆ
ಬಡವರ ನುಂಗಲು
ಅರಿಯದವರ ಇರಿಯಲು
ಮದವೇರಿದ ಮದ್ದಾನೆ ಬರುತಿದೆ
ಮುದ ನೀಡದಿರಿ ತದುಕಿ ಓಡಿಸಿರಿ.

ಶ್ರೀಧರ ಕುಲಕರ್ಣಿ
ವಿಜಾಪುರ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH